# 1 ವರ್ಣನಾವಿಲಾಸ

| | | | | |
|---|---|---|---|---|
| ಘಟಕ 1 | : | ವರ್ಣನಾವಿಲಾಸ | | |
| ಪಾಠಭಾಗಗಳು | : | 1) ಸುಗ್ಗಿ ಬರುತಿದೆ | – | ಕುವೆಂಪು |
| | | 2) ಕಡಲ ಒಡಲು | – | ರಹಮತ್ ತರೀಕೆರೆ |
| | | 3) ಇದು ಬರಿ ಬೆಳಗಲ್ಲೋ ಅಣ್ಣಾ | – | ಪ್ರಭುಶಂಕರ |
| ಸಮಯ | : | 30 ಪಿರೇಡುಗಳು | | |

## ಕಲಿಕಾ ಸಾಮಗ್ರಿಗಳು

- ಪಠ್ಯ ಪುಸ್ತಕ
- ಅಡಕ ಮುದ್ರಿಕೆ
- ವೀಡಿಯೋ ಚಿತ್ರಗಳು (ಡಿ.ವಿ.ಡಿ)
- ಪ್ರಾದೇಶಿಕ ಸಂಪನ್ಮೂಲಗಳು
- ಪೂರಕ ಗ್ರಂಥಗಳು

## ಮೌಲ್ಯಗಳು ಹಾಗೂ ಮನೋಭಾವಗಳು

- ಗದ್ಯ, ಪದ್ಯಗಳಲ್ಲಿ ಅಭಿವ್ಯಕ್ತವಾಗಿರುವ ವರ್ಣನೆ/ವಿವರಣೆಯನ್ನು ಓದಿ ಆಸ್ವಾದಿಸುವ ಮನೋಭಾವ.
- ತಾರ್ಕಿಕ ಮನೋಭಾವ.
- ವಿಮರ್ಶಾತ್ಮಕ ರಚನೆಗಳನ್ನು ಓದುವ ಹಾಗೂ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವ ಮನೋಭಾವ.
- ಕವಿತಾಗೋಷ್ಠಿ–ಕಥಾಗೋಷ್ಠಿ ಮುಂತಾದ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವ ಆಸಕ್ತಿಯನ್ನು ಬೆಳೆಸುವುದು.
- ಸೃಜನಶೀಲ ರಚನೆಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವ

**ಮುನ್ನುಡಿ:**

ಸಾಹಿತಿಯ ಸೃಜನಶೀಲ ಪ್ರತಿಭೆ ಕಲ್ಪನಾವಿಲಾಸದಲ್ಲಿ ತೊಡಗಿದಾಗ ವರ್ಣನೆಯ ವೈಖರಿಯೊಂದಿಗೆ ಸಾಹಿತ್ಯದ ಸೃಷ್ಟಿಯಾಗುತ್ತದೆ. ಪದ್ಯವಾಗಿರಲಿ, ಗದ್ಯವಾಗಿರಲಿ ಅದು ವರ್ಣನಾವಿಲಸಿತವಾಗಿದ್ದರೆ ಸೃಹದಯರನ್ನು ಬೇಗನೆ ಆಕರ್ಷಿಸುತ್ತದೆ. ಸಂಸ್ಕೃತಕ್ಕೆ ಮಾತ್ರವಲ್ಲ, ಸಮಸ್ತ ಭರತಖಂಡಕ್ಕೆ  ಆದಿಕವಿಯೆಂದು ಪೂಜ್ಯನಾದ ವಾಲ್ಮಿಕಿ, ಕವಿಕುಲಗುರುವೆಂದು ಮಾನ್ಯನಾದ ಕಾಳಿದಾಸ, ಕನ್ನಡದ ಆದಿಕವಿ ಪಂಪ ಇವರ ಕೃತಿಗಳಿಂದ ಮೊದಲ್ಗೊಂಡು ಸದ್ಯ ಹೊರಬರುತ್ತಿರುವ ನವೀನ ಕೃತಿಗಳಲ್ಲಿಯೂ ವರ್ಣನೆ ಮೇಳೈಸಿದೆ. ಪ್ರಕೃತಿಯ ಸೊಬಗು, ವರ್ಷಧಾರೆ, ಕಡಲು, ಕಲೆ, ಕಲಾವಿದ, ವ್ಯಕ್ತಿ ಹೀಗೆ ಕೃತಿಯ ವಸ್ತು ಯಾವುದೇ ಆಗಿರಲಿ ಅಲ್ಲೆಲ್ಲಾ ವರ್ಣನೆಯ ವಿಲಾಸವಿದೆ. ಅಂತಹ ಕೃತಿಗಳನ್ನು ಓದಿ ಆಸ್ವಾದಿಸುವುದರಲ್ಲಿ ಆನಂದವಿದೆ. ರಸಾಸ್ವಾದನೆಯ ಹಿತವಿದೆ. ಈ ರೀತಿಯ ಸಾಹಿತ್ಯ ಕೃತಿಗಳನ್ನು ಓದುವ ಆಸ್ವಾದಿಸುವ ಮನೋಭಾವವನ್ನು ಬೆಳೆಸುವುದರ ಜೊತೆಗೆ  ಸೃಜನಶೀಲ ರಚನೆಗಳು ಸಾಧ್ಯವಾಗುವಂತೆ ಈ ಘಟಕದಲ್ಲಿ ಪಾಠಗಳನ್ನು ಅಳವಡಿಸಲಾಗಿದೆ.

ಈ ಘಟಕದಲ್ಲಿ ಒಟ್ಟು ಮೂರು ಪಾಠಗಳಿವೆ. ಆರಂಭದಲ್ಲಿ ಬಂದಿರುವ 'ಸುಗ್ಗಿ ಬರುತಿದೆ' ಕವಿತೆಯಲ್ಲಿ ಸುಗ್ಗಿಯ ಆಗಮನದಿಂದ ಪ್ರಕೃತಿಯಲ್ಲಾದ ಬದಲಾವಣೆಯು ವರ್ಣನಾತ್ಮಕವಾಗಿ ಅಭಿವ್ಯಕ್ತಗೊಂಡಿದೆ. ಕವಿತೆಯ ಭಾಷೆ, ಶೈಲಿ ಜೊತೆಗೆ ವರ್ಣನಾವೈಖರಿಯು ಮನಸೆಳೆಯುತ್ತದೆ. ಕವಿತೆಯ ಆಸ್ವಾದನೆಯೊಂದಿಗೆ ವಿದ್ಯಾರ್ಥಿಗಳಲ್ಲಿ ರಚನೆಗಳಿಗೆ ಪ್ರೇರಣೆಯನ್ನು ನೀಡಲು ಈ ಪಾಠಭಾಗದ ಮೂಲಕ ಸಾಧ್ಯವಾಗಬೇಕು. ಪುಸ್ತಕದ ಓದುವಿಕೆಗಿಂತ, ಭಾಷಣದ ಆಲಿಸುವಿಕೆಗಿಂತ ಕಣ್ಣಾರೆ ಕಂಡ ದೃಶ್ಯಗಳನ್ನು ವರ್ಣಿಸುವುದು ವಿಶೇಷವಾದುದು. ಅಂತಹ ಒಂದು ಪ್ರಯತ್ನವನ್ನು ರಹಮತ್ ತರೀಕೆರೆಯವರ ಪ್ರವಾಸ ಕಥನದಿಂದ ಆಯ್ದ 'ಕಡಲು ಒಡಲು' ಕಥನ ಭಾಗದಲ್ಲಿ ಕಾಣಬಹುದು. ಲೇಖಕರು ತಾವು ಕಂಡುಂಡ ಅನುಭವಗಳನ್ನು ವರ್ಣನಾತ್ಮಕವಾಗಿ ಅಭಿವ್ಯಕ್ತಿಸುವ ಬಗೆ, ಭಾಷೆಯ ಪ್ರಬುದ್ಧತೆ, ಕಥನಭಾಗದ ಗದ್ಯದ ಸೌಂದರ್ಯ ಇವೇ ಮೊದಲಾದವುಗಳನ್ನು ವಿದ್ಯಾರ್ಥಿಗಳು ಗುರುತಿಸಿಕೊಳ್ಳುವತ್ತ ಅಧ್ಯಾಪಕರು ಗಮನಹರಿಸಬೇಕು. ಪದ್ಯದ ಜೊತೆಗೆ ಗದ್ಯವನ್ನು ಓದಿ ಆಸ್ವಾದಿಸುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಮೂಡಿಬರುವಂತೆ ಮಾಡಲು ಈ ಪಾಠ ನೆರವಾಗಬಲ್ಲದು.

ಘಟಕದ ಮೂರನೆಯ ಪಾಠವಾಗಿ ಬಂದಿರುವ 'ಇದು ಬರಿ ಬೆಳಗಲ್ಲೋ ಅಣ್ಣಾ' ಬೇಂದ್ರೆಯವರ 'ಬೆಳಗು' ಕವನದ ರಸವಿಮರ್ಶೆಯಾಗಿದೆ. ಕವಿತೆಯನ್ನು ಸೂಕ್ಷ್ಮವಾಗಿ ಓದಿ ಅದರ ಭಾವತರಂಗಗಳನ್ನು ಗುರುತಿಸಿ ನಿರೂಪಿಸಿದ ಬಗೆಯನ್ನು ಇಲ್ಲಿ ಕಾಣಬಹುದು. ವಿಮರ್ಶೆಯ ಸ್ವರೂಪವನ್ನು ಸ್ಥೂಲವಾಗಿ ಪರಿಚಯಿಸುವುದರೊಂದಿಗೆ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ವಿಮರ್ಶೆಯ ಸಾಮರ್ಥ್ಯವನ್ನು ಬೆಳೆಸುವಲ್ಲಿ ಈ ಪಾಠವು ನೆರವಾಗುವುದು.

# Unit Frame

**ಘಟಕ 1 : ವರ್ಣನಾವಿಲಾಸ** **ಸಮಯ : 30 ಪಿರೇಡುಗಳು**

**ಕಲಿಕಾ ಸಾಧನೆಗಳು :**

- ಹೊಸಗನ್ನಡ ಕಾಲಘಟ್ಟದ ನವೋದಯ ಸಾಹಿತ್ಯ ರಚನೆಗಳನ್ನು ಓದಿ ವಿಶ್ಲೇಷಿಸಿ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತ ರೂಪದಲ್ಲಿ ಮಂಡಿಸುವುದು.
- ಕವಿತೆ, ಕಾವ್ಯಗಳಲ್ಲಿ ಮೂಡಿಬಂದಿರುವ ವರ್ಣನೆಗಳನ್ನು ಓದಿ ಆಸ್ವಾದಿಸಿ, ಆಸ್ವಾದನ ಟಿಪ್ಪಣಿ, ವಿಮರ್ಶಾತ್ಮಕ ಲೇಖನಗಳನ್ನು ತಯಾರಿಸುವುದು.
- ಓದಿದ ಗದ್ಯ ಪದ್ಯ ಕೃತಿಗಳ ವಸ್ತು, ಭಾಷೆ, ಶೈಲಿ ಮೊದಲಾದವುಗಳ ವೈವಿಧ್ಯಗಳನ್ನು ಗ್ರಹಿಸಿಕೊಂಡು ಬಹುಮುಖ ರಚನಾ ಸಾಮರ್ಥ್ಯವನ್ನು ಗಳಿಸುವುದು.
- ಪೂರಕ ಗ್ರಂಥಗಳು, ಇಂಟರ್‌ನೆಟ್ ಮೊದಲಾದವುಗಳಿಂದ ಮಾಹಿತಿ ಸಂಗ್ರಹಿಸಿ ಸ್ವರಚನೆಗೆ ಬೇಕಾದ ಭಾಷಾ ನೈಪುಣ್ಯವನ್ನು ಆರ್ಜಿಸಿಕೊಳ್ಳುವುದು.

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ವರ್ಣನೆಯೇ ಪ್ರಧಾನವಾಗಿರುವ ಅನೇಕ ರಚನೆಗಳು ಕನ್ನಡ ಸಾಹಿತ್ಯದಲ್ಲಿವೆ. | • ವರ್ಣನೆಯು ಪ್ರಧಾನವಾಗಿರುವ ಕವಿತೆಗಳನ್ನು ಈ ಹಿಂದಿನ ತರಗತಿಗಳಲ್ಲಿ ಓದಿರುವುದನ್ನು ನೆನಪಿಸಿಕೊಳ್ಳುವುದು. ಒಂದೆರಡು ಪದ್ಯಗಳನ್ನು ವಿದ್ಯಾರ್ಥಿಗಳು ಮಂಡಿಸುವುದು ಅಧ್ಯಾಪಕರು ಧ್ವನಿಸುರುಳಿಯನ್ನು ಕೇಳಿಸುವುದು.<br>• ವಿದ್ಯಾರ್ಥಿಗಳಲ್ಲಿ ಪಾಠಭಾಗವನ್ನು ಓದಿಸುವುದು. ಒಂದೊಂದು ಗುಂಪಾಗಿ ಕುಳಿತುಕೊಂಡು ತಾವು ಓದಿದ ಭಾಗಗಳಲ್ಲಿ ವ್ಯಕ್ತವಾಗಿರುವ ವರ್ಣನೆಯ ವೈಖರಿಯನ್ನು ಗಮನಿಸುವುದು, ಚರ್ಚಿಸುವುದು. | • ವರ್ಣನೆಯ ಸೌಂದರ್ಯವನ್ನು ಗುರುತಿಸಿ ವ್ಯಾಖ್ಯಾನಿಸುತ್ತಾರೆ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
| --- | --- | --- |
| • ಪ್ರಕೃತಿಯ ಸೌಂದರ್ಯವನ್ನು ಕವಿಯು ಭಾಷೆಯ ಮೂಲಕ ಅಭಿವ್ಯಕ್ತಪಡಿಸುವಾಗ ವರ್ಣನೆ ರೂಪುಗೊಳ್ಳುತ್ತದೆ.<br><br>• ಪ್ರಾಸ, ಅಲಂಕಾರಗಳು ಕವಿತೆಯ ಸೌಂದರ್ಯವನ್ನು ಹೆಚ್ಚಿಸುತ್ತವೆ. | • ಚರ್ಚೆಯಲ್ಲಿ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಟಿಪ್ಪಣಿ ಬರೆಯುವುದು.<br>• ಕಾವ್ಯ, ಕವಿತೆಗಳಲ್ಲಿ ಮಾತ್ರವಲ್ಲ ಗದ್ಯರಚನೆಗಳಲ್ಲಿಯೂ ಈ ರೀತಿಯ ವರ್ಣನೆ ಕಾಣಬಹುದೇ? ವರ್ಣನಾತ್ಮಕ ಗದ್ಯ ರಚನೆಗಳಿವೆಯೇ?<br>• ವಿದ್ಯಾರ್ಥಿಗಳು ಕೃತಿಗಳನ್ನು ಓದಿ ಸಾರಾಂಶ ಸಂಗ್ರಹಿಸುತ್ತಾರೆ.<br>• ಅಧ್ಯಾಪಕರು ಮಾದರಿಯಾಗಿ ಕೆಲವು ಉದಾಹರಣೆಗಳನ್ನು ಹೇಳುವುದು.<br>• ಕಾವ್ಯಭಾಗದ/ಕವಿತೆಯನ್ನು ಓದುವುದು ಹಾಡುವುದು<br>• ಕಾವ್ಯದಲ್ಲಿ ಕವಿತೆಯಲ್ಲಿ ಬಂದಿರುವ ವರ್ಣನೆಯ ವೈಖರಿಯನ್ನು ಆಸ್ವಾದಿಸುವುದು.<br>• ಕವಿತೆಯಲ್ಲಿ ಪ್ರಯೋಗವಾಗಿರುವ ಭಾಷಾ ಸೌಂದರ್ಯವನ್ನು ಗುರುತಿಸುವುದು, ಪ್ರಾಸ, ಅಲಂಕಾರ ಮೊದಲಾದವುಗಳ ಔಚಿತ್ಯದ ಕುರಿತಾದ ವ್ಯಾಖ್ಯಾನ.<br>• ಕವಿತೆಯನ್ನು ಓದಿ, ಆಸ್ವಾದಿಸಿ ಟಿಪ್ಪಣಿ ಬರೆಯುವುದು.<br>• ಸಂಸ್ಕೃತ–ತದ್ಭವಗಳನ್ನು ತಿಳಿಯುವುದು.<br>• ಕವಿತಾ ರಚನ ಕಮ್ಮಟವನ್ನು ಏರ್ಪಡಿಸುವುದು (ಗುಂಪಿನಲ್ಲಿಯೊ ವೈಯಕ್ತಿಕವಾಗಿಯೋ ಬರೆದುದನ್ನು ಮಂಡಿಸಿ, ಪರಿಷ್ಕರಿಸಿ ಪುಸ್ತಕ ರೂಪದಲ್ಲಿ ಹೊರತರುವುದು). | • ಚರ್ಚಾಗೋಷ್ಠಿಯಲ್ಲಿ ಸಕ್ರೀಯವಾಗಿ ಭಾಗವಹಿಸುವ ಸಾಮರ್ಥ್ಯವನ್ನು ಹೊಂದುತ್ತಾರೆ.<br><br>• ಪ್ರಾಸ, ಅಲಂಕಾರ ಮುಂತಾದ ಕವಿತೆಯ ಭಾಷಾ ವಿಶೇಷಗಳನ್ನು ಗುರುತಿಸಿ ಅಭಿಪ್ರಾಯಗಳನ್ನು ಪ್ರಕಟಿಸುತ್ತಾರೆ.<br>• ಸೃಜನಶೀಲ ರಚನೆಗಳಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುತ್ತಾರೆ.<br><br>• ಕವಿತೆಯನ್ನು ಓದಿ ಆಸ್ವಾದಿಸಿ ಟಿಪ್ಪಣಿ ಬರೆಯುತ್ತಾರೆ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
| --- | --- | --- |
| • ಪದ್ಯಗಳಲ್ಲದೆ ಗದ್ಯಗಳಲ್ಲಿಯೂ ವರ್ಣನೆಯ ಭಾಗಗಳಿವೆ. | • ಕತೆ, ಕಾದಂಬರಿ, ಪ್ರವಾಸ ಕಥನ ಮೊದಲಾದ ಗದ್ಯ ಸಾಹಿತ್ಯ ರಚನೆಗಳಲ್ಲಿ ವರ್ಣನೆಯ ಭಾಗಗಳಿವೆ. ಅಂತಹವುಗಳನ್ನು ನೆನಪಿಸಿ ಹೇಳುವುದು. ಒಂದೆರಡು ದೃಷ್ಟಾಂತಗಳ ಮೂಲಕ ವಿದ್ಯಾರ್ಥಿಗಳು ಮಂಡಿಸುವುದು. ದಾಖಲಿಸುವುದು.<br>• ಪಾಠಭಾಗದ ಆಶಯಗಳನ್ನು ಗ್ರಹಿಸಿಕೊಂಡು ಅಭಿಪ್ರಾಯಗಳನ್ನು ಪ್ರಕಟಿಸುವುದು.<br>• ಪ್ರವಾಸ ಕಥನದ ಸ್ವರೂಪ, ಭಾಷೆ ಶೈಲಿ ಮೊದಲಾದವುಗಳನ್ನು ಗುರುತಿಸಿಕೊಳ್ಳುವುದು–ವೈಶಿಷ್ಟ್ಯಗಳನ್ನು ದಾಖಲಿಸುವುದು. ಟಿಪ್ಪಣಿ ತಯಾರಿಸುವುದು.<br>• ಪಾಠಭಾಗದಲ್ಲಿ ಬಂದಿರುವ ಪ್ರವಾಸ ಕಥನವಲ್ಲದೆ ಇನ್ನಿತರ ಪ್ರವಾಸ ಕಥನಗಳ ಭಾಗಗಳನ್ನು ಓದುವುದು, ತಾವು ಸಂದರ್ಶಿಸಿದ ಪ್ರೇಕ್ಷಣೀಯ ಸ್ಥಳವೊಂದರ ಕುರಿತಾಗಿರುವ ಅನುಭವಗಳನ್ನು ಕಥನ ರೂಪದಲ್ಲಿ ಬರೆಯುವುದು. | • ಗದ್ಯದಲ್ಲಿ ವರ್ಣನೆಯ ಸೊಗಸನ್ನು ಗುರುತಿಸಿ ವ್ಯಾಖ್ಯಾನಿಸುತ್ತಾರೆ.<br>• ತಾವು ಸಂದರ್ಶಿಸಿದ ಪ್ರೇಕ್ಷಣೀಯ ಸ್ಥಳದಲ್ಲಿ ಪಡೆದುಕೊಂಡ ಅನುಭವಗಳನ್ನು ವರ್ಣನಾತ್ಮಕವಾಗಿ ಹೇಳುವ ಸಾಮರ್ಥ್ಯವನ್ನು ಗಳಿಸುತ್ತಾರೆ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಪ್ರಕೃತಿಯ ಸೌಂದರ್ಯಾನುಭೂತಿಯ ಭಾವತರಂಗಗಳನ್ನು ಭಾಷಾ ಸೌಂದರ್ಯವನ್ನು ಓದಿ ಆಸ್ವಾದಿಸಿ ಎಳೆಎಳೆಯವಾಗಿ ಹೇಳಿದಾಗ ಅದು ರಸವಿಮರ್ಶೆಯಾಗುತ್ತದೆ. | • 'ಬೆಳಗು' ಕವನವನ್ನು ಓದುವುದು, ಧ್ವನಿ ಮುದ್ರಿಕೆಯಲ್ಲಿ ಆಲಿಸುವುದು. 'ಬೆಳಗು' ಕವನದ ವಿಮರ್ಶೆಯನ್ನು ಒಳಗೊಂಡ ಭಾಗವನ್ನು ಓದುವುದು ಸೂರ್ಯೋದಯದ (ಬೆಳಗು) ಸೌಂದರ್ಯವನ್ನು ಕವನದಲ್ಲಿ ವರ್ಣಿಸಿದ ರೀತಿ, ಚಮತ್ಕಾರವನ್ನು ತಿಳಿದುಕೊಳ್ಳುವುದು. ಇವುಗಳನ್ನು ಗುರುತಿಸಿಕೊಂಡು ದಾಖಲಿಸುವುದು.<br>• 'ಇದು ಬರಿ ಬೆಳಗಲ್ಲೋ ಅಣ್ಣಾ' ಕವಿತೆಯಲ್ಲಿ ಬಂದ ಈ ಸಾಲಿನ ಸ್ವಾರಸ್ಯವನ್ನು ಗುರುತಿಸುವುದು.<br>• ವಿಮರ್ಶೆಯ ಭಾಷೆ ಶೈಲಿ ಮೊದಲಾದವುಗಳ ವಿವರಣೆಯ ಭಾಗವನ್ನು ಓದಿ, ಭಾಷೆ, ಶೈಲಿಯ ಲಕ್ಷಣಗಳನ್ನು ದಾಖಲಿಸುವುದು. ಇನ್ನಿತರ ವಿಮರ್ಶಾ ಲೇಖನಗಳನ್ನು ಓದುವುದು. ಕವಿತೆ/ಕೃತಿ ವಿಮರ್ಶೆಯ ರೀತಿಯನ್ನು ಗುರುತಿಸಿಕೊಂಡು ವಿಮರ್ಶಾತ್ಮಕ ಲೇಖನ ಬರೆಯುವುದು. | • ವರ್ಣನಾ ಪ್ರಧಾನವಾಗಿರುವ ಕವಿತೆಗಳನ್ನು ಓದುವ, ಆಸ್ವಾದಿಸುವ ಮತ್ತು ವಿಮರ್ಶಿಸುವ ಸಾಮರ್ಥ್ಯವನ್ನು ಗಳಿಸುತ್ತಾರೆ. |

# ಸುಗ್ಗಿ ಬರುತಿದೆ

**ಪ್ರವೇಶ**

ಹೊಸಗನ್ನಡ ಸಾಹಿತ್ಯದಲ್ಲಿ ಬಹಳ ಸಮೃದ್ಧವಾದ ಬೆಳೆ ಬಂದದ್ದು ಕಾವ್ಯಕ್ಷೇತ್ರದಲ್ಲಿ ಎನ್ನಬಹುದು. ಕನ್ನಡ ನವೋದಯ ಕಾಲದ ಅತ್ಯಂತ ಸತ್ವಶಾಲಿ ಕವನಗಳನ್ನು ಬರೆದವರಲ್ಲಿ ಕುವೆಂಪುರವರು ಒಬ್ಬರು. ಇವರು 'ಪ್ರಕೃತಿ ಕವಿ' ಎಂಬ ಹೆಸರಿಗೆ ಪಾತ್ರರಾದವರು. ಪ್ರಕೃತಿಯ ರಮಣೀಯ ದೃಶ್ಯಗಳಿಗೆ ಮನಸೋತು ವರ್ಣನೆ ಮಾಡುವುದು ಇವರ ವಿಶೇಷತೆಯಾಗಿದೆ.

'ಸುಗ್ಗಿ ಬರುತಿದೆ' ಎಂಬ ಕವನವನ್ನು ಆರಂಭಿಸುವ ಮೊದಲು 'ಸುಗ್ಗಿಯಕಾಲ' ಎಂದರೆ 'ವಸಂತ ಕಾಲ' ಎಂದು ಅಧ್ಯಾಪಕರು ಸೂಚಿಸುವುದು. ಬಳಿಕ ಸುಗ್ಗಿಯಕಾಲದ ಕುರಿತಾಗಿ ಕೆಲವೊಂದು ಪ್ರಶ್ನೆಗಳನ್ನು ವಿದ್ಯಾರ್ಥಿಗಳ ಮುಂದಿಡುವುದು.

ಉದಾ: ಸುಗ್ಗಿಯ ಕಾಲದಲ್ಲಿ ಪ್ರಕೃತಿಯಲ್ಲಿ ಕಂಡುಬರುವ ವಿಶೇಷತೆಗಳಾವುವು?

ಕವಿ ಕುವೆಂಪುರವರು 'ಸುಗ್ಗಿ ಬರುತಿದೆ' ಎಂಬ ಕವನದಲ್ಲಿ ಸುಗ್ಗಿಯ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಬಹಳಷ್ಟು ಬದಲಾವಣೆಗಳು ಉಂಟಾಗುತ್ತವೆ ಎಂದು ಸಾರಿದ್ದಾರೆ. ಕುವೆಂಪುರವರ 'ಪಕ್ಷಿಕಾಶಿ' ಎಂಬ ಕವನ ಸಂಕಲನದಿಂದ ಆಯ್ದ ಕವಿತೆ ಇದಾಗಿದೆ. 'ಪಕ್ಷಿಕಾಶಿ' ಕವನ ಸಂಕಲನವು ಪ್ರಕೃತಿಗೀತೆಗಳ ಗುಚ್ಛವಾಗಿದೆ. ಈ ಸಂಗ್ರಹದಲ್ಲಿರುವ ರಚನೆಗಳಲ್ಲಿ ವಿವಿಧ ಋತುಗಳಲ್ಲಿ ಪ್ರಕೃತಿಯ ಸೊಬಗನ್ನು ಕುವೆಂಪು ಕಂಡ ಬಗೆ ನಿರೂಪಿತವಾಗಿವೆ.

ಕವನದ ರಸಾಸ್ವಾದನೆ ಆಗಬೇಕಾದರೆ ರಾಗ, ತಾಳ, ಲಯಬದ್ಧವಾಗಿ ಹಾಡಬೇಕು. ಹಾಗೆ ಹಾಡಲು ಈ ಪದ್ಯವು ಯೋಗ್ಯವಾಗಿದೆ ಎಂದು ತಿಳಿಸುವುದು. ಅಲ್ಲದೆ ಕವಿ ಬಳಸಿರುವ ಪದಗಳ, ಸಾಲುಗಳ ವಾಚ್ಯಾರ್ಥವನ್ನು ಮಾತ್ರ ತಿಳಿದರೆ ಸಾಕಾಗುವುದಿಲ್ಲ. ಸೂಚ್ಯಾರ್ಥವನ್ನು ತಿಳಿದುಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕವನವನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು. ತದನಂತರ ಕವನದ ದೃಶ್ಯಾತ್ಮಕ ವಿವರಣೆಯಿಂದ ಕೂಡಿದ ವೀಡಿಯೋ ಭಾಗವನ್ನು ಪ್ರದರ್ಶಿಸುವುದು.

**ಶಬ್ದಾರ್ಥ ವಿವರಣೆ**

ವಿದ್ಯಾರ್ಥಿಗಳು ಕವಿತೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಪದ್ಯದ ಕೊನೆಗೆ ನೀಡಿರುವ ಶಬ್ದಾರ್ಥಗಳನ್ನು ತಿಳಿದು ಬರೆಯಲು ಹೇಳುವುದು. ಪದ್ಯದಲ್ಲಿ ಬರುವ ಇನ್ನಿತರ ಕೆಲವು ಪದಗಳ ಅರ್ಥ ಕೆಳಗೆ ಕೊಡಲಾಗಿದೆ. ಅವುಗಳ ಅರ್ಥವನ್ನೂ ತಿಳಿಯಲಿ.

| | | | | | |
|---|---|---|---|---|---|
| ಸಗ್ಗ | – | ಸ್ವರ್ಗ | ವಿಧಾತ | – | ಬ್ರಹ್ಮ, ಸೃಷ್ಟಿಕರ್ತ |
| ಅಮಲ | – | ಶ್ರೇಷ್ಠ, ಮಾಲಿನ್ಯವಿಲ್ಲದ | ತಳಿರು | – | ಚಿಗುರು |
| ಉಲಿ | – | ಮಾತು, ನುಡಿ | ಆಣ್ಮ | – | ಒಡೆಯ |

## ಪದ ವಿಂಗಡಣೆ

ಕವಿತೆಯ ಕೊನೆಗೆ ನೀಡಿರುವ ಪದಗಳನ್ನು ಅರ್ಥಕ್ಕೆ ಭಂಗಬಾರದಂತೆ ಬಿಡಿಸಿ ಬರೆಯಲು ವಿದ್ಯಾರ್ಥಿಗಳಿಗೆ ಸೂಚಿಸುವುದು. ಇದರಿಂದ ಪದ್ಯವನ್ನು ಓದಿ ಅರ್ಥೈಸಲು ಸುಲಭವಾಗುವುದು. ಪದಗಳನ್ನು ಬಿಡಿಸಿ ಬರೆಯುವಾಗ ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸುವುದು.

- ಬಿನದದ + ಇನಿದು
- ಕರೆವಳು + ಓವಿ
- ಪಚ್ಚೆ + ಉಡೆ
- ಪರಮ ಪುರುಷನ + ಅಮಲ
- ಮುದವನು + ಉಲಿವ

ಅಧ್ಯಾಪಕರು ಪದ್ಯಭಾಗದಿಂದ ಇನ್ನಷ್ಟು ಸಂಧಿ ಪದಗಳನ್ನು ವಿಂಗಡಿಸಲು ಕೊಡುವುದು.

- ಜೊಂಪನಾಂತ – ಜೊಂಪನು + ಆಂತ
- ಬೆಳಕನಿಳೆಗೆ – ಬೆಳಕನು + ಇಳೆಗೆ
- ಸೊಲ್ಲನಾಲಿಸು – ಸೊಲ್ಲನು + ಆಲಿಸು
- ಅರಳಿದರಳು – ಅರಳಿದ + ಅರಳು
- ಚಿತ್ರದಂದದಿ – ಚಿತ್ರದ + ಅಂದದಿ

## ಆಶಯ ಗ್ರಹಣ

ಪದಗಳ ಅರ್ಥ ಮತ್ತು ಸಂಧಿ ಪದಗಳ ವಿಂಗಡಣೆಯನ್ನು ತಿಳಿದುಕೊಂಡು ವಿದ್ಯಾರ್ಥಿಗಳು ಕವನದ ಆಶಯವನ್ನು ಬರೆಯಲು ಶಕ್ತರಾಗುವರು.

ವಿದ್ಯಾರ್ಥಿಗಳು ಇಡೀ ಪದ್ಯದ ಅರ್ಥವನ್ನು ಎಷ್ಟರ ಮಟ್ಟಿಗೆ ಗ್ರಹಿಸಿಕೊಂಡಿರುವರೆಂಬುದನ್ನು ತಿಳಿಯುವುದಕ್ಕಾಗಿ ಆಶಯಗ್ರಹಣ ಪ್ರಶ್ನೆಯನ್ನು ಕೇಳಿ, ವೈಯಕ್ತಿಕವಾಗಿ ಉತ್ತರ ಬರೆಯಲು ಹೇಳುವುದು. ಬರೆದುದನ್ನು ಓದಿ ಸರಿಪಡಿಸಲು ಸೂಚಿಸುವುದು.

## ಸಂಕ್ಷಿಪ್ತವಾಗಿ ಬರೆಯುವುದು

- ಸುಗ್ಗಿಯಾಗಮನದಿಂದ ನಿಸರ್ಗದಲ್ಲಾದ ಬದಲಾವಣೆಗಳಾವುವು?

ಋತುಮಾನವನ್ನು ಅನುಸರಿಸಿ ಬದಲಾಗುತ್ತಾ ಬರುತ್ತಿರುವ ನಿಸರ್ಗದಲ್ಲಿ ಸುಗ್ಗಿಯ ವೈಭವವನ್ನು ಕಾಣಬಹುದು. ಸುಗ್ಗಿ ಬಂತೆಂಬ ಹರುಷದಿಂದ ಇಡೀ ಸೃಷ್ಟಿ ಸ್ವರ್ಗ ಸಮಾನವಾದ ಸೊಗಸಿನಿಂದ ಕಂಗೊಳಿಸುತ್ತಿದೆ. ಕಣಿವೆಗಳಲ್ಲಿ, ದಿಬ್ಬಗಳಲ್ಲಿ, ಮರಗಿಡಗಳಲ್ಲಿ ಚಿಗುರಿನ ಹಚ್ಚ ಹಸುರು ಹೊಸ ಜೀವಕಳೆಯನ್ನೇ ನೀಡಿದೆ. ಕುಸುಮಿಸಿರುವ ಲತೆಗಳಲ್ಲಿ ಬಂಡನ್ನುಂಡು ಮೊರೆವ ದುಂಬಿಗಳು, ಮಾಮರಗಳಲ್ಲಿ ಉಲಿವ ಪಿಕ, ಗಿಳಿಯ

ಗಳಹು ಇವೆಲ್ಲವುಗಳಿಂದ ಬನ ಬನಗಳಲ್ಲಿ ಇನಿದಾದ ನಿಸ್ವನವು ಹೊರಹೊಮ್ಮುತಿದೆ. ಚಿಗುರಿನಿಂದ ಕೂಡಿದ, ಸೊಂಪಾಗಿ ಹರಡಿದ ಚಪ್ಪರಗಳಿಂದ ಕಂಗೊಳಿಸುವ ಬನವು ಹಸುರೆಂಬ ಉಡುಗೆಯನ್ನುಟ್ಟು, ಅರಳಿದ ಹೂಗಳನ್ನು ತೊಟ್ಟು, ಹಿಮದ ಮಣಿಗಳೆಂಬ ಮಾಲೆಯನ್ನು ಧರಿಸಿ ನಿಂತಿರುವ ವನದೇವಿಯಂತೆ ಶೋಭಿಸುತ್ತಿದೆ.

## ಚಟುವಟಿಕೆಗಳು

### ಆಸ್ವಾದನ ಟಿಪ್ಪಣಿ

- 'ಸುಗ್ಗಿ ಬರುತಿದೆ' ಕವಿತೆಯ ಆಸ್ವಾದನ ಟಿಪ್ಪಣಿ ಬರೆಯುವುದು. ಮಾದರಿ ಆಸ್ವಾದನ ಟಿಪ್ಪಣಿಯನ್ನು ಕೆಳಗೆ ನೀಡಲಾಗಿದೆ.

'ಪ್ರಕೃತಿಯ ಆರಾಧನೆಯೇ ಪರಮಾತ್ಮನ ಆರಾಧನೆ' ಎಂದು ಭಾವಿಸಿಕೊಂಡಿರುವ ಕವಿ ಕುವೆಂಪುರವರು 'ಪ್ರಕೃತಿ ಕವಿ' ಎಂದೇ ಹೆಸರಾದವರು. ಪ್ರಸ್ತುತ 'ಸುಗ್ಗಿ ಬರುತಿದೆ' ಎಂಬ ಅವರ ಪ್ರಕೃತಿ ಕವನದಲ್ಲಿಯೂ ಇದೇ ಆಶಯ ವ್ಯಕ್ತವಾಗುತ್ತದೆ. ಸುಗ್ಗಿ ಕಾಲವನ್ನು 'ಚೈತ್ರಪುರುಷ' ಎಂಬುದಾಗಿ ಕಂಡ ಕವಿಕಲ್ಪನೆ ಆರಂಭದಲ್ಲೇ ಗಮನ ಸೆಳೆಯುತ್ತದೆ. ಸುಗ್ಗಿಯ ಆಗಮನ ಎಂಬುದು ಒಂದು ಸಂತೋಷದಾಯಕ ಸನ್ನಿವೇಶ. ಸುಗ್ಗಿ ಕಾಲದಲ್ಲಿ ಭೂಮಿಯಲ್ಲಿ ಹಸಿರು ಹಸಿರಾಗಿ ಕಂಗೊಳಿಸುವ ದೃಶ್ಯ ನೋಡುಗರ ಕಣ್ಣಿಗೆ ಸ್ವರ್ಗ ಸುಖವನ್ನು ನೀಡುವಂತಿದೆ. ತರು, ಬನ, ಪಕ್ಷಿ ಸಂಕುಲ ಮುಂತಾದವುಗಳಲ್ಲಿ ಜೀವಕಳೆಯನ್ನು ತುಂಬುವ ಸುಗ್ಗಿಯ ವೈಭವವನ್ನು ಕುವೆಂಪುರವರು ಬೆರಗುಗೊಳಿಸುವಂತೆ ಚಿತ್ರಿಸಿದ್ದಾರೆ. ಸುಗ್ಗಿ ಒಂದು ಚೈತನ್ಯ. ಕವಿ ಅದಕ್ಕೆ ರೂಪವನ್ನು ಕೊಟ್ಟಿದ್ದಾರೆ. ಕವಿ ನೋಟಕ್ಕೆ ನಿಲುಕುವ ಈ ಚಿತ್ರಣ ಪ್ರಕೃತಿಯನ್ನೇ ಎದುರು ತಂದು ನಿಲ್ಲಿಸಿದಂತೆ, ಕಣ್ಣಿಗೆ ಕಟ್ಟುವಂತಿದೆ. ಅಳಿ–ಗಿಳಿಗಳಾಗಲೀ, ತರುಲತೆಗಳಾಗಲೀ, ದುಂಬಿ ಹಿಂಡುಗಳಾಗಲೀ, ಪಕ್ಷಿ ಸಂಕುಲಗಳಾಗಲೀ ಸುಗ್ಗಿಯ ಸಂಭ್ರಮವನ್ನು ಹಿಗ್ಗಿನಿಂದ ಆಸ್ವಾದಿಸುತ್ತಿವೆ. 'ಸುಗ್ಗಿ, ಸುಗ್ಗಿ ಸುಗ್ಗಿ ಎಂದು ಹಿಗ್ಗಿ ಗಿಳಿಯ ಸಾಲು ಸಾಲು ತೋರಣದೊಲು ಕೋದಿದೆ' ಎಂಬ ಕವಿ ಬೇಂದ್ರೆಯವರ ಪದ್ಯದ ಸಾಲನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕವಿ ಇಲ್ಲಿ ನೀಡಿರುವ ವರ್ಣನೆ ಮತ್ತು ಮುಂದೆ ಬನದೇವಿ ತನ್ನ ಸುಗ್ಗಿಯಾಣ್ಮನನ್ನು ಪ್ರೀತಿಯಿಂದ ಬರಮಾಡುವ ನೋಟ ಮಾರ್ಮಿಕವಾಗಿ ಮೂಡಿಬಂದಿವೆ. ಪ್ರಕೃತಿಯ ಸಿರಿಯನ್ನು ಮನಸಾರೆ ಉಂಡು ಅದರೊಡನೆ ಕರಗಿ, ಮುಳುಗಿ, ತೇಲುವ ಕವಿಯ ಮನಃಸ್ಥಿತಿ 'ತೊರೆದ ಗಂಡನನ್ನು ಎದುರುಗೊಂಡ ಕೋಮಲೆ'ಗೆ ಹೋಲಿಸಿದುದು ನಮ್ಮನ್ನು ಚಕಿತರನ್ನಾಗಿಸುತ್ತದೆ. ಈ ಸಾಲುಗಳು ಕವಿ ಪ್ರಕೃತಿಯ ಸೊಬಗಿನೊಂದಿಗೆ ಲೀನರಾಗುತ್ತಿದ್ದರು ಎಂಬ ಅರ್ಥವನ್ನು ನಮ್ಮ ಮುಂದಿಡುತ್ತಿದೆ. ಕುವೆಂಪುರವರು ಒಬ್ಬ 'ಪ್ರಕೃತಿ ಕವಿ' ಎಂಬ ವಿಚಾರವನ್ನು ಈ ಉಪಮೆ ಮತ್ತಷ್ಟು ದೃಢಪಡಿಸುತ್ತಿದೆ. ಸೊಬಗೇ ಸತ್ಯ;ಸತ್ಯವೇ ಸೊಬಗು ಎಂಬ ಧ್ಯೇಯ ವಾಕ್ಯವನ್ನು ಸಾರಿದುದು ಇವರ ವೈಶಿಷ್ಟ್ಯ. ಪ್ರಕೃತಿ ಸೊಬಗನ್ನು ಅಮೃತ ಸಮಾನ ಎಂದಿದ್ದಾರೆ ಕವಿ. 'ಪ್ರಕೃತಿಯ ಸೊಬಗೇ ಶಿವ; ದೇವದೂತ ಪರದ ಬೆಳಕನ್ನು ಇಳೆಗೆ ತರುವ ವಿಧಾತ' ಎಂದು ಮುಂತಾಗಿ ಹೇಳಿದ್ದಾರೆ. 'ಪ್ರಕೃತಿಯ ಆರಾಧನೆ ಪರಮಾತ್ಮನ ಆರಾಧನೆ; ಪ್ರಕೃತಿಯಲ್ಲಿ ಪರಮಾತ್ಮನನ್ನು ಕಾಣಲು ಸಾಧ್ಯ' ಎಂಬ ಸಂದೇಶ ವಾಕ್ಯವನ್ನು ನೀಡುತ್ತ ಕವಿತೆಯನ್ನು ಕೊನೆಗೊಳಿಸಿದ್ದಾರೆ.

ಪ್ರಾಸ–ಅನುಪ್ರಾಸಗಳಿಂದ ಲಯದ ಸೊಗಸಿಂದ ಮನೋಹರವಾದ ಚಿತ್ರವನ್ನು ಸೃಷ್ಟಿಸುವ ಈ ಕವನ ನಮ್ಮನ್ನು ತನ್ಮಯರನ್ನಾಗಿಸುತ್ತದೆ. ಇಲ್ಲಿ ಕಂಡುಬರುವ ಅಂತ್ಯಪ್ರಾಸ ಕವಿತೆಗೆ ಶೋಭೆಯನ್ನು ತಂದಿದೆ. ರಾಗ, ತಾಳ, ಲಯಬದ್ಧವಾಗಿ ಮೂಡಿಬಂದಿರುವ ಈ ಕವಿತೆ ಮೇಳದಲ್ಲಿ ಹಾಡಲು ಪ್ರಶಸ್ತವಾಗಿದೆ. ಇದು ದೃಶ್ಯಾನುಭವಗಳಿಂದ ದೀಪ್ತವಾದ ಮನೋಜ್ಞ ಕವನ ಎನ್ನಬಹುದು. ನಾದಮಯ ಶಬ್ದಗಳಿಂದ ಚಿತ್ರಗಳನ್ನು ಕಟ್ಟುತ್ತಾ ಬಿಡಿ ಬಿಡಿ ದೃಶ್ಯಗಳ ಮಾಲೆಯಿಂದ ಸಮಗ್ರ ಅನುಭವವನ್ನು ವಾಚಕ ಲೋಕಕ್ಕೆ ನೀಡುವುದು ಕುವೆಂಪುರವರ ಶೈಲಿಯ ವಿಶೇಷತೆಯಾಗಿದೆ. 'ಪ್ರಕೃತಿ ಆರಾಧನೆಯೇ ಪರಮನಾರಾಧನೆ' ಎಂದು ಪ್ರಕೃತಿಯನ್ನು ದೈವಿಕವಾಗಿ ಕಾಣುವುದಕ್ಕೆ ಈ ಕವನ ಸಾಕ್ಷಿಯಾಗಿದೆ.

**ಕವಿತಾ ರಚನಾ ಕಮ್ಮಟ**

- ಸೃಜನಶೀಲ ಬರಹಕ್ಕೆ ಹೆಚ್ಚಿನ ಮಹತ್ವವನ್ನು ನೀಡುವುದಕ್ಕಾಗಿ ವಿದ್ಯಾರ್ಥಿಗಳಿಗೆ ಕವಿತಾ ರಚನಾ ಕಮ್ಮಟವನ್ನು ಏರ್ಪಡಿಸುವುದು. ಸಂಪನ್ಮೂಲ ವ್ಯಕ್ತಿಯೊಬ್ಬರನ್ನು ಕರೆಸಿ ಕವಿತಾ ರಚನೆಯ ಕುರಿತು ಮಾಹಿತಿ ಕೊಡಿಸುವುದು. ವಿದ್ಯಾರ್ಥಿಗಳು ತಮ್ಮ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಕವಿತೆ ರಚಿಸಲು ಪ್ರೋತ್ಸಾಹಿಸುವುದು. ಅದನ್ನು ಓದಿಸಿ, ಸರಿಪಡಿಸುವುದು. ತರಗತಿಯಲ್ಲಿ ಮೂಡಿಬಂದ ರಚನೆಗಳನ್ನು ಸಂಕಲನವಾಗಿಸಿ, ಬಿಡುಗಡೆ ಮಾಡುವುದು.
- 'ಸುಗ್ಗಿ ಬರುತಿದೆ' ಕವನದ ಆಡಕ ಮುದ್ರಿಕೆಯನ್ನು ವಿದ್ಯಾರ್ಥಿಗಳಿಗೆ ಪ್ರದರ್ಶಿಸುವುದು. ದೃಶ್ಯ ಸಂಕಲನದ ಹಂತಗಳ, ವಿಧಾನಗಳ ಬಗ್ಗೆ ಮಾಹಿತಿಯನ್ನು ನೀಡುವುದು. ಅಂತೆಯೇ ಕುವೆಂಪು ವಿರಚಿತ ದೋಣಿ ಹಾಡು ಪದ್ಯವನ್ನು ವಿದ್ಯಾರ್ಥಿಗಳಿಗೆ ನೀಡಿ, ಅದೇ ರೀತಿಯಲ್ಲಿ ದೃಶ್ಯಾತ್ಮಕ ಕಾವ್ಯವನ್ನಾಗಿಸಲು ಹೇಳುವುದು.

**ದೋಣಿ ಹಾಡು**

ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ।
ಬೀಸು ಗಾಳಿಗೆ ಬೀಳುತೇಳುವ ತೆರೆಯ ಮೇಗಡೆ ಹಾರಲಿ॥
ಹೊನ್ನಗಿಂಡಿಯ ಹಿಡಿದು ಕೈಯೊಳು ಹೇಮವಾರಿಯ ಚಿಮುಕಿಸಿ,
ಮೇಘ ಮಾಲೆಗೆ ಬಣ್ಣವೀಯುತ ಯಕ್ಷಲೋಕವ ವಿರಚಿಸಿ ॥
    ನೋಡಿ ಮೂಡಣದಾದಿಗಂತದಿ ಮೂಡುವೆಣ್ಣಿನ ಮೈಸಿರಿ।
    ರಂಜಿಸುತ್ತಿದೆ ಚೆಲುವೆಯಾಕೆಗೆ ಸುಪ್ರಭಾತವ ಬಯಸಿರಿ॥ ದೋಣಿ॥
ಕೆರೆಯ ಅಂಚಿನ ಮೇಲೆ ಮಿಂಚಿನ ಹನಿಗಳಂದದಿ ಹಿಮಮಣಿ।
ಮಿಂಚುತಿರ್ಪುವು ಮೂಡುತೈತಿರೆ ಬಾಲಕೋಮಲ ದಿನಮಣಿ।

ಹಸಿರು ಜೋಳದ ಹೊಲದ ಗಾಳಿಯು ತೀಡಿ ತಣ್ಣಗೆ ಬರುತಿದೆ ।
ಹುದುಗಿ ಹಾಡುವ ಮತ್ತ ಕೋಕಿಲ ಮಧುರವಾಣಿಯ ತರುತಿದೆ ।।ದೋಣಿ।।
ದೂರ ಬೆಟ್ಟದ ಮೇಲೆ ತೇಲುವ ಬಿಳಿಯ ಮೋಡವ ನೋಡಿರಿ।
ಅದನೆ ಹೋಲುತ ಅಂತೆ ತೇಲುತ ದೋಣಿಯಾಟವನಾಡಿರಿ।
ನಾವು ಲೀಲಾ ಮಾತ್ರ ಜೀವರು ನಮ್ಮ ಜೀವನ ಲೀಲೆಗೆ।
ನಿನ್ನೆ ನಿನ್ನೆಗೆ ಇಂದು ಇಂದಿಗೆ ಇರಲಿ ನಾಳೆಯು ನಾಳೆಗೆ ।।ದೋಣಿ।।

**ಭಾಷ್ಯಾಭ್ಯಾಸ**

ತದ್ಭವ ಪದಗಳ ಕುರಿತಾದ ಕಿರು ಪರಿಚಯವನ್ನು ಪಠ್ಯ ಪುಸ್ತಕದಲ್ಲಿ ಕೊಡಲಾಗಿದೆ. ಅಲ್ಲಿ ನೀಡಿರುವ ಉದಾಹರಣೆಯ ರೀತಿಯನ್ನು ಗಮನಿಸಿಕೊಂಡು, ಪದ್ಯಭಾಗದಲ್ಲಿರುವ ಇನ್ನು ಕೆಲವು ತದ್ಭವ ಪದಗಳಿಗೆ ಸಂಸ್ಕೃತ ಪದಗಳನ್ನು ಬರೆಯಲಿ.

ಬಿನದ – ವಿನೋದ
ಸೊದೆ – ಸುಧಾ
ಎಳೆ – ಇಳಾ
ಸಿಂಗಾರ/ಸಿಂಗರ – ಶೃಂಗಾರ
ಸಿರಿ – ಶ್ರೀ.... ಇತ್ಯಾದಿ.

**ಪ್ರಾಸ**

ಗದ್ಯ/ಪದ್ಯದ ಸಾಲುಗಳಲ್ಲಿ ಅಕ್ಷರಗಳು ತಿರುತಿರುಗಿ ನಿಯತವಾಗಿ ಬರುವುದನ್ನು 'ಪ್ರಾಸ' ಎನ್ನಲಾಗುತ್ತದೆ. ಈ ಪದ್ಯದ ಸಾಲಿನ ಕೊನೆಯ ಅಕ್ಷರದಲ್ಲಿ ಪ್ರಾಸವನ್ನು ಗುರುತಿಸಬಹುದು. ಇದನ್ನು 'ಅಂತ್ಯಪ್ರಾಸ' ಎನ್ನುವರು. ಪ್ರಾಸವು ಕಾವ್ಯ/ಕವನದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಪದ್ಯದ ಕೊನೆಗೆ ನೀಡಿರುವ ಪ್ರಾಸ ಪದಗಳ ಕುರಿತು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವುದು. ಇನ್ನೂ ಕೆಲವು ಪ್ರಾಸ ಪದಗಳನ್ನು ಗುರುತಿಸಿ ಬರೆಯಲು ಹೇಳುವುದು. ಓದಿಸಿ, ತಪ್ಪಿದ್ದಲ್ಲಿ ತಿದ್ದಿ ಸರಿಪಡಿಸುವುದು. ಇಲ್ಲಿ ಅಧ್ಯಾಪಕರ ಮೇಲ್ವಿಚಾರಣೆಯೂ ಅಗತ್ಯ.

ಉದಾ:

ಏರಿ – ಹೇರಿ – ಬೀರಿ
ಉಟ್ಟು – ತೊಟ್ಟು – ಇಟ್ಟು
ಹಾರುತ – ಸಾರುತ
ಇತ್ಯಾದಿ.

# ಕಡಲ ಒಡಲು

## ಪ್ರವೇಶ

ಪ್ರವಾಸ ಕಥನ ಇತ್ತೀಚೆಗಿನ ದಿನಗಳಲ್ಲಿ ಜನಪ್ರಿಯವಾಗುತ್ತಿರುವ ಗದ್ಯ ಸಾಹಿತ್ಯ ಪ್ರಕಾರ. ಇದು ಪ್ರೇಕ್ಷಣೀಯ ಸ್ಥಳಗಳಿಗೆ ಕೈಗೊಂಡ ಪ್ರವಾಸದ ಸುಮಧುರ ಕ್ಷಣಗಳ, ವಿಶೇಷ ಘಟನೆಗಳ ಸುಂದರ ವರ್ಣನಾತ್ಮಕ ಅಭಿವ್ಯಕ್ತಿಯಾಗಿದೆ. ಸರಳವಾದ ಭಾಷೆ, ಸುಲಲಿತ ಶೈಲಿ, ವರ್ಣನಾತ್ಮಕ ನಿರೂಪಣೆ ಇದರ ವಿಶೇಷತೆಗಳು. ಕನ್ನಡದಲ್ಲಿ ವಿಪುಲವಾಗಿ ಮೂಡಿ ಬರದಿದ್ದರೂ ಶಿವರಾಮ ಕಾರಂತ, ಜಿ.ಎಸ್. ಶಿವರುದ್ರಪ್ಪ, ಕು.ಶಿ. ಹರಿದಾಸ ಭಟ್ಟ, ಕೃಷ್ಣಾನಂದ ಕಾಮತ್, ಜೆ.ಪಿ. ಬಸವರಾಜು, ರಹಮತ್ ತರೀಕೆರೆ ಮೊದಲಾದವರು ಈ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಪ್ರಸ್ತುತ ಇಲ್ಲಿ ರಹಮತ್ ತರೀಕೆರೆಯವರ 'ಅಂಡಮಾನ್ ಕನಸು' ಎಂಬ ಪ್ರವಾಸಕಥನದ ಆಯ್ದ ಭಾಗವನ್ನು ಅಧ್ಯಯನಕ್ಕಾಗಿ ಕೊಡಲಾಗಿದೆ. ಅಂಡಮಾನ್ ದ್ವೀಪ, ನಿಸರ್ಗ ರಮಣೀಯತೆಯಿಂದ ಕೂಡಿದ ವಿಶಿಷ್ಟ ಭೂಪ್ರದೇಶ. ಅಲ್ಲಿನ ನೆಲ–ಜಲ–ಕಾಡು ಪಕ್ಷಿಗಳು, ಮೀನು ಮತ್ತು ಮನುಷ್ಯರ ಜೀವನ ವಿಧಾನಗಳು ಇಲ್ಲಿ ವರ್ಣಿತವಾಗಿವೆ. ಅಂಡಮಾನ್ ದ್ವೀಪದ ನಿಸರ್ಗ ರಮಣೀಯತೆಯನ್ನು ಅದರ ವಿಶೇಷತೆಯನ್ನು ಈ ಕಥನ ಪರಿಚಯಿಸುತ್ತದೆ.

ಅಂಡಮಾನಿನ ವಿಶೇಷ ಸೌಂದರ್ಯ ತಮ್ಮಲ್ಲಿ ಉಂಟುಮಾಡಿದ ಸಂಚಲನವನ್ನು ಹೇಳುತ್ತಾ ಹೆಚ್ಚು ಕಡಿಮೆ ಅಂಡಮಾನಿನ ಸಂಪೂರ್ಣ ನೆಲಭಾಗವನ್ನು ಆವರಿಸಿರುವ ಕಡಲಿನ ವೈಭವವನ್ನು ವರ್ಣಿಸುತ್ತಾರೆ. ಭೂಮಿಯ ಮೇಲಿರುವ ಹಾಗೆ ಕಡಲಗರ್ಭದಲ್ಲಿಯೂ ಅಪಾರ ಸೌಂದರ್ಯವಿದೆ. ಅದು ಭಯಾನಕವೂ ಹೌದು, ಸಂಪದ್ಭರಿತವೂ ಹೌದು. ನೆಲದ ಮೇಲಿರುವಂತೆ ಸಮುದ್ರದಲ್ಲಿಯೂ ಅನೇಕಾನೇಕ ಜೀವಿಗಳೂ ವಾಸಿಸುತ್ತವೆ. ಅವುಗಳ ಹುಟ್ಟು, ಜೀವನಕ್ರಮ – ಒಟ್ಟಾರೆ ಸಮುದ್ರದಲ್ಲಿನ ಅಸ್ತಿತ್ವವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದನ್ನು ಪಾಠಭಾಗದಲ್ಲಿ ಕಾಣುತ್ತೇವೆ. ಕಥನ ಭಾಗದ ಗದ್ಯ ಸೌಂದರ್ಯ, ವರ್ಣನಾ ವೈಖರಿ ಗಮನ ಸೆಳೆಯುತ್ತವೆ.

ವಿದ್ಯಾರ್ಥಿಗಳು ಈ ಹಿಂದಿನ ತರಗತಿಯಲ್ಲಿ ಪ್ರವಾಸ ಕಥನಗಳನ್ನು ಓದಿರುತ್ತಾರೆ. ಪ್ರೇಕ್ಷಣೀಯ ಸ್ಥಳಗಳಿಗೆ ಕೈಗೊಂಡ ಪ್ರವಾಸದ ಅನುಭವಗಳನ್ನು ಬರಹದ ಮೂಲಕ ಪ್ರಕಟಿಸಿರುವ ಅನುಭವವೂ ಅವರಲ್ಲಿದೆ.

ವಿದ್ಯಾರ್ಥಿಗಳು ಈಗ ತಮಗೆ ತಿಳಿದಿರುವ ಅಥವಾ ಓದಿರುವ ಪ್ರವಾಸ ಕಥನ ಕೃತಿಗಳನ್ನು ಹೆಸರಿಸಲಿ. ಅಲ್ಲಿ ಅಡಕವಾಗಿರುವ ವರ್ಣನಾತ್ಮಕ ವಿಚಾರಗಳನ್ನು ನೆನಪಿಸಿ ಹೇಳಲಿ. ಬಳಿಕ ಅಧ್ಯಾಪಕರು ಕೆಲವೊಂದು ಪ್ರವಾಸಕಥನಗಳ ಹೆಸರುಗಳನ್ನು ಸೂಚಿಸಿ, ಅದರ ಕೃತಿಕಾರರ ಕುರಿತು ಹೇಳುತ್ತಾ ರಹಮತ್ ತರೀಕೆರೆಯವರ 'ಅಂಡಮಾನ್ ಕನಸು' ಕೃತಿಯನ್ನು ಪ್ರಸ್ತಾಪಿಸುವುದು. ಆ ಮೂಲಕ ಪಾಠಕ್ಕೆ ಪ್ರವೇಶಿಸುವುದು.

### ಪಾಠಭಾಗದ ಓದು

ಅಂಡಮಾನಿನ ಪ್ರವಾಸದ ಅನುಭವಗಳನ್ನು ಚಿತ್ರಿಸಿದ ಕಥನಭಾಗದ ನಿರೂಪಣ ವಿಧಾನ, ಗದ್ಯದ ಶೈಲಿ, ಭಾಷೆ, ವರ್ಣನೆಯ ರೀತಿ ಇವುಗಳನ್ನು ವಿದ್ಯಾರ್ಥಿಗಳು ಪ್ರಧಾನವಾಗಿ ಗುರುತಿಸಿಕೊಳ್ಳಲು ನೆರವಾಗುವ ರೀತಿಯಲ್ಲಿ ಓದುವಿಕೆಯನ್ನು ಬಳಸಿಕೊಳ್ಳುವುದು ಅಗತ್ಯ.

### ಚಟುವಟಿಕೆಗಳು

### ಟಿಪ್ಪಣಿ

ಬಾಯ್ದೆರೆ ಓದಿನ ಬಳಿಕ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಭಜಿಸಿ ಪಾಠಭಾಗದ ನಿರ್ದಿಷ್ಟ ಭಾಗಗಳನ್ನು ನೀಡುವುದು. ಮೌನವಾಗಿ ಓದಲು ಸೂಚಿಸುವುದು. ಈ ಹಂತದಲ್ಲಿ ತಾವು ಓದಿದ ಭಾಗದಲ್ಲಿ ಬಂದಿರುವ ಪ್ರಧಾನ ವಿಚಾರಗಳ ಕುರಿತಾಗಿ ವಿದ್ಯಾರ್ಥಿಗಳು ತಮ್ಮೊಳಗೆ ಚರ್ಚಿಸಲಿ. ಕಡಲಾಳದಲ್ಲಿರುವ ಜೀವಿಗಳ ವರ್ಣವೈವಿಧ್ಯ ಚಿತ್ರಿತವಾಗಿರುವ ಬಗೆಯನ್ನು ಅವರು ತಿಳಿದುಕೊಳ್ಳಲಿ. ಬಳಿಕ ಪ್ರತಿಯೊಂದು ಗುಂಪು ತಾವು ಓದಿದ ಭಾಗದಲ್ಲಿ ಕಂಡುಕೊಂಡ ವೈಶಿಷ್ಟ್ಯಪೂರ್ಣ ವಿಚಾರಗಳ ಕುರಿತು ಟಿಪ್ಪಣಿ ಬರೆಯಲಿ.

ಉದಾ: ರೆಡ್‌ಸ್ಕಿನ್ ದ್ವೀಪ

ಅಂಡಮಾನಿನ ದ್ವೀಪ ಸಮುದಾಯದಲ್ಲಿ ರೆಡ್‌ಸ್ಕಿನ್ ದ್ವೀಪ ಅತ್ಯಂತ ವಿಶಿಷ್ಟವಾದುದು. ಈ ದ್ವೀಪ ಚೆಲುವಾದ ಮೀನುಗಳಿಗೆ ಅದ್ಭುತ ಹವಳಗಳಿಗೆ ಪ್ರಖ್ಯಾತಿ ಹೊಂದಿದೆ. ಇಲ್ಲಿಗೆ ಹೋಗಬೇಕಿದ್ದರೆ ಎರಡು ದಾರಿಗಳಿವೆ. ಒಂದು ಸ್ಕೂಬಾ ಡೈವಿಂಗ್‌ನ ಮೂಲಕ, ಇನ್ನೊಂದು ಮುಳುಗು ಮುಖವಾಡ ಧರಿಸಿಕೊಂಡು. ಮೈಯನ್ನು ಟ್ಯೂಬ್‌ನಂತಹ ಈಜು ಬುರುಡೆಯ ಒಳಗೆ ತೂರಿಸಿ ತೇಲುತ್ತ ನೀರೊಳಗಿನ ಹವಳದ ಪೊದೆಗಳನ್ನು ನೋಡಬಹುದು. ಸೀ ಅನಿಮೋನ್ ಎಂಬ ಹವಳದ ಪೊದರಿನೊಳಗೆ ವಾಸಿಸುವ ಕೆಂಪು ಏಂಜಲಾ ಮೀನುಗಳನ್ನು ಇಲ್ಲಿ ಕಾಣಬಹುದು.

ವಿದ್ಯಾರ್ಥಿಗಳು ಬರೆದ ಟಿಪ್ಪಣಿಯನ್ನು ಗುಂಪಿನಲ್ಲಿ ಓದುವುದು. ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆಯುವುದು. ಬಳಿಕ ತರಗತಿಯಲ್ಲಿ ಮಂಡಿಸುವುದು.

### ಸಂಕ್ಷಿಪ್ತ ಲೇಖನ

ಮಂಡನೆಯಾದ ಬರಹಗಳನ್ನು ಆಧರಿಸಿಕೊಂಡು ಪ್ರವಾಸ ಕಥನ ಭಾಗದಲ್ಲಿ ಚಿತ್ರಿತವಾದ ಅಂಡಮಾನಿನ ಕಡಲ ಜೀವಿಗಳ ವರ್ಣ ವೈವಿಧ್ಯದ ಕುರಿತು ಸಂಕ್ಷಿಪ್ತವಾದ ಲೇಖನವೊಂದನ್ನು ಸಿದ್ಧಪಡಿಸಲಿ. ಲೇಖನದಲ್ಲಿ ಈ ಕೆಳಗಿನವುಗಳ ವಿವರಣೆಗಳು ಅಡಕವಾಗಿರಲಿ.

- ಅಂಡಮಾನಿನ ಕಡಲ ಜೀವಿಗಳು—ಬಣ್ಣ ಬಣ್ಣದ ಮೀನುಗಳು

- ಸಾರ್ಜೆಂಟ್
- ಹವಳ ಜೀವಿ
- ಸೀ ಅನಿಮೋನ್
- ಸೀ ಆರ್ಚಿನ್
- ಸೀ ಶೆಲ್ಲುಗಳು
- ಹಾರುವ ಮೀನುಗಳು–ಡಾಲ್ಫಿನ್‌ಗಳು

## ಪ್ರವಾಸ ಕಥನದ ಗದ್ಯಶೈಲಿಯ ವಿಶೇಷತೆಗಳು

ಕಥೆ, ಪ್ರಬಂಧ, ವಿಮರ್ಶೆ, ಹರಟೆ, ವಿಡಂಬನೆ, ಪ್ರವಾಸ ಕಥನ ಹೀಗೆ ಆಧುನಿಕ ಗದ್ಯ ಸಾಹಿತ್ಯವು ವೈವಿಧ್ಯಮಯವಾಗಿದೆ. 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಹೊಸಗನ್ನಡದ ಮುಂಗೋಳಿ ಕವಿ ಮುದ್ದಣ ಹೇಳುವಂತೆ ಆಧುನಿಕ ಕನ್ನಡ ಸಾಹಿತದಲ್ಲಿ ಗದ್ಯ ಹೃದ್ಯವಾಗಿ, ಆಕರ್ಷಣೀಯವಾಗಿ, ಜನಪ್ರಿಯ ಪ್ರಕಾರವಾಗಿ ಬೆಳೆದು ಬಂತು. ಈ ಕಾರಣದಿಂದಲೇ ಗದ್ಯದಲ್ಲಿ ಇಷ್ಟೊಂದು ಪ್ರಕಾರಗಳು ಮೂಡಿಬರಲು ಸಾಧ್ಯವಾಯಿತು ಎಂದೆನ್ನಬಹುದು. ಪ್ರವಾಸಕಥನ ಅಂತಹ ಗದ್ಯ ಪ್ರಕಾರಗಳಲ್ಲಿ ಒಂದು. ಪ್ರವಾಸಕಥನವು ಪ್ರೇಕ್ಷಣೀಯ ಸ್ಥಳಗಳ ಸಂದರ್ಶನದ ಅವಿಸ್ಮರಣೀಯ ಅನುಭವಗಳ ವರ್ಣಾತ್ಮಕ ನಿರೂಪಣೆಯಾಗಿರುತ್ತದೆ.

ರಹಮತ್ ತರೀಕರೆಯವರ 'ಅಂಡಮಾನ್ ಕನಸು' ಒಂದು ಸುಂದರ ಪ್ರವಾಸ ಕಥನ. ಅಪರಿಚಿತನಾಡಿನಲ್ಲಿ ತಾವು ಕಂಡುಂಡ ವಿಶೇಷ ಅನುಭವಗಳನ್ನು ಅತ್ಯಂತ ಹೃದ್ಯವಾದ ಶೈಲಿಯಲ್ಲಿ ನಿರೂಪಿಸಿದ್ದಾರೆ. ಮೂರ್ತ ಅನುಭವಗಳ ದೃಶ್ಯಾತ್ಮಕ ಅಭಿವ್ಯಕ್ತಿ ಇಲ್ಲಿದೆ. ಕಡಲಿನಾಳದ ಅಪೂರ್ವಜೀವಿಗಳ ವರ್ಣವೈವಿಧ್ಯವನ್ನು ಚಿತ್ರಿಸಿದ ರೀತಿ ಗಮನ ಸೆಳೆಯುತ್ತದೆ. ಇಲ್ಲಿಯ ಭಾಷೆ ಸರಳ, ನಿರರ್ಗಳ, ಗದ್ಯದ ನಡೆ ಸುಂದರ ಹಾಗೂ ಸುಲಲಿತ. ನಿರೂಪಣೆಯ ಶೈಲಿ ಓದುಗರನ್ನು ನಿರಾಶೆಗೊಳಪಡಿಸುವುದಿಲ್ಲ. ಅಂಡಮಾನಿನ ನಿಸರ್ಗರಮಣೀಯತೆಯನ್ನು ಲೇಖಕರು ತಮ್ಮ ವರ್ಣನಾತ್ಮಕ ನಿರೂಪಣೆಯ ಮೂಲಕ ದೃಶ್ಯಾತ್ಮಕ ಕಾವ್ಯವನ್ನಾಗಿಸಿದ್ದಾರೆ.

## ವಿವರಣಾತ್ಮಕ ಪ್ರಬಂಧ

ವಿದ್ಯಾರ್ಥಿಗಳು ತಾವು ಸಂದರ್ಶಿಸಿದ ಪ್ರೇಕ್ಷಣೀಯ ಸ್ಥಳಗಳನ್ನು, ಅವರ ಕುರಿತಾಗಿರುವ ಅವರ ಅನುಭವಗಳನ್ನು ಒಬ್ಬೊಬ್ಬರಾಗಿ ಹೇಳಲಿ. ತಮ್ಮ ತಮ್ಮ ಅನುಭವಗಳನ್ನು ವರ್ಣಿಸಿ ಟಿಪ್ಪಣಿ ಬರೆಯಲಿ. ಬಳಿಕ ಅದನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ ಇಮೈಲ್ ಮೂಲಕ ಗೆಳೆಯನಿಗೆ ರವಾನಿಸಲಿ.

## ಭಾಷಾಭ್ಯಾಸ

### ಪ್ರತಿಧ್ವನಿ ಪದಗಳು

ರಾಜಗೀಜ, ಊಟಗೀಟ, ತಲೆಗಿಲೆ ಇವು ಪ್ರತಿಧ್ವನಿ ಪದಗಳು. ಈ ಪದಗಳನ್ನು ಗಮನಿಸಿದರೆ ಎರಡನೇ ಪದದ ಆರಂಭ 'ಗ'ಕಾರದಿಂದ ಕೂಡಿದ್ದು ಯಾವುದೇ ಪ್ರತ್ಯೇಕ ಅರ್ಥವನ್ನು ಹೊಂದಿರುವುದಿಲ್ಲ. ಇದನ್ನು ಪಡಿನುಡಿ ಎಂದೂ ಕರೆಯುವುದಿದೆ.

ಉದಾ: ಮಾಟೆಗೀಟೆ, ತಿಂಡಿಗಿಂಡಿ, ಅರ್ಥಗಿರ್ತ. ವಿದ್ಯಾರ್ಥಿಗಳು ಪ್ರಯೋಗದಲ್ಲಿರುವ ಈ ರೀತಿಯ ಪದಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂಗ್ರಹಿಸಿ ಅವುಗಳ ಸ್ವಾರಸ್ಯವನ್ನು ಗುರುತಿಸಿ ಬರೆಯಲಿ.

## ಮಿಶ್ರ ವಾಕ್ಯ–ಸರಳ ವಾಕ್ಯ

- ಸುತ್ತಮುತ್ತ ಒಂದರ ಮೇಲೆ ಮತ್ತೊಂದು ಒರಗಿರುವಂತಹ ಸಣ್ಣ ಬೆಟ್ಟಗಳ ಕೊಲ್ಲಿ ಇದಾಗಿತ್ತು ಅಲ್ಲಿ ಅಲೆಗಳ ಅಬ್ಬರವಿಲ್ಲ.
- ಡೋಲ್ಫಿನ್‌ಗಳು ಮಿಂಚಿನಂತೆ ತೋರಿ ಮಾಯವಾಯಿತು.
- ಅಂಡಮಾನನ್ನು ಬಿಟ್ಟು ಬರುತ್ತಿರುವ ನಮಗೆ ಹೇಳಿದ ವಿದಾಯ ಅದು ಎಂದು ಭಾವಿಸಿ ಖುಷಿಯಾಯಿತು.
- ಪುಟ್ಟ ಮೀನುಗಳು ಕಾಮನ ಬಿಲ್ಲಿನ ತುಂಡುಗಳಂತಿದ್ದವು.
- ಅವು ತಮಗೆ ಚೆಲುವು ಇರುವ ಅರಿವೇ ಇಲ್ಲದ ಬುಡಕಟ್ಟು ಹುಡುಗಿಯಂತೆ ಅಡ್ಡಾಡುತ್ತಿದ್ದವು.

# ಇದು ಬರಿ ಬೆಳಗಲ್ಲೋ ಅಣ್ಣಾ

**ಪ್ರವೇಶ**

ಭಾಷೆಯ ಮೂಲಕ ಭಾವದ ಅಭಿವ್ಯಕ್ತಿಯನ್ನು ಸಾಹಿತ್ಯ ಎನ್ನಲಾಗುತ್ತದೆ. ಭಾಷೆಯ ವಿವಿಧ ಪ್ರಯೋಗಗಳಲ್ಲಿ ಸಾಹಿತಿಗಳು ಭಾವವನ್ನು ಹೇಗೆ ಅಭಿವ್ಯಕ್ತಿಸಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸುವುದು ಹಾಗೂ ಅದನ್ನು ಭಾಷೆಯ ಮೂಲಕ ನಿರೂಪಿಸುವುದು ಸಾಹಿತ್ಯ ವಿಮರ್ಶೆ ಎಂದೆನಿಸಿಕೊಳ್ಳುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯ ವಿಮರ್ಶೆ ಯಾವಾಗ ಆರಂಭವಾಯಿತು ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಸಾಹಿತ್ಯವನ್ನು ಕುರಿತ ದೀರ್ಘ ವಿವರಣೆ ಮೊದಲು ಕಂಡದ್ದು ಡಿ.ವಿ.ಜಿ. ಅವರ 'ಸಾಹಿತ್ಯ ಮತ್ತು ಜನಜೀವನ' ಉಪನ್ಯಾಸದಲ್ಲಿ ಎಂದು ಹೇಳಬಹುದು. ಇದು ಅವರು 1920ರ ಸೆಪ್ಟಂಬರಿನಲ್ಲಿ ಮಾಡಿದ ಭಾಷಣ. ಅವರ ಬಳಿಕ ಮಾಸ್ತಿ, ಬೇಂದ್ರೆ, ಕುವೆಂಪು ಮೊದಲಾದವರ ಮೂಲಕ ಅದರ ಕುರಿತಾದ ಗಂಭೀರ ಚಿಂತನೆ ನಡೆದಿರಬೇಕು. ಭಾರತೀಯ ಕಾವ್ಯಮೀಮಾಂಸೆಯ ತತ್ವಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸಿ, ಸಾಹಿತ್ಯದ ಕುರಿತು ಗಂಭೀರ ಚಿಂತನೆಯನ್ನು ಪ್ರಾರಂಭಿಸಿ ಅದಕ್ಕೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಿದ ಕೀರ್ತಿ ಇವರದ್ದು. ರಸಾತ್ಮಕ ಅಭಿವ್ಯಕ್ತಿಯೇ ಕಾವ್ಯ ಎಂಬ ಸೂತ್ರವನ್ನು ಇವರೆಲ್ಲ ಒಪ್ಪಿದವರು. ಅಭಿವ್ಯಕ್ತಿಯ ರೀತಿ ಕವಿ ಸಾಹಿತಿಗೆ ಸೇರಿದ್ದು. ಆದರೆ ಓದುವವರಿಗೆ ರಸಾನುಭವ ಆಗುವಂತೆ ಮಾಡುವ ಹೊಣೆ ಅವನದು ಎಂಬ ಸೂತ್ರವನ್ನು ಬಲವಾಗಿ ನಂಬಿದ್ದವರು. ಉತ್ತಮ ಸಾಹಿತ್ಯವು ಮೂಲದಲ್ಲಿ ಉತ್ತಮವಾಗಿರಬೇಕು, ರೂಪದಲ್ಲಿ ಉತ್ತಮವಾಗಿರಬೇಕು, ಅಂತ್ಯದ ಫಲದಲ್ಲಿ ಉತ್ತಮವಾಗಿರಬೇಕು ಎಂದು ಮಾಸ್ತಿಯವರು ಹೇಳಿರುವರು. ಇಲ್ಲಿ ಅಂತ್ಯದ ಫಲ ಎಂದರೆ ರಸಾನುಭವವೇ. ಕವಿಯ ಲಕ್ಷ್ಯವು ಅದೇ ಆಗಿರುತ್ತದೆ. ತಾವು ಪಡೆದ ರಸಾನುಭವವನ್ನು ಸುಸ್ಪಷ್ಟವಾದ ಚಿತ್ರಗಳ ಮೂಲಕ ಸಹೃದಯರಿಗೆ ಗಮ್ಯವಾಗುವಂತೆ ಮಾಡಬಲ್ಲ ಶಕ್ತಿ ಸಾಹಿತಿಗೆ ಇರಬೇಕು. ಸಾಹಿತಿಯ ಕೃತಿಯಲ್ಲಿ ಇದು ಎಷ್ಟರ ಮಟ್ಟಿಗೆ ಸಾಧಿತವಾಗಿದೆ ಎಂಬುದರ ಜಿಜ್ಞಾಸೆಯೇ ವಿಮರ್ಶೆ.

ಪ್ರಕೃತಿಯ ಸೌಂದರ್ಯಾನುಭೂತಿಯನ್ನು ಕವಿ ರಾಗ–ತಾಳ ಬದ್ಧವಾಗಿ ರಚಿಸಿದಾಗ ಅದು ಸುಂದರ ಭಾವಗೀತೆಯಾಗುತ್ತದೆ. ಆ ಭಾವಗೀತೆಯ ಭಾವ ಮತ್ತು ಭಾಷೆಯ ಸೌಂದರ್ಯವನ್ನು ಅನುಭವಿಸಿ ಎಳೆ ಎಳೆಯಾಗಿ ವಿಸ್ತರಿಸಿ ಹೇಳಿದಾಗ ಅದು ರಸವಿಮರ್ಶೆ ಎನಿಸಿಕೊಳ್ಳುತ್ತದೆ. ಪ್ರಸ್ತುತ ಪಾಠಭಾಗದಲ್ಲಿ ದ.ರಾ. ಬೇಂದ್ರೆಯವರ 'ಬೆಳಗು' ಕವಿತೆಯ ಭಾವತರಂಗಗಳನ್ನು ಎಳೆಎಳೆಯಾಗಿ ವಿಸ್ತರಿಸಿ ಹೇಳಲಾಗಿದೆ.

ಸೂರ್ಯೋದಯ ಚಂದ್ರೋದಯ ಮೊದಲಾದವು ಪ್ರಾಕೃತಿಕ ವಿದ್ಯಮಾನಗಳು. ಸೌಂದರ್ಯ ಪ್ರಜ್ಞೆಯಿಂದ ಕೂಡಿದ ಕವಿಯೊಬ್ಬ ಅವುಗಳನ್ನು ಬೆರಗಿನಿಂದ ನೋಡುತ್ತಾನೆ. ಅದರಿಂದ ದೊರಕುವ ಸೌಂದರ್ಯಾನುಭೂತಿಯಿಂದ ಪರವಶನಾಗುತ್ತಾನೆ. ಕವಿಯ ಭಾವನೆಯೊಂದಿಗೆ ಕಲ್ಪನೆಯ ವಿಲಾಸವು ಬೆರೆತು ವರ್ಣನೆಯ ಬೆಡಗಿನಲ್ಲಿ, ಹಾಡಿನ ಮೋಡಿಯಲ್ಲಿ ಭಾವಗೀತೆಯ ಹುಟ್ಟು ಸಂಭವಿಸುತ್ತದೆ. ಬೇಂದ್ರೆ ಅಂತಹ

ಒಬ್ಬ ಕವಿ. ಅವರ 'ಬೆಳಗು' ರಚನೆಯು ಆ ರೀತಿಯ ಅಭಿವ್ಯಕ್ತಿಗೆ ಒಂದು ಉತ್ತಮ ಉದಾಹರಣೆ. ಈ ಭಾವಗೀತೆಯು ಎಲ್ಲ ಸಹೃದಯರ ಮನಸೂರೆಗೊಂಡಿದೆ.

ಕವಿಯ ರಚನೆಯನ್ನು ಓದಿ, ಆಸ್ವಾದಿಸಿ, ಆನಂದಿಸುವ ಯೋಗ್ಯತೆಯುಳ್ಳವನೇ ಸಹೃದಯ. ಕವಿತೆಯಿಂದ ತಾನು ಪಡೆದ ಆನಂದ ವಿಶೇಷವನ್ನು ಮಾತುಗಳಲ್ಲಿ ವ್ಯವಸ್ಥಿತವಾಗಿ ನಿರೂಪಿಸುವ ಪ್ರಯತ್ನವು ರಸವಿಮರ್ಶೆಯೆನಿಸಿಕೊಳ್ಳುತ್ತದೆ. ಅಂತಹ ಒಂದು ಪ್ರಯತ್ನವನ್ನು 'ಇದು ಬರಿ ಬೆಳಗಲ್ಲೋ ಅಣ್ಣಾ' ಪಾಠಭಾಗದಲ್ಲಿ ಮಾಡಲಾಗಿದೆ. 'ಬೆಳಗು' ಭಾವಗೀತೆಯಲ್ಲಿ ವ್ಯಕ್ತವಾದ ಅನುಭವ ಸೊಗಸನ್ನು, ಕವಿ ಅದನ್ನು ಬಣ್ಣಿಸಿದ ಬಗೆಯ ಬೆಡಗನ್ನು ವಿಮರ್ಶಕ ಪ್ರಭುಶಂಕರರು ಇಲ್ಲಿ ಬಹಳ ಸೊಗಸಾಗಿ ನಿರೂಪಿಸಿರುವರು.

ವಿದ್ಯಾರ್ಥಿಗಳು ಈ ಹಿಂದಿನ ತರಗತಿಗಳಲ್ಲಿ ವಿಮರ್ಶೆಯ ಭಾಗಗಳನ್ನು ಓದಿರುವ ಪರಿಚಯ ಉಳ್ಳವರಾಗಿದ್ದಾರೆ. ವಿಮರ್ಶೆಯ ಸ್ವರೂಪದ ಬಗೆಗಿನ ಸ್ಥೂಲವಾದ ವಿವರಣೆಯನ್ನು ನೀಡುತ್ತಾ ಪಾಠಭಾಗದಲ್ಲಿ ಬಂದಿರುವ 'ಬೆಳಗು' ಕವನದ ವಿಮರ್ಶೆಯತ್ತ ಗಮನವನ್ನು ಕೇಂದ್ರೀಕರಿಸುವುದು.

'ಬೆಳಗು' ಕವನವನ್ನು ವಿದ್ಯಾರ್ಥಿಗಳು ಈ ಮೊದಲು ಕೇಳಿರಬಹುದು. ಇಲ್ಲವಾದಲ್ಲಿ ಕವಿತೆಯನ್ನು ಒದಗಿಸಿಕೊಟ್ಟು ಕೆಲವು ವಿದ್ಯಾರ್ಥಿಗಳಿಂದ ಹಾಡಿಸುವುದು. ಇಲ್ಲವೇ ಧ್ವನಿಸುರುಳಿಯ ಮೂಲಕ ಹಾಡನ್ನು ಕೇಳಿಸುವುದು.

ಆಸ್ವಾದನ ಟಿಪ್ಪಣಿಯನ್ನು ಬರೆದು ಪರಿಚಯವನ್ನು ಹೊಂದಿದವರಾದುದರಿಂದ 'ಬೆಳಗು' ಕವಿತೆಯ ಯಾವುದಾದರೂ ನಿರ್ದಿಷ್ಟವಾದ ಸಾಲುಗಳಿಗೆ ಆಸ್ವಾದನ ಟಿಪ್ಪಣಿ ಬರೆಯಲು ಸೂಚಿಸುವುದು. ಒಂದಿಬ್ಬರಿಂದ ತರಗತಿಯಲ್ಲಿ ಮಂಡನೆಯಾಗಲಿ. ಬಳಿಕ ಆಸ್ವಾದನ ಟಿಪ್ಪಣಿಯನ್ನು ಇನ್ನಷ್ಟು ವರ್ಣನಾತ್ಮಕವಾಗಿ, ವಿಮರ್ಶಾತ್ಮಕವಾಗಿ ಬರೆದುದೇ ಆದರೆ ಅದರ ಸ್ವರೂಪ ಹೇಗಿರಬಹುದು? ಎಂಬುದನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಪಾಠದೆಡೆಗೆ ಬರುವುದು.

ಅಧ್ಯಾಪಕರು ಈ ಹಂತದಲ್ಲಿ ರಸವಿಮರ್ಶೆಯ ನಿರೂಪಣೆಯನ್ನು ಒಳಗೊಂಡಿರುವ ಡಿ.ವಿ.ಡಿಯ ಭಾಗವನ್ನು ಪ್ರದರ್ಶಿಸುವುದು.

## ಆಶಯ ಗ್ರಹಣ–ಪಾಠಭಾಗದ ಓದು

ವಿಮರ್ಶೆಯ ಭಾಗವಾಗಿರುವುದರಿಂದ ಇಲ್ಲಿ ಅರ್ಥಪೂರ್ಣ ಓದು ಯುಕ್ತ. ಹಾಗೆ ಓದಿದಾಗ ಪಾಠಭಾಗದಲ್ಲಿ ಬಂದಿರುವ ವಿಮರ್ಶೆಯ ವಿಚಾರಗಳನ್ನು ಪರಿಭಾವಿಸಿಕೊಳ್ಳಲು ಸುಲಭವಾದೀತು. ಓದುವ ವಿಧಾನವನ್ನು ಅಧ್ಯಾಪಕರು ಮಾದರಿಯಾಗಿ ತೋರಿಸಿಕೊಡುವುದು ಆಶಯಗ್ರಹಣಕ್ಕೆ ಉತ್ತಮವಾದೀತು.

## ಶಬ್ದಾರ್ಥ ವಿವರಣೆ

ಸೂಕ್ತ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಂದ ನವೀನ ಪದಗಳನ್ನು ಗುರುತಿಸಿ ಅರ್ಥ

ಬರೆಯಿಸುವುದು. ಪಾಠಭಾಗದಲ್ಲಿ ಬಂದಿರುವ ವಿಶೇಷ ಪ್ರಯೋಗಗಳನ್ನು ಗುರುತಿಸಿ ಅರ್ಥೈಸಿಕೊಳ್ಳುವಂತೆ ಮಾಡುವುದು.

ಎರಕ – ಲೋಹವನ್ನು ಕರಗಿಸಿ ಯಾವುದಾದರೂ ಆಕೃತಿಯಲ್ಲಿ ಹೊಯ್ಯುವುದು
ತೊಯ್ಯು – ಒದ್ದೆಮಾಡು
ಗೇಹ – ದೇಹ

## ಆಶಯ ಗ್ರಹಣ ಪ್ರಶ್ನೆಗಳು

ಪಾಠಭಾಗದ ಕೊನೆಗೆ ಕೊಟ್ಟಿರುವ 'ಸಂಕ್ಷಿಪ್ತವಾಗಿ ಬರೆಯಿರಿ' ಎಂಬಲ್ಲಿನ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸ್ವತಂತ್ರವಾಗಿ ಉತ್ತರ ಬರೆಯಲಿ. ತರಗತಿಯಲ್ಲಿ ಮಂಡಿಸಲಿ ವಿಮರ್ಶೆಯ ಸ್ವರೂಪವನ್ನು ಪರಿಚಯಿಸುವಲ್ಲಿ ಇದು ನೆರವಾಗಬಹುದು.

## ಸ್ವಾರಸ್ಯ ಬರೆಯುವುದು

ವಿಮರ್ಶೆಯ ಭಾಗದಲ್ಲಿ 'ಬೆಳಗು' ಕವಿತೆಯನ್ನು ಸೇರಿಸಿಕೊಂಡೇ ವ್ಯಾಖ್ಯಾನ ಮಾಡಲಾಗಿದೆ. ಪ್ರತಿ ಸಾಲನ್ನು ಎಂದರೆ ಕವಿತೆಯನ್ನು ಎಳೆ ಎಳೆಯಾಗಿ ವಿಸ್ತರಿಸಿ ಹೇಳಲಾಗಿದೆ. 'ಬೆಳಗು' ಕವಿತೆಯ ಕೊನೆಯ ಸಾಲು 'ಇದು ಬರಿ ಬೆಳಗಲ್ಲೋ ಅಣ್ಣಾ' – ಇಡೀ ಕವಿತೆಗೆ ಬರೆದ ಭಾಷ್ಯದಂತಿದೆ. ಬೆಳಗಾಗುವ ಕ್ರಿಯೆ ಒಂದು ಸ್ವರ್ಗೀಯ ಕ್ರಿಯೆ ಎಂಬಂತೆ ಕವಿ ಕಾಣುವ ಮತ್ತು ವರ್ಣಿಸುವ ವಿಶೇಷವನ್ನು ವಿಮರ್ಶಕರು ಇಲ್ಲಿ ಗುರುತಿಸಿದ್ದಾರೆ. ಶಾಂತಿರಸವು ಸಕಲ ಜೀವಜಾಲಗಳ ಮೇಲಿನ ಪ್ರೀತಿಯಿಂದ 'ಬೆಳಗು' ರೂಪವನ್ನು ತಾಳಿದೆ ಎಂದು ಹೇಳುತ್ತಾ ಇದು ಕೇವಲ ಬೆಳಗಲ್ಲ ಎಂದು ಸಾರುವ ಮನೋಧರ್ಮದ ವಿಶೇಷತೆಯನ್ನು ಇಲ್ಲಿ ಕಾಣಬಹುದು.

## ಸಮರ್ಥಿಸಿ ಬರೆಯುವುದು

ಬೇಂದ್ರೆಯವರ 'ಬೆಳಗು' ನಿಜವಾಗಿಯೂ ಅತ್ಯಂತ ಸರಳ, ಅಚ್ಚಗನ್ನಡ ಪದಗಳಿಂದ ಕೂಡಿದ್ದು ಅತ್ಯಪೂರ್ವವಾದ ವರ್ಣನೆಯ ಅನುಭವಗಳನ್ನು ಒಳಗೊಂಡಿರುವ ಕವಿತೆಯಾಗಿದೆ. ಇದೊಂದು ಸುಂದರ ಭಾವಗೀತೆ, ಮೇಲಾಗಿ ಪ್ರಕೃತಿಗೀತೆ.

'ಮೂಡಲ ಮನೆಯ ಮುತ್ತಿನ ನೀರಿನ ಎರಕವ ಹೊಯ್ದ' ಎಂದು ಪ್ರಾರಂಭವಾಗುವ ಕವಿತೆಯ ಮೊದಲ ಸಾಲು ಓದುಗರನ್ನು ತನ್ನತ್ತ ಸೆಳೆದು ಬೆಳಗಿನ ಜಾವದ, ಶಾಂತ, ಶುದ್ಧ ಮತ್ತು ಮಂಗಲಕರ ವಾತಾವರಣಕ್ಕೆ ಕೊಂಡೊಯ್ಯುತ್ತದೆ. ಕವಿ ಬಳಸಿರುವ 'ಮುತ್ತಿನ ನೀರು' ಮತ್ತು 'ಎರಕ' ಈ ಪದಗಳು ಶುಚಿತ್ವ, ಶುಭ್ರತೆಯನ್ನು ಧ್ವನಿಸಿ ಹಬ್ಬ ಹರಿದಿನಗಳ ಶುಭಕರ ವಾತಾವರಣದ ಕಲ್ಪನೆಯನ್ನು ನಮ್ಮ ಮನಸ್ಸಿಗೆ ತಂದುಕೊಡುತ್ತವೆ. ಇಲ್ಲಿ ಬೆಳಗು ಮೂಡಿ ಬರುವ ಮೂಡಲ ದಿಕ್ಕನ್ನು 'ಮನೆ'ಗೆ ಹೋಲಿಸಲಾಗಿದ್ದು ಈ ರೂಪಕ ವಿಶಿಷ್ಟವೂ

ಅರ್ಥಪೂರ್ಣವೂ ಆಗಿದೆ. ಮೂಡಲ ಮನೆಯ ಸೂರ್ಯನಿಂದ ಅವನ ಶ್ವೇತರಶ್ಮಿ ಪ್ರಕಾಶವೆಂಬ ಮುತ್ತಿನ ನೀರಿನ ಎರಕವನ್ನು ಹೊಯ್ದಿದೆ ಎಂದು ಕವಿ ಇಲ್ಲಿ ವರ್ಣಿಸಿರುವರು.

ಬಾಗಿಲ ತೆರೆದು ಬೆಳಕೂ ಹರಿದೂ

ಜಗವೆಲ್ಲಾ ತೊಯ್ದಾ

ಹೋಯ್ತೋ–ಜಗವೆಲ್ಲಾ ತೊಯ್ದಾ

ಎಂಬ ಪಂಕ್ತಿಗಳು ಮೂಡಣ ದಿಶೆಯೆಂಬ ಮನೆಯ ಬಾಗಿಲನ್ನು ತೆರೆದು, ಬೆಳಕಿನ ಹೊನಲನ್ನು ಹರಿಯ ಬಿಟ್ಟಿದೆ. ಅಲ್ಲಿ ಬೆಳಕು ಆ ಪ್ರಭಾ ಪ್ರವಾಹದಲ್ಲಿ ಪ್ರಪಂಚವನ್ನೆಲ್ಲಾ ತೊಯ್ದಿದೆ ಎಂಬ ಅಮೃತ ಕಲ್ಪನೆಯನ್ನು ಮುಂದಿಡುತ್ತದೆ.

ಬೆಳಗಾಗುವುದು ಒಂದು ನೈಸರ್ಗಿಕ ಕ್ರಿಯೆ. ಮುಂಜಾನೆಯ ಇಬ್ಬನಿಯ ಎಲೆಗಳ ಮೇಲೆ, ಹೂಗಳ ಒಳಗೆ ತಂಗಿದೆ. ಇಬ್ಬನಿಯ ಹನಿಗಳು ಅಮೃತದ ಬಿಂದುವಿನಂತಿವೆ. ಈ ಅಮೃತದ ಬಿಂದುಗಳನ್ನು ಮುಗಿಲ ಮೇಲಿಂದ ತಂದು ಇರಿಸಿರುವರು ಯಾರು? ಎಂದು ಕವಿ ಮುಗ್ಧರಾಗಿ ಪ್ರಶ್ನಿಸುತ್ತಾರೆ. ಪ್ರಾತಃಕಾಲದ ತಂಗಾಳಿ ಹಿತವಾಗಿ ಬೀಸಿದಾಗ ಗಿಡಮರಗಳಲ್ಲಿರುವ ಹೂಗಳ ಎಸಳುಗಳು ಅತ್ತಿತ್ತ ಅಲ್ಲಾಡುತ್ತವೆ. ಗಾಳಿಯ ಕೈಯಲ್ಲಿ ಹೂವಿನ ಎಸಳಿನ ಚವರಿ ಆ ಗಾಳಿ, ಹೂವಿನ ಗಂಧವನ್ನೂ ದುಂಬಿಯ ಹಿಂಡಿನ ಮೈಗೆಲ್ಲಾ ಸವರಿದಂತೆ ತೋರುತ್ತದೆ. ಪ್ರಭುಶಂಕರರೇ ಹೇಳುವಂತೆ ಬೇಂದ್ರೆಯವರ ಸೂಕ್ಷ್ಮವಾದ ಕಲ್ಪನೆಗೆ ಈ ಚರಣಗಳೇ ಸಾಕ್ಷಿ.

ಗಿಡಗಳಲ್ಲಿ ಕುಳಿತು ಹಕ್ಕಿ ಹಾಡಿದರೆ ಗಿಡ ಗಂಟೆಯ ಕೊರಳಿನಿಂದಲೇ ಹಾಡು ಮೂಡಿಬಂದಂತಾಯಿತಂತೆ. ಆ ಹಾಡು ಒಂದೇ ಕ್ಷಣದಲ್ಲಿ ಕಾಡು ನಾಡೆಲ್ಲವನ್ನೂ ಗಂಧರ್ವರ ಸೀಮೆಯನ್ನಾಗಿ ಪರಿವರ್ತಿಸಿತು. ಹಾಡಿನ ಮಾಧುರ್ಯ–ಅದು ಸೃಷ್ಟಿಸಿದ ನೂತನ ಲೋಕ–ಈ ಎಲ್ಲವನ್ನೂ 'ಗಂಧರ್ವರ ಸೀಮೆ' ಎಂಬ ಮಾತು ಧ್ವನಿಸುತ್ತದೆ.

ಅಮೃತದ ಬಿಂದುವನ್ನು ತಂದಿಟ್ಟವರು ಯಾರು? ಗಂಧರ್ವ ಸೀಮೆಯನ್ನಾಗಿ ಈ ಪರಿಚಿತ ಭೂಮಿಯನ್ನು ಪರಿವರ್ತಿಸಿದವರು ಯಾರು? ಎಂದು ಅಚ್ಚರಿಪಡುತ್ತಿದ್ದ ಮನಸ್ಸು ಒಂದು ಗಳಿಗೆ ಈ ಸೌಂದರ್ಯಾಸ್ವಾದನೆಯಲ್ಲಿ ತನ್ಮಯತೆಯನ್ನು ಪಡೆಯಿತು. ಕಣ್ಣು, ಕಿವಿ, ಮೂಗು ಇವುಗಳಿಗೆ ಮಾತ್ರ ಬೀಸಲಾದ ಅನುಭವ ಸಕಲೇಂದ್ರಿಯಗಳನ್ನು ವ್ಯಾಪಿಸಿ ಆನಂದ ಸ್ಪರ್ಶದಿಂದ ದೇಹ ದೇವರ ಗುಡಿಯಾಯಿತು. ಈ ರಸಾನುಭವದಲ್ಲಿ ಮಿಂದ ಮನಸ್ಸಿಗೆ ಈಗ ಬಣ್ಣಗಳೂ ಕಾಣಿಸುತ್ತಿಲ್ಲ. ಅದರ ಬದಲು 'ಶಾಂತಿರಸವೇ ಪ್ರೀತಿಯಿಂದ ಮೈದೋರಿತಣ್ಣಾ, ಇದು ಬರಿ ಬೆಳಗಲ್ಲೋ ಅಣ್ಣಾ' ಎನ್ನುವ ಅನುಭವ ಒದಗುತ್ತಿದೆ.

ಕವಿ ಹೃದಯದ ಸರಳತೆ, ಮುಗ್ಧತೆಗಳು ಕಲ್ಪನೆಯ ಶ್ರೀಮಂತಿಕೆಯೊಂದಿಗೆ ಸಮರಸವಾಗಿ ಕವಿತೆಯಲ್ಲಿ ಎರಕಗೊಂಡು ಪುನರುಕ್ತಿ, ನಾದ ಮಾಧುರ್ಯಗಳಿಂದ ಮನಸೂರೆಗೊಳ್ಳುವ ಈ ಕವಿತೆ ಅತ್ಯಂತ ಸರಳ ಅಚ್ಚಗನ್ನಡ ಪದಗಳಿಂದ ಮೂಡಿದ ಅತ್ಯಪೂರ್ವವಾದ ವರ್ಣನೆಯ ಅನುಭವ ಎಂಬುದರಲ್ಲಿ ಎರಡು ಮಾತಿಲ್ಲ.

## ವಿಮರ್ಶೆ ಬರೆಯುವುದು

ವಿಮರ್ಶೆಯ ಸ್ವರೂಪದ ಪರಿಚಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕವಿತೆಯೊಂದನ್ನು ನೀಡಿ ಅದನ್ನು ಓದಿ, ಆ ಕವಿತೆಯ ಮೇಲೆ ವಿಮರ್ಶೆಯೊಂದನ್ನು ಬರೆಸುವುದು ಒಳಿತು. ಘಟಕದ ಆರಂಭದಲ್ಲಿ ಬಂದಿರುವ 'ಸುಗ್ಗಿ ಬರುತಿದೆ' ಕವಿತೆಯನ್ನು ವಿದ್ಯಾರ್ಥಿಗಳು ಓದಿ, ಹಾಡಿ ಆಸ್ವಾದಿಸಿರುವರು. ಆಸ್ವಾದನ ಟಿಪ್ಪಣಿಯನ್ನು ಬರೆದಿರಬಹುದು. ಈಗ ಕವಿತೆಯ ಯಾವುದಾದರೂ ಒಂದು ಭಾಗವನ್ನಿಟ್ಟುಕೊಂಡು ಅದರ ಮೇಲೆ ವಿಮರ್ಶೆಯನ್ನು ಬರೆಯಲಿ. ಬರೆದುದನ್ನು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಮಾರ್ಗದರ್ಶನದೊಂದಿಗೆ ಸೂಕ್ತ ತಿದ್ದುಪಡಿಗಳೊಂದಿಗೆ ಎಲ್ಲರೂ ಪರಿಷ್ಕರಿಸಿ ಬರೆಯಲಿ. ತಮ್ಮ ಲಾಗ್‌ಬುಕ್ಕಿನಲ್ಲಿ ಇದನ್ನು ದಾಖಲಿಸಿಕೊಳ್ಳಲಿ.

## ಬೇಂದ್ರೆಯವರ 'ಬೆಳಗು' ಕವಿತೆ

ಮೂಡಲ ಮನೆಯ ಮುತ್ತಿನ ನೀರಿನ
ಎರಕಽವ ಹೊಯ್ದಾ
ನುಣ್ಣ–ನ್ನೆರಕಽವ ಹೊಯ್ದಾ
ಜಗವೆಲ್ಲಾ ತೋಯ್ದಾ
ಹೋಯ್ತೋ–ಜಗವೆಲ್ಲಾ ತೊಯ್ದಾ

ರತ್ನದ ರಸದಾ ಕಾರಂಜೀಯು
ಪುಟಪುಟನೇ ಪುಟಿದು
ತಾನೇ – ಪುಟಪುಟನೇ ಪುಟಿದು
ಮಘಮಘಿಸುವಾ ಮುಗಿದ ಮೊಗ್ಗೀ
ಪಟಪಟನೆ ಒಡೆದು
ತಾನೆ – ಪಟಪಟನೇ ಒಡೆದು

ಎಲೆಗಳ ಮೇಲೆ ಹೂಗಳ ಒಳಗೇ
ಅಮೃತಽದ ಬಿಂದು
ಕಂಡವು–ಅಮೃತದ ಬಿಂದು
ಯಾರಿರಿಸಿರುವರು ಮುಗಿಲ ಮೇಲಿಂ
ದಿಲ್ಲಿಗೇ ತಂದು
ಈಗ – ಇಲ್ಲಿಗೇ ತಂದು

ತಂಗಾಳೀಯಾ ಕೈಯೊಳಗಿರಿಸೀ
ಎಸಳೀನಾ ಚವರಿ
ಹೂವಿನ  – ಎಸಳೀನಾ ಚವರಿ
ಹಾರಿಸಿ ಬಿಟ್ಟರು ದುಂಬಿಯ ದಂಡು
ಮೈಯೆಲ್ಲಾ ಸವರಿ
ಗಂಧಾ – ಮೈಯೆಲ್ಲಾ ಸವರಿ

ಗಿಡಗಂಟೆಯಾ ಕೊರಳೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು – ಹಕ್ಕಿಗಳಾ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನ ನಾಡು
ಕ್ಷಣದೊಳು – ಕಾಡಿನಾ ನಾಡು

ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹಾ
ಸ್ಪರ್ಶಾ –  ಪಡೆದೀತೀ ದೇಹಾ.
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ – ದೀ ಮನಸಿನ ಗೇಹಾ

ಅರಿಯದ ಅಳವು, ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ ಕಾಣದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ
ಇದು ಬರಿ – ಬೆಳಗಲ್ಲೋ ಅಣ್ಣಾ

## ಹೆಚ್ಚಿನ ಓದಿಗೆ

| | | |
|---|---|---|
| ಪಕ್ಷಿಕಾಶಿ | – | ಕುವೆಂಪು |
| ಕೊಳಲು | – | ಕುವೆಂಪು |
| ಬೆಳದಿಂಗಳಾ ನೋಡಾ | – | ನಾದಲೀಲೆ – ಬೇಂದ್ರೆ |
| ಸೌಂದರ್ಯ ಸಮೀಕ್ಷೆ | – | ಜಿ.ಎಸ್. ಶಿವರುದ್ರಪ್ಪ |
| ಕನ್ನಡದಲ್ಲಿ ಭಾವಗೀತೆ | – | ಡಾ. ಪ್ರಭುಶಂಕರ |
| ಅಂಡಮಾನ್ ಕನಸು | – | ರಹಮತ್ ತರೀಕರೆ |
| ನೀಲಾಚಲಗಳ ನಾಡಿನಲ್ಲಿ | – | ಜಿ.ವಿ. ಬಸವರಾಜು |
| ಹಸಿರು – ಹೊನ್ನು | – | ಬಿ. ಜಿ. ಎಲ್ ಸ್ವಾಮಿ |
| ಪೆರುವಿನ ಪವಿತ್ರ ಕಣಿವೆಯಲ್ಲಿ | – | ನೇಮಿಚಂದ್ರ |

* * *

# 2 ಜನ–ಜಾನಪದ

ಘಟಕ 2 : ಜನ–ಜಾನಪದ

ಪಾಠಭಾಗಗಳು : 1) ಇದ್ದ್ಯ ಬಲ್ಲವಗೆ ಭಯವುಂಟೆ

2) ಅಪ್ರತಿಮ ಪ್ರತಿನಾಯಕ ಶೇಣಿ

3) ಭೂತಾರಾಧನೆ ಮತ್ತು ತೆಯ್ಯಂ

ಸಮಯ : 30 ಪಿರೇಡುಗಳು

## ಕಲಿಕಾ ಸಾಮಗ್ರಿಗಳು

- ಪಠ್ಯ ಪುಸ್ತಕ
- ಅಡಕ ಮುದ್ರಿಕೆ
- ವೀಡಿಯೋ ಚಿತ್ರಗಳು (ಸಿ.ಡಿ)
- ಪ್ರಾದೇಶಿಕ ಸಂಪನ್ಮೂಲಗಳು
- ಪೂರಕ ಗ್ರಂಥಗಳು

## ಮೌಲ್ಯಗಳು ಹಾಗೂ ಮನೋಭಾವಗಳು

- ಜನಪದ ಗೀತೆಗಳಲ್ಲಿ ಅಡಕವಾಗಿರುವ ಜೀವನ ಮೌಲ್ಯಗಳನ್ನು ತಿಳಿದುಕೊಳ್ಳುವ ಮನೋಭಾವ
- ಜನಪದ ಕಲೆಗಳ ಶ್ರೀಮಂತಿಕೆಯ ಕುರಿತಾದ ಗೌರವಭಾವನೆ
- ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವ
- ಯಕ್ಷಗಾನ ಕಲೆ, ಕಲಾವಿದರ ಕುರಿತಾದ ಗೌರವ ಮನೋಭಾವ
- ಜಾನಪದ ಅಧ್ಯಯನದಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಮನೋಭಾವ

# ಮುನ್ನುಡಿ

ಜನಪದ ಹಾಡುಗಳು ಜನಜೀವನದ ಕೈಗನ್ನಡಿ. ಜನರ ಸರಳ ನಡೆಯಿಂದ, ಗೇಯತೆಯಿಂದ ಭಾವ ಮಾಧುರ್ಯದಿಂದ ಹಾಡುಗಳು ಕೇಳುವವರಿಗೆ ಪ್ರಿಯವಾಗುತ್ತವೆ. ಕನ್ನಡದಲ್ಲಿ ಪ್ರಾಚೀನ ಕಾಲದಿಂದಲೂ ಮೌಖಿಕವಾಗಿ ಪ್ರಚಲಿತವಾಗಿರುವ ಇಂತಹ ಸಾಹಿತ್ಯವನ್ನು ಕಳೆದ ಸುಮಾರು ಒಂದು ಶತಮಾನದಿಂದೀಚೆಗೆ ವಿದ್ವಾಂಸರು ಸಂಗ್ರಹಿಸಿ, ಗ್ರಂಥ ರೂಪದಲ್ಲಿ ಪ್ರಕಟಿಸಿ ಎಲ್ಲರಿಗೂ ಲಭಿಸುವಂತೆ ಮಾಡಿದ್ದಾರೆ. ಹೀಗೆ ಬೆಳಕಿಗೆ ಬಂದ ಸಾಹಿತ್ಯದಲ್ಲಿ ಕೇವಲ ತ್ರಿಪದಿಗಳು ಅಲ್ಲ, ಲಾವಣಿಗಳು, ಬೀಸುವ ಪದಗಳು, ಕಥೆಗಳು, ಗಾದೆಗಳು, ಒಗಟುಗಳೂ ಇವೆ. ಇವನ್ನೆಲ್ಲಾ ಒಟ್ಟಾಗಿ ಜನಪದ ಸಾಹಿತ್ಯ ಎಂದು ಕರೆಯುತ್ತಾರೆ. ಸಾಹಿತ್ಯ ಮಾತ್ರವಲ್ಲದೆ ಭಾಷೆ, ಕಲೆ, ವೈದ್ಯಪದ್ಧತಿ, ಉಡುಗೆ–ತೊಡುಗೆ, ಸಂಪ್ರದಾಯ, ಆಚರಣೆ, ಕುಣಿತ, ನಂಬಿಕೆ ಇವೆಲ್ಲವೂ ಜಾನಪದದಲ್ಲಿ ಬರುತ್ತವೆ.

ಪ್ರಾಚೀನ ಕಾಲದಲ್ಲಿ ಮನುಷ್ಯನ ಬದುಕು ಸೀಮಿತವಾಗಿತ್ತು. ಅವನ ಅಭಿವ್ಯಕ್ತಿಯು ಮೌಖಿಕವಾಗಿತ್ತು. ಅಭಿವ್ಯಕ್ತಿ ಎಂಬುದು ಸೃಜನಶೀಲ ಮನಸ್ಸಿನ ಸಹಜಸ್ಥಿತಿ. ಜನಪದರು ಜೀವನಾನುಭವಗಳನ್ನು ಪರಸ್ಪರರಲ್ಲಿ ಹಂಚಿಕೊಂಡು ಜೀವಂತವಾಗಿರಿಸಿಕೊಳ್ಳುತ್ತಿದ್ದರು. ತಾವು ಜೀವನದಲ್ಲಿ ಕಂಡುಂಡ ಅನುಭವಗಳನ್ನು ಮಕ್ಕಳಿಗೆ, ಮರಿಮಕ್ಕಳಿಗೆ, ಬಂಧು ಬಳಗಕ್ಕೆ ಹರಿದುಬರುವಂತೆ ಮಾಡಿದ್ದರು. ನೋವು ನಲಿವುಗಳಾಗಿರಬಹುದು, ಪ್ರೀತಿ–ಪ್ರೇಮ, ಭಕ್ತಿ, ನೀತಿ ಯಾವುದೇ ಆಗಿರಬಹುದು. ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹಾಡುಗಬ್ಬಗಳ ರೂಪದಲ್ಲೋ ಗಾದೆ, ಒಗಟುಗಳ ರೂಪದಲ್ಲೋ ಸಾಗಿಸಿದರು. ಹೀಗೆ ಅಜ್ಞಾತಮೂಲದಿಂದ ಆರಂಭವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದ ಅಮರ ಸಾಹಿತ್ಯವೇ ಜನಪದ ಸಾಹಿತ್ಯ.

ಮಾನವೀಯ ಮೌಲ್ಯಗಳನ್ನು ಅರಿಯಲು, ಸಮಾಜದ ಬಗ್ಗೆ ತಿಳಿಯಲು, ನಿರ್ಲಕ್ಷ್ಯ ಜನಾಂಗದ ಬದುಕನ್ನು ಅರ್ಥಮಾಡಿಕೊಳ್ಳಲು, ಸಂಸ್ಕೃತಿಯ ಹಿರಿಮೆಯನ್ನು ಗುರುತಿಸಲು ಜಾನಪದ ನೆರವಾಗುತ್ತದೆ. ಜಾನಪದವು ಮಾನವ ನಾಗರಿಕತೆಯೆಂಬ ಸರಪಣಿಯ ಕೊಂಡಿಯಾಗಿ ಕಾರ್ಯನಿರ್ವಹಿಸಬಲ್ಲುದು ಅಂದರೆ ವರ್ತಮಾನ ಕಾಲಕ್ಕೆ ಭೂತಕಾಲದ ಕೊಂಡಿಯನ್ನು ಸೇರಿಸುವ ಕೈಂಕರ್ಯವನ್ನು ನಿರ್ವಹಿಸುವಂತಹದ್ದು.

# UNIT FRAME

ಘಟಕ 2 : ಜನ – ಜಾನಪದ ಸಮಯ : 30 ಪಿರೇಡುಗಳು

**ಕಲಿಕಾ ಸಾಧನೆಗಳು :**

- ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಅಡಕವಾಗಿರುವ ಜೀವನ ಮೌಲ್ಯ, ವಿಡಂಬನೆ ಮೊದಲಾದವುಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು.
- ವಿವಿಧ ರೀತಿಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರ ವಿಚಾರಗಳನ್ನು, ಸಾಂಸ್ಕೃತಿಕ ಮೌಲ್ಯಗಳನ್ನು ನಿತ್ಯ ಜೀವನದಲ್ಲಿ ರೂಢಿಸಿಕೊಳ್ಳುವುದು.
- ಗಾದೆಮಾತು, ನಾಣ್ನುಡಿ, ಒಗಟು ಮೊದಲಾದ ಭಾಷಾ ಪ್ರಯೋಗಗಳನ್ನು ಆಯಾ ಸಂದರ್ಭದಲ್ಲಿ ವಿಶ್ಲೇಷಿಸಿ ಸ್ವಾರಸ್ಯ ಬರೆಯುವುದು.
- ಜನಪದ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಗ್ರಾಮೀಣ ಬದುಕಿನ ಚಿತ್ರಣ, ಸಾಂಸ್ಕೃತಿಕ ವಿಚಾರಗಳನ್ನು ಕಂಡುಕೊಂಡು ಸೂಕ್ತ ಸಂದರ್ಭಗಳಲ್ಲಿ ಪ್ರಕಟಿಸುವುದು.

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ❑ ಜನಪದ ಹಾಡು, ಕಥೆಗಳು, ಲಾವಣಿಗಳು ಗ್ರಾಮ್ಯ ಬದುಕಿನ ಮೌಲ್ಯಗಳ ಪ್ರತಿಫಲನವಾಗಿದೆ. | • ಜನಪದ ಹಾಡುಗಳ ಕುರಿತಾದ ಪೂರ್ವಜ್ಞಾನವನ್ನು ತಿಳಿಯುವುದು. ಪಾಠಭಾಗದಲ್ಲಿ ಬಂದಿರುವ ತ್ರಿಪದಿಗಳನ್ನು ರಾಗ ತಾಳ ಭಾವದೊಂದಿಗೆ ಹಾಡುವುದು–ಐಸಿಟಿ ಬಳಕೆ<br>• ಜನಪದ ಶೈಲಿ, ಭಾಷಾ ಪ್ರಯೋಗಗಳ ವಿಶೇಷತೆಗಳನ್ನು ಗುರುತಿಸಿ ವಿಶ್ಲೇಷಿಸುವುದು. ಗ್ರಾಮ್ಯ ರೂಪಗಳಿಗೆ ಶಿಷ್ಟರೂಪಗಳನ್ನು ಬರೆಯುವುದು. ಮಂಡಿಸಿ ಉತ್ತಮಪಡಿಸುವುದು.<br>• ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಆಶಯಗಳನ್ನು ಗುಂಪಿನಲ್ಲಿ ಚರ್ಚಿಸುವುದು. | • ರಾಗತಾಳ ಭಾವದೊಂದಿಗೆ ಹಾಡುವ ನೈಪುಣ್ಯ.<br>• ಗ್ರಾಮ್ಯಪದಗಳ ಶಿಷ್ಟರೂಪವನ್ನು ಕಂಡುಕೊಳ್ಳುವ ಸಾಮರ್ಥ್ಯ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಅಡಕವಾಗಿರುವ ಜೀವನ ಮೌಲ್ಯ ವಿಡಂಬನೆ ಮೊದಲಾದವುಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು.<br>• ವಿವಿಧ ರೀತಿಯ ಕೃತಿಗಳನ್ನು ಓದಿ ವಿಶ್ಲೇಷಣೆ ಮಾಡುವುದರ ಮೂಲಕ ಪರಂಪರೆಯಿಂದ ಹರಿದು ಬಂದ ಆಚಾರ ವಿಚಾರಗಳನ್ನು ಸಾಂಸ್ಕೃತಿಕ ಮೌಲ್ಯಗಳನ್ನು ನಿತ್ಯ ಜೀವನದಲ್ಲಿ ರೂಢಿಸಿಕೊಳ್ಳುವುದು.<br>• ಗಾದೆ ಮಾತು, ನಾಣ್ಣುಡಿ, ಒಗಟು ಮೊದಲಾದ ಭಾಷಾ ಪ್ರಯೋಗಗಳನ್ನು ಆಯಾ ಸಂದರ್ಭದಲ್ಲಿ ವಿಶ್ಲೇಷಿಸಿ ಸ್ವಾರಸ್ಯ ಬರೆಯುವುದು.<br>• ಜನಪದ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಗ್ರಾಮೀಣ ಬದುಕಿನ ಚಿತ್ರಣ, ಸಾಂಸ್ಕೃತಿಕ ವಿಚಾರಗಳನ್ನು ಕಂಡುಕೊಂಡು ಸೂಕ್ತ ಸಂದರ್ಭಗಳಲ್ಲಿ ಪ್ರಕಟಿಸುವುದು. | • ಗ್ರಾಮೀಣ ಬದುಕಿನ ಮೌಲ್ಯಗಳ ಅರಿವನ್ನು ಪಡೆಯುತ್ತಾರೆ.<br>• ಜನಪದ ಶಿಷ್ಟ ಸಂಬಂಧದ ಬಗ್ಗೆ ಅರಿವು |
| ❑ ತಾಯಿ ತವರು, ಮಾತೃ ವಾತ್ಸಲ್ಯ ಅಣ್ಣ ತಂಗಿ ಬಾಂಧವ್ಯ. ಕಾರ್ಯನಿಷ್ಠೆ, ಬೇಸಾಯದ ಮಹತ್ವ ಇವೇ ಮೊದಲಾದ ವಿಚಾರಗಳು ತ್ರಿಪದಿಗಳಲ್ಲಿ ನೆಲೆಗೊಂಡಿವೆ.<br>❑ ಜನಪದ ಗಾದೆಗಳು, ಒಗಟುಗಳು, ನಾಣ್ಣುಡಿ, ಜೀವಾನುಭವದ ಅಮೃತವಾಣಿಗಳಾಗಿವೆ. | • ಆಶಯಗಳನ್ನು ಬರೆಯುವುದು ಗುಂಪಿನಲ್ಲಿ ಮಂಡಿಸುವುದು. ಪರಸ್ಪರ ಮೌಲ್ಯಮಾಪನ. ಅಗತ್ಯವಾದ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆಯುವಲ್ಲಿ ನೆರವಾಗುವುದು.<br>• ಜನಪದ ಗೀತೆಗಳಲ್ಲಿ ಮೂಡಿ ಬಂದಿರುವ ಗ್ರಾಮೀಣ ಬದುಕಿನ ಚಿತ್ರಣವನ್ನು ಓದಿ ವಿಶ್ಲೇಷಿಸುವುದು. ಟಿಪ್ಪಣಿ ಬರೆಯುವುದು.<br>• ಜನಪದ ಗಾದೆಗಳು, ನಾಣ್ಣುಡಿಗಳನ್ನು ತರಗತಿಯಲ್ಲಿ ಮಂಡಿಸುವುದು ಅರ್ಥವ್ಯಾಖ್ಯಾನಿಸಿ ಸ್ವಾರಸ್ಯ ಬರೆಯುವುದು. ಗಾದೆಗಳ ಆಶಯವನ್ನು ವಿಸ್ತರಿಸುವುದು. ಆಶಯವನ್ನು ವಿಸ್ತರಿಸಿ ಕಥೆ ಬರೆಯುವುದು–ಕಥಾ ರಚನ ಕಮ್ಮಟ. | • ಗ್ರಾಮೀಣ ಬದುಕಿನ ಚಿತ್ರಣವನ್ನು ವಿಶ್ಲೇಷಿಸಿ ಟಿಪ್ಪಣಿ ಬರೆಯುತ್ತಾರೆ.<br>• ಜನಪದ ಗಾದೆಗಳ, ನಾಣ್ಣುಡಿಗಳ ಅರ್ಥವನ್ನು ವಿವೇಚಿಸಿ ಸ್ವಾರಸ್ಯವನ್ನು ನಿರೂಪಿಸುತ್ತಾರೆ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ❑ ಒಂದು ಪ್ರದೇಶದ ಸಾಂಸ್ಕೃತಿಕ ವಿಚಾರಗಳು ಸಾಹಿತ್ಯ ರೂಪಗಳಲ್ಲಿ, ಕಲಾ ರೂಪಗಳಲ್ಲಿ, ಆರಾಧನಾ ಕಲೆಗಳಲ್ಲಿ ವ್ಯಕ್ತವಾಗುತ್ತವೆ. ಯಕ್ಷಗಾನವು ಅಂತಹ ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸುವ ಕಲೆಯಾಗಿವೆ. | • ಜನಪದ ಸಂಸ್ಕೃತಿಯ ಅಭಿವ್ಯಕ್ತಿ ಮಾಧ್ಯಮಗಳಾದ ವಿವಿಧ ಕಲಾ ರೂಪಗಳ, ಆರಾಧನಾ ಕಲೆಗಳ ಸ್ಥೂಲ ಪರಿಚಯವನ್ನು ನೀಡುವುದು.<br>• ಜನಪದ ಕಲೆಗಳಲ್ಲಿ, ಆರಾಧನಾ ವಿಚಾರಗಳಲ್ಲಿ ಆಯಾ ಕಾಲದ ಸಂಸ್ಕೃತಿ ಹೇಗೆ ಪ್ರತಿಫಲಿತವಾಗಿವೆ ಎಂಬುದರ ಜಿಜ್ಞಾಸೆ, ಗುಂಪು ಚರ್ಚೆ.<br>• ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು–ಆಶಯಗಳನ್ನು ಕ್ರೋಡೀಕರಿಸಿ ಟಿಪ್ಪಣಿ ಬರೆಯುುವುದು, ಪರಸ್ಪರ ಮೌಲ್ಯಮಾಪನದೊಂದಿಗೆ ಉತ್ತಮಪಡಿಸುವುದು. | • ಜನಪದ ಕಲೆಗಳಲ್ಲಿ ಅಡಕವಾಗಿರುವ ಆಯಾ ಕಾಲಘಟ್ಟದ ಸಂಸ್ಕೃತಿಯನ್ನು ಪರಾಮರ್ಶಿಸಿ ಟಿಪ್ಪಣಿ ತಯಾರಿಸುತ್ತಾರೆ. |
| ❑ ಯಕ್ಷಗಾನದ ಆಟಕೂಟಗಳೆಂಬ ಪ್ರಕಾರಗಳಲ್ಲಿ ಅಭಿನಯ ಸಾಮರ್ಥ್ಯ, ವಾಕ್ ಚಾತುರ್ಯಗಳಿಂದ ಜನ ಮನ್ನಣೆಗಳಿಸಿದ ಮಹಾನ್ ಕಲಾವಿದರ ಸಾಧನೆ ಅಸದೃಶವಾದುದಾಗಿದೆ. | • ಯಕ್ಷಗಾನ ಕಲೆಯ ಕುರಿತು ತಮಗಿರುವ ಸಾಮಾನ್ಯ ಜ್ಞಾನವನ್ನು ಬಾಯ್ದೆರೆಯಾಗಿ ಹೇಳುವುದು. ಅಧ್ಯಾಫಕರು ಮುಂದುವರಿಸಿ ಯಕ್ಷಗಾನ ಕಲೆಯ ಕುರಿತಾಗಿ ವಿವರಣೆ ನೀಡುವುದು.<br>• ಆಟಕೂಟಗಳ ನಡುವಿನ ವ್ಯತ್ಯಾಸವನ್ನು ಹೇಳುವುದು, ತಾಳಮದ್ದಳೆಯ ಕುರಿತಾದ ಕಿರು ಪರಿಚಯ ಶೇಣಿ–ಗೋಪಾಲಕೃಷ್ಣ ಭಟ್ಟರ ಪರಿಚಯವನ್ನು ನೀಡುವುದು.<br>• ಪ್ರತಿನಾಯಕ ಪಾತ್ರ–ವೈವಿಧ್ಯಮಯ ಪಾತ್ರ ನಿರ್ವಹಿಸಿದ ರೀತಿ–ಹೀಗೆ ಹಲವು ವಿಷಯಗಳ ಕುರಿತಾದ ಚರ್ಚೆ–ವ್ಯಕ್ತಿಪರಿಚಯ ಲೇಖನ ಸಿದ್ಧಪಡಿಸುವುದು. ICT ಯ ಬಳಕೆ. | • ಅಭಿಪ್ರಾಯಗಳನ್ನು ಪ್ರಕಟಿಸುವ ಸಾಮರ್ಥ್ಯ<br>• ಮಹಾನ್ ಸಾಧಕರ ಜೀವನ ಸಾಧನೆಗಳನ್ನು ಗುರುತಿಸಿಕೊಂಡು, ವ್ಯಕ್ತಿತ್ವವನ್ನು ತಿಳಿದುಕೊಂಡು ವ್ಯಕ್ತಿಚಿತ್ರಣ ಮಾಡುತ್ತಾರೆ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ❑ ಭೂತಾರಾಧನೆ, ತೆಯ್ಯಂ ಆರಾಧನೆಗಳ ತಾತ್ವಿಕ ಹಿನ್ನೆಲೆ ಒಂದೇ ಆಗಿದ್ದರೂ ಆಚರಣೆಯ ವಿಧಿ ವಿಧಾನಗಳಲ್ಲಿ ವ್ಯತ್ಯಾಸವಿದೆ. | • ವಿದ್ಯಾರ್ಥಿಗಳು ತಮ್ಮ ಸುತ್ತುಮುತ್ತಲಿನಲ್ಲಿ ನಡೆಯುವ ಭೂತ ಅಥವಾ ತೆಯ್ಯಂ ಆರಾಧನೆಯ ವಿಧಿ ವಿಧಾನಗಳನ್ನು ನೋಡಿ ತಿಳಿದಿರುವರು. ತಮ್ಮ ಅನುಭವಗಳನ್ನು ಬಾಯ್ದರೆಯಾಗಿ ಹೇಳುವುದು.<br>• ವಿದ್ಯಾರ್ಥಿಗಳು ಹೇಳಿದ ಅನುಭವಗಳನ್ನು ಆಧರಿಸಿಕೊಂಡು ಭೂತಾರಾಧನೆ ಮತ್ತು ತೈಯ್ಯಂ ಆರಾಧನೆಯ ವಿಧಿ ವಿಧಾನಗಳ ಕುರಿತಾದ ಮಾಹಿತಿ ನೀಡುವುದು. ವಿಷಯಗಳನ್ನು ಕ್ರೋಡೀಕರಿಸಿ ಲೇಖನ ಬರೆಯುವುದು. ಪಾಠಭಾಗದಲ್ಲಿ ಬಂದಿರುವ ವಿಚಾರಗಳನ್ನು ಓದುವುದು. | • ಕಿರು ಲೇಖನ |
| | • ಭೂತಾರಾಧನೆ ಮತ್ತು ತೆಯ್ಯಂ ಆರಾಧನೆಯ ಸಾಮ್ಯವ್ಯತ್ಯಾಸಗಳ ಕುರಿತು ತುಲನಾತ್ಮಕ ಟಿಪ್ಪಣಿ ಬರೆಯುವುದು. ತರಗತಿಯಲ್ಲಿ ಮಂಡಿಸಿ ಪರಿಷ್ಕರಿಸಿ ಬರೆಯುವುದು.<br>• ಭೂತ ಅಥವಾ ತೆಯ್ಯ ಆಚರಣೆಗೆ ಸಂಬಂಧಿಸಿದ ಸಾಂಸ್ಕೃತಿಕ ಪದಕೋಶವನ್ನು ತಯಾರಿಸುವುದು, ಭೂತ ಕಟ್ಟುವ ಕಲಾವಿದರನ್ನು ಸಂದರ್ಶನೆ ನಡೆಸಲು ಅಗತ್ಯವಾದ ಪ್ರಶ್ನಾವಳಿಗಳನ್ನು ತಯಾರಿಸುವುದು. | • ಸಾಮ್ಯ ವ್ಯತ್ಯಾಸಗಳನ್ನು ಗುರುತಿಸಿಕೊಂಡು ತುಲನಾತ್ಮಕ ಟಿಪ್ಪಣಿ ತಯಾರಿಸುತ್ತಾರೆ.<br>• ಸಾಂಸ್ಕೃತಿಕ ಪದಕೋಶ<br>• ಸಂದರ್ಶನ ಪ್ರಶ್ನಾವಳಿ. |

# ಇದ್ಯ ಬಲ್ಲವಗೆ ಭಯವುಂಟೆ

## ಪ್ರವೇಶ

ಯಾವುದೇ ಭಾಷೆಯ ಸಾಹಿತ್ಯವನ್ನು ಶಿಷ್ಯಸಾಹಿತ್ಯ ಮತ್ತು ಜನಪದ ಸಾಹಿತ್ಯ ಎಂದು ಎರಡು ವಿಭಾಗಗಳಾಗಿ ಗುರುತಿಸಬಹುದು. 'ಜನವಾಣಿ ಬೇರು, ಕವಿವಾಣಿ ಹೂವು' – ಎಂಬ ಬಿ.ಎಂ.ಶ್ರೀ. ಅವರ ಮಾತಿನಂತೆ ಎಲ್ಲಾ ಭಾಷೆಗಳ ಶಿಷ್ಟ ಸಾಹಿತ್ಯಕ್ಕೂ ಜನಪದ ಸಾಹಿತ್ಯವೇ ಪ್ರೇರಕ, ಪೋಷಕ. ಆದಿ ಮಾನವನ ಉಗಮದಿಂದ ನಾಗರಿಕ ಸಂಸ್ಕೃತಿಯ ತನಕ ಗಮನಿಸಿದರೆ, ಮನುಷ್ಯನ ಭಾವೋತ್ಕರ್ಷ ಮತ್ತು ಸಹಜ ಚಟುವಟಿಕೆಗಳ ಪರಿಣಾಮವಾಗಿ ಜನಪದ ಸಾಹಿತ್ಯ ಉಗಮಗೊಂಡಿದೆಯೆಂದು ಹೇಳಬಹುದು. ದುಡಿಮೆಯ ಹಾಗೂ ಜೀವನದ ವಿವಿಧ ಸನ್ನಿವೇಶಗಳ ಜೊತೆ ಬೆಸೆದುಕೊಂಡೇ ವಿವಿಧ ಪ್ರಕಾರಗಳ ಆವಿಷ್ಕಾರವಾಯಿತು. ಅದು ಗೀತೆ, ಕತೆ, ಒಗಟು, ಗಾದೆಗಳು ಹೀಗೆ ವಿವಿಧ ರೂಪಗಳನ್ನು ತಳೆಯಿತು. ಜನಪದ ಕವಿಯ ಅನುಭವಕೋಶ ಹಿಗ್ಗಿದಂತೆಲ್ಲ ಇವುಗಳ ಗುಣಗಾತ್ರಗಳು ವಿಶಾಲವಾದುವು. ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂತು. ಈ ನಿಟ್ಟಿನಲ್ಲಿ ಜನಪದ ಸಾಹಿತ್ಯದಲ್ಲಿ ಗೀತೆಗಳು ಅಗ್ರಸ್ಥಾನದಲ್ಲಿ ನಿಲ್ಲುತ್ತವೆ. ಅವು ಇತರ ಪ್ರಕಾರಗಳಿಗಿಂತ ಪ್ರಾಚೀನವೂ ಹೌದು. ಆಶ್ಚರ್ಯ, ಭೀತಿ, ಸಂತೋಷಭಾವಗಳು ತರಂಗಗಳಂತೆ ಲಯಬದ್ಧವಾಗಿ ಹೊರಹೊಮ್ಮಿದಾಗ ಜನಪದ ಗೀತೆ ಉದಯವಾಯಿತೆನ್ನಬಹುದು.  ಓದು ಬರಹ ಬಾರದ, ಹೊಲ ಗದ್ದೆಗಳಲ್ಲಿ ದುಡಿಯುವ ಜನಪದರು ನಿಸರ್ಗದೊಂದಿಗೆ ಬೆಸೆದುಕೊಂಡವರು. ಜನಪದ ಗೀತೆಗಳು ಜೀವನದ ಸಮಸ್ತ ಮುಖಗಳ ಅಭಿವ್ಯಕ್ತಿಯಾಗಿವೆ. ಅತ್ತೆ–ಸೊಸೆ, ತಾಯಿ–ಮಗಳು, ಅಣ್ಣ – ತಂಗಿ, ಅತ್ತಿಗೆ – ನಾದಿನಿ, ಪ್ರಣಯ, ಕೃಷಿ ಹೀಗೆ ನೂರಾರು ಸಂಗತಿಗಳು ಗೀತೆಗಳಲ್ಲಿ ಆವಿರ್ಭಾವಗೊಂಡಿವೆ. ಆದ್ದರಿಂದಲೇ ಜನಪದ ಗೀತೆಗಳನ್ನು ಜನಪದ ಸಂಸ್ಕೃತಿಯ ಭಾಗ ಎಂದು ಕರೆಯಲಾಗಿದೆ. ಜನಪದ ಗೀತೆಗಳನ್ನು ಲಾವಣಿಗಳು, ಗೀತೆಗಳು, ಕೆಲಸದ ಹಾಡುಗಳು ಹೀಗೆ ನಾನಾ ವಿಧವಾಗಿ ವರ್ಗೀಕರಿಸಬಹುದು. ಅಜ್ಞಾತಕರ್ತೃತ್ವ, ಸಾಮೂಹಿಕ ಸೃಷ್ಟಿ, ಜನಪ್ರಿಯತೆ, ಪಾಠಾಂತರ, ಗೇಯತೆ ಮತ್ತು ಸರಳತೆ ಎಂಬಿವು ಜನಪದ ಗೀತೆಗಳ ಪ್ರಮುಖ ಲಕ್ಷಣಗಳಾಗಿವೆ.

## ಪೂರ್ವಜ್ಞಾನ

- ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ಜನಪದ ಗೀತೆಗಳನ್ನು ಅಧ್ಯಯನ ಮಾಡಿರುತ್ತಾರೆ.
- ಜನಪದ ಗೀತೆಗಳನ್ನು ಹಾಡಿದ ಧ್ವನಿ ಸುರುಳಿಯನ್ನು ಕೇಳಿರುತ್ತಾರೆ.
- ಇಂದು ಸಿನೆಮಾಗಳಲ್ಲೂ ಜನಪದ ಗೀತೆಗಳು ಬಳಕೆಗೊಂಡುದನ್ನು ನೆನೆದುಕೊಳ್ಳುತ್ತಾರೆ.

ವಿದ್ಯಾರ್ಥಿಗಳು ತಮಗೆ ತಿಳಿದಿರುವ ಜನಪದ ಹಾಡುಗಳನ್ನು ವೈಯಕ್ತಿಕವಾಗಿ ಹಾಡಲಿ. ಬಳಿಕ ಪಾಠಭಾಗದಲ್ಲಿ ಬಂದಿರುವ ತ್ರಿಪದಿಗಳನ್ನು ಹಾಡುವಂತೆ ಸೂಚಿಸುವುದು. ತ್ರಿಪದಿಗಳನ್ನು ಜಾನಪದ ಶೈಲಿಯಲ್ಲಿ ರಾಗ, ತಾಳಲಯಬದ್ಧವಾಗಿ ಹಾಡುವುದು. ಈ ಸಂದರ್ಭದಲ್ಲಿ ತ್ರಿಪದಿಗಳನ್ನು ಹಾಡಿದ ಧ್ವನಿಸುರುಳಿಯನ್ನೂ ಇಲ್ಲಿ ಬಳಸಿಕೊಳ್ಳಬಹುದು.

## ಆಶಯಗ್ರಹಣ

ತ್ರಿಪದಿಗಳ ಆಶಯವನ್ನು ತಿಳಿಯಬೇಕಾದರೆ ತ್ರಿಪದಿಗಳಲ್ಲಿ ಬಂದಿರುವ ಪದಗಳ / ಸಾಲುಗಳ ವಾಚ್ಯಾರ್ಥವನ್ನೂ ಸೂಚ್ಯಾರ್ಥವನ್ನೂ ತಿಳಿದುಕೊಳ್ಳಬೇಕಾಗುತ್ತದೆ.

ತ್ರಿಪದಿಗಳಲ್ಲಿ ಬಂದಿರುವ ಗ್ರಾಮ್ಯಪದಗಳಿಗೆ ಅರ್ಥಕೋಶದ ಸಹಾಯದಿಂದಲೋ, ಜಾನಪದ ನಿಘಂಟಿನ ಆಧಾರದಲ್ಲಿಯೋ, ಅರ್ಥ ವಿವರಣೆಯನ್ನು ಕಂಡುಕೊಳ್ಳಲಿ. ತರಗತಿಯಲ್ಲಿ ಅದನ್ನು ಪ್ರಸ್ತುತಪಡಿಸಲಿ. ಅಧ್ಯಾಪಕರು ಸೂಕ್ತವಾದ ಮಾರ್ಗದರ್ಶನ ನೀಡುವುದು. ಅಗತ್ಯವಾದ ತಿದ್ದುಪಡಿಗಳೊಂದಿಗೆ ಬರೆದುಕೊಂಡು log book ನಲ್ಲಿ ದಾಖಲಿಸುವುದು.

| | | |
|---|---|---|
| ಇದ್ಯ | – | ವಿದ್ಯೆ |
| ಕರಕಿ | – | ಒಂದು ಜಾತಿಯ ಸಸ್ಯ |
| ಮೊಳ | – | ಎರಡು ಗೇಣು<br>(ಮೊಳಕೈಯಿಂದ ನಡುಬೆರಳಿನ ತುದಿಯ ವರೆಗಿನ ಅಳತೆ) |
| ನಿದ್ದಿ | – | ನಿದ್ದೆ |
| ಚೂಡಾಮಣಿ | – | ಜುಟ್ಟಿನಲ್ಲಿ ಧರಿಸುವ ಆಭರಣ, ಸರ್ವಶ್ರೇಷ್ಠವಾದುದು |

## ಶಿಷ್ಟರೂಪ ಬರೆಯುವುದು

ತ್ರಿಪದಿಗಳಲ್ಲಿ ಬಂದಿರುವ ಗ್ರಾಮ್ಯ ಪದಗಳನ್ನು ಗುರುತಿಸಿ ಬರೆದಿಟ್ಟುಕೊಳ್ಳುವುದು. ಬಳಿಕ ಅವುಗಳಿಗೆ ಶಿಷ್ಟರೂಪವನ್ನು ಬರೆಯಲಿ. ಬಳಿಕ ತರಗತಿಯಲ್ಲಿ ಮಂಡಿಸುವುದು.

| | | | | | |
|---|---|---|---|---|---|
| ತಂದೀಯ | – | ತಂದೆಯನ್ನು | ಇದ್ಯ | – | ವಿದ್ಯೆ |
| ನಿದ್ದಿ | – | ನಿದ್ದೆ | ಇಂಗೋಗ್ಲಿ | – | ಇಂಗಿ ಹೋಗಲಿ |
| ಹೊಳದಂಡಿ | – | ಹೊಳೆಯದಂಡೆ | ಕಂದಯ್ನ | – | ಕಂದಯ್ಯನನ್ನು |

## ಆಶಯ ಬರೆಯುವುದು

ಪದ್ಯವನ್ನು ಹಾಡಿ ಆಸ್ವಾದಿಸಿದ ಬಳಿಕ ಒಂದೊಂದೇ ಪದ್ಯದ ಆಶಯವನ್ನು ಒಂದೊಂದು ಗುಂಪಿನವರು ಬಾಯ್ದೆರೆಯಾಗಿ ಹೇಳಲಿ. ಅಗತ್ಯವಿದ್ದರೆ ಅಧ್ಯಾಪಕರು ಸೂಕ್ತ ಮಾರ್ಗದರ್ಶನದೊಂದಿಗೆ ತಿದ್ದುಪಡಿಮಾಡುವುದು. ಅಥವಾ ಆಶಯಗ್ರಹಣ ಪ್ರಶ್ನೆಗಳನ್ನು ಕೇಳಿ ಆಶಯ ಬರೆಸಬಹುದು.

1. ತವರೂರು ಎಂದಿಗೂ ಚಿರಾಯುವಾಗಿರಬೇಕೆಂದು ಹೆಣ್ಣಿನ ಆಸೆ. ತಾಯಿಯ ಎದೆಹಾಲನ್ನುಂಡು ಹಾಲಿನಂತಹ ತಿಳಿಯಾದ ಪ್ರೀತಿಯ ಸವಿಯನ್ನುಂಡು ಬೆಳೆದ ತವರೂರು ಎಂದೆಂದಿಗೂ ಹಸಿರಾಗಿರಬೇಕು. ಆ ಹಸಿರು ಸಾಮಾನ್ಯ ಹಸಿರಲ್ಲ. ಅದು ಹೊಳೆದಂಡೆಯ ಮೇಲಿನ ಕರಕಿಯ ಹಸಿರು.

ಕರಕಿಯ ಹುಲ್ಲಿಗೆ ಅನೇಕ ವಿಶಿಷ್ಟ ಗುಣಗಳಿವೆ. ಬಿಸಿಲು, ಚಳಿ, ಮಳೆಯಲ್ಲಿ ಸದಾ ಹಸಿರಾಗಿರುತ್ತದೆ. ಕಲ್ಲುಬಂಡೆಯ ಸಣ್ಣ ಪೊದರಿನಲ್ಲಿ ಒಂದು ಬೇರು ಬಿಡಲು ಅವಕಾಶ ಬಿಟ್ಟರೆ ಅಲ್ಲೇ ಸೊಂಪಾಗಿ ಬೆಳೆಯಬಲ್ಲುದು. ಕರಕಿಯನ್ನು ಹಲವು ಶುಭ ಸಮಾರಂಭಗಳಲ್ಲಿ ಬಳಸುತ್ತಾರೆ. ಇಂತಹ ಕರಕಿಯ ಹಾಗೆ ತವರುಮನೆಯ ವಂಶ ಅವಿನಾಶಿಯಾಗಿ ಹಬ್ಬಲೆಂದು ಹಾರೈಕೆ ಅವಳದು. ಹೆಣ್ಣಿನ ಅಂತ: ಕರಣದಿಂದ ಮೂಡಿಬಂದ ಈ ಹಾರೈಕೆಯ ಗೀತೆ ತವರು ಮನೆಯ ಕುರಿತಾಗಿ ಅವಳ ಪ್ರೀತಿಯ ದ್ಯೋತಕ.

2. ತಾಯಿಯ ಎದೆಹಾಲು ಅಮೃತಕ್ಕೆ ಸಮಾನ, ಹುಟ್ಟಿದ ಕೂಸಿಗೆ ಮೊದಲ ಆಹಾರವೆಂದರೆ ಎದೆಹಾಲು. (ಅದರಲ್ಲಿ ಕಲಬೆರಕೆ ಇಲ್ಲ. ಒಳ್ಳೆಯ ಪ್ರತಿರೋಧ ಶಕ್ತಿ, ಉತ್ತಮ ಪೌಷ್ಟಿಕಾಂಶ ಹಾಗೂ ಉತ್ತಮ ಗುಣಗಳು ಈ ಎದೆಹಾಲಿನೊಂದಿಗೆ ಮಗುವಿಗೆ ದೊರಕುವುದು). ಹಣ್ಣು ಹಾಲು, ಬೆಣ್ಣೆ ತುಪ್ಪ, ಚೆನ್ನಾಗಿ ಕಳಿತ ರಸಬಾಳೆ ಇವೆಲ್ಲ ರುಚಿಯಾಗಿದ್ದು ಪೋಷಕಾಂಶ ಸಮೃದ್ಧವಾಗಿದ್ದರೂ ತಾಯಿಯ ಎದೆಹಾಲಿಗೆ ಸಮಾನವಾದುವಲ್ಲ. ಯಾಕೆಂದರೆ ಎದೆಹಾಲಿನೊಂದಿಗೆ ತಾಯಿಯ ಮಮತೆಯೂ ಬೆರೆತಿರುತ್ತದೆ. ತಾಯಿಯ ಎದೆಹಾಲಿನ ಮಹತ್ವವನ್ನು ಈ ಪದ್ಯಸಾರುತ್ತದೆ.

3. ಗ್ರಾಮೀಣ ಬಡಜನರ ಬೆಳಗ್ಗಿನ ಆಹಾರ ತಂಗುಳನ್ನ. ಅದನ್ನು ಸೇವಿಸಿ ಅವರು ಹೊಲಗದ್ದೆಗಳಿಗೆ ಕೆಲಸಕ್ಕೆ ಹೋಗುತ್ತಾರೆ. ಗಂಡನ ಮನೆಯಲ್ಲಿ ಬಡತನದಿಂದ ಬೆಂದುಹೋದ ಹೆಣ್ಣೊಬ್ಬಳು ತನ್ನ ತವರು ಮನೆಯನ್ನು ನೆನೆದುಕೊಂಡಾಗ ಅವಳ ಬಡತನ ಹೋಗಿ ಸಿರಿತನ ಬಂದಂತಾಯಿತು ಎಂದು ಸಂತೋಷ ಪಡುತ್ತಾಳೆ. ತಂದೆಯನ್ನು ನೆನೆದರೆ ತಂಗುಳನ್ನ ಕೂಡಾ ಬಿಸಿಯನ್ನವಾದ ಅನುಭವವಾಯಿತು. ಗಂಗಾನದಿಯ ನೀರು ಪವಿತ್ರವಾದುದು. ಎಂತಹ ಕೊಳೆ, ಪಾಪ ಇದ್ದರೂ ಅದು ನಿವಾರಣೆಯಾಗುತ್ತದೆ ಎಂದು ನಂಬಿಕೆ. ಆದ್ದರಿಂದಲೇ ಗಂಗಾದೇವಿಯಂತಹ ತಾಯಿಯನ್ನು ನೆನೆದಾಗ ಎಣ್ಣೆನೀರು ಕಾಣದ ತಲೆಗೆ ಎಣ್ಣೆ ಹಾಕಿ ತಂಪಾಗಿಸಿ ತೊಳೆದಂತಾಯಿತು, ಪರಿಶುದ್ಧವಾಯಿತು.

4. ಕೃಷಿಗೆ ಮೂಲ ಭೂಮಿ, ಭೂಮಿತಾಯಿ ಮಹಾಮಾತೆ. ಮನುಷ್ಯನನ್ನು ಪೋಷಿಸುವ ಭಾರ ಅವಳದೆ. ಸಕಲ ಚರಾಚರ ವಸ್ತುಗಳಿಗೆ ಅವಳೇ ಆಶ್ರಯದಾತೆ. ಆದ್ದರಿಂದ ಹಾಸಿಗೆಯಿಂದ ಎದ್ದೊಡನೆ ಅವಳನ್ನು ನೆನೆಯುವುದು ಪ್ರತಿಯೊಬ್ಬನ ಧರ್ಮ. (ಪ್ರಸ್ತುತ ಗೀತೆಯಲ್ಲಿ 'ಎಳ್ಳು ಜೀರಿಗೆ ಬೆಳೆಯೋಳಾ' – ಎಂಬಲ್ಲಿ ಆ ಪ್ರದೇಶದಲ್ಲಿ ಬೆಳೆಯುವಂತಹ ಬೆಳೆ – ಎಳ್ಳು ಜೀರಿಗೆ ಎಂದು ತಿಳಿಯಬೇಕು). ಈ ಎಳ್ಳು ಜೀರಿಗೆ ಬೆಳೆವಂತಹ ಭೂಮಿತಾಯಿಯನ್ನು ಜನಪದ ಕವಿಯು ಭಕ್ತಿ ಕೃತಜ್ಞತೆಗಳಿಂದ ಬೆಳಿಗ್ಗೆ ಎದ್ದಕೂಡಲೇ ಒಂದೊಂದು ಗಳಿಗೆ ಹೊತ್ತು ಸ್ಮರಿಸುತ್ತಾನೆ.

5. 'ಕೈ ಕೆಸರಾದರೆ ಬಾಯಿ ಮೊಸರು' – ಎಂಬ ಗಾದೆಯ ಹಾಗೆ ಈ ಪದ್ಯದಲ್ಲಿ ದುಡಿಮೆಯ ಮಹತ್ವವು ನಿರೂಪಣೆಗೊಂಡಿದೆ. ಕೃಷಿ ಮಾಡಲು ಭೂಮಿ ಹೇಗೆ ಮುಖ್ಯವೋ, ಆ ಭೂಮಿಯನ್ನು ಫಲವತ್ತಾಗಿಸಲು ದನಕರುಗಳೂ ಮುಖ್ಯವಾಗಿ ಬೇಕು. ಅವುಗಳ ಗೊಬ್ಬರ ಬೇಕು. ಕಸ ಸೆಗಣಿಗಳು ರೈತನ ದೃಷ್ಟಿಯಲ್ಲಿ

ಅಸಹ್ಯವಾದುದಲ್ಲ. ಆತನು ಮೂರು ಹೊತ್ತೂ ಅವುಗಳಲ್ಲೇ ಒದ್ದಾಡುತ್ತಾನೆ. ಅವನ ಮೈಕೈ ಬಟ್ಟೆಬರೆಗಳಲ್ಲಿ ಅವುಗಳ ವಾಸನೆ ತುಂಬುತ್ತದೆ. ದನದ ಮೂತ್ರ ಸೆಗಣಿ ಇಲ್ಲದಿದ್ದರೆ ಧನಧಾನ್ಯ ವೃದ್ಧಿಯಾಗುವುದಿಲ್ಲ. ಆದ್ದರಿಂದ ಸೆಗಣಿ ನಾತವಾದರೂ ಅದರಿಂದಾಗಿ ಉತ್ತಮ ಫಸಲು ಬಂದಾಗ ಕೈಯೆಲ್ಲವೂ ಯಾಲಕ್ಕಿ ಪರಿಮಳದಿಂದ ತುಂಬಿಕೊಳ್ಳುತ್ತದೆ. ಯಾಲಕ್ಕಿ ಪರಿಮಳ ಎಂಬಲ್ಲಿ ಸೆಗಣಿ ಮೇಲಿನ ಕೃತಜ್ಞತೆಯ ಭಾವ ಮತ್ತು ಫಸಲಿನ ಲಾಭ ಸೂಚಿತವಾಗುತ್ತವೆ.

6. ಬಡತನ ನೀಗಿಸಲು ತನ್ನ ಕಂದಯ್ಯನ ಹಸಿವನ್ನು ದೂರಮಾಡಲು ಪೈರು ಮಾರುದ್ದ ಬೆಳೆಯಬೇಕು. ಮೊಳದಷ್ಟು ನೀಳವಾದ ತೆನೆಯಾಗಬೇಕು. ಈ ರೀತಿ ಕೃಷಿಯಾದರೇನೇ ಬಡತನ ಹೋಗಿ ಸಿರಿತನ ಬರಬಹುದು ಎಂದು ರೈತನ ಬಯಕೆ. ಹಾಗೆ ಆಗಲೆಂಬ ಹಾರೈಕೆ.

7. ನಿದ್ದೆ, ಬುದ್ಧಿ, ವಿದ್ಯೆ ಇವುಗಳಿಗೆ ಸಮಾನವಾದುದು ಯಾವುದೂ ಇಲ್ಲ. ನಿದ್ದೆಯನ್ನು ತಡೆಯುವುದು ಸಾಧ್ಯವಿಲ್ಲ. ನಿದ್ದೆಗೆ ನಿದ್ದೆಯೇ ಆಗಬೇಕು. ನಿದ್ದೆಯಿಂದಲೇ ಮರುದಿನದ ಕೆಲಸದಲ್ಲಿ ಉತ್ಸಾಹ. ಉತ್ತಮ ಬುದ್ಧಿವಂತಿಕೆಗೆ ಯಾವುದೇ ಕೇಡು, ಹಾನಿ ಇಲ್ಲ. ವಿದ್ಯೆ ಎಂದರೆ ಜ್ಞಾನ. ಅದನ್ನು ಗಳಿಸಿಕೊಂಡವನಿಗೆ ಭಯವೆಂಬುದಿಲ್ಲ. ಅದು ವಿವೇಕವನ್ನು ತಂದುಕೊಡುತ್ತದೆ. (ವಿದ್ಯೆಯುಳ್ಳವನ ಮುಖವು ಮುದ್ದುಬರುವಂತಿಕ್ಕು...... ಎಂದು ಸರ್ವಜ್ಞನೇ ವಿದ್ಯೆಯ ಮಹತ್ವವನ್ನು ತಿಳಿಸಿದ್ದಾನೆ). ಲೋಕದಲ್ಲಿ ಹುಟ್ಟು ಮತ್ತು ಸಾವುಗಳನ್ನು ದೂರಮಾಡಲು ಯಾವುದೇ ಮಾರ್ಗವಿಲ್ಲ. ಜನನ ಮತ್ತು ಮರಣ ನಮ್ಮ ಕೈಯ್ಯಲ್ಲಿಲ್ಲ ಎಂದು ಈ ಸಾಲಿನ ತಾತ್ಪರ್ಯ.

8. ನಮ್ಮ ಸಮಾಜದಲ್ಲಿ ಅನೇಕ ದುಶ್ಚಟಗಳು ತಾಂಡವವಾಡುತ್ತಿವೆ. ಅವುಗಳಲ್ಲಿ ಜೂಜಾಟವೂ ಒಂದು. ಪುರಾಣ ಕಥೆಯಲ್ಲಿ ಪಾಂಡವರು, ನಳ ಚಕ್ರವರ್ತಿ ಮುಂತಾದವರು ಇಂತಹ ಜೂಜಾಟವಾಡಿ ತಮ್ಮ ರಾಜ್ಯಕೋಶಗಳನ್ನೇ ಕಳೆದುಕೊಂಡರು. ಹಾಗೆ ತನ್ನ ಕಂದನು ಇಂತಹ ದುಶ್ಚಟಗಳಿಗೆ ಬಲಿಯಾಗದಿರಲಿ ಎಂಬ ಹಾರೈಕೆಯನ್ನು ಇಲ್ಲಿ ಕಾಣಬಹುದು.

9. ತನ್ನ ಕಂದ ಆಚಾರಕ್ಕೆ ಅರಸನಾಗಬೇಕು. ನೀತಿಗೆ ಪ್ರಭುವಾಗಬೇಕು. ಮಾತಿನಲ್ಲಿ ಸರ್ವಶ್ರೇಷ್ಠನಾಗಿರಬೇಕು. ಅಂದರೆ ಆಚಾರ, ನೀತಿ, ಮಾತು ಈ ಮೂರರಲ್ಲೂ ಆತ ಶ್ರೇಷ್ಠನಾಗಬೇಕು. ಅವನು ಲೋಕಕ್ಕೆ ಮಾರ್ಗದರ್ಶಕನಾಗಬೇಕು ಎಂದು ತಾಯಿಯು ಹಾರೈಸುತ್ತಾಳೆ.

**ವಿಶದೀಕರಣ**

**ನಳಚಕ್ರವರ್ತಿ**

ನಿಷಧ ದೇಶದಲ್ಲಿ ನಳ ಎಂಬ ರಾಜ ಇದ್ದ. ಆತ ರಾಜ ವೀರಸೇನನ ಮಗ. ಅವನು ಗುಣವಂತ, ಸುರೂಪಿ ಬಲಿಷ್ಠ ಮಾತ್ರವಲ್ಲ; ಅಶ್ವವಿದ್ಯಾಚತುರನೂ ಆಗಿದ್ದ, ದ್ಯೂತಕ್ರೀಡೆಯಲ್ಲಿ ಪಟುವೂ ಆಗಿದ್ದ. ಆತ ವಿದರ್ಭದೇಶದ

ಭೀಮರಾಜನ ಮಗಳಾದ ದಮಯಂತಿಯನ್ನು ಸ್ವಯಂವರದಲ್ಲಿ ಮದುವೆಯಾದ. ಅವಳ ಸ್ವಯಂವರಕ್ಕೆ ಇಂದ್ರಾದಿ ದೇವತೆಗಳೂ, ರಾಜಾಧಿರಾಜರೂ ಆಗಮಿಸಿದ್ದರು. ಆದರೆ ದಮಯಂತಿಯು ಇವರೆಲ್ಲರನ್ನು ಬಿಟ್ಟು ನಳನನ್ನೇ ವರಿಸಿದಳು. ಸ್ವಯಂವರದ ನಂತರ ಇಂದ್ರಾದಿ ದೇವತೆಗಳು ದೇವಲೋಕಕ್ಕೆ ಹಿಂತಿರುಗುತ್ತಿದ್ದ ವೇಳೆಯಲ್ಲಿ ಕಲಿಪುರುಷ ಬರುತ್ತಿದ್ದ. ಆತ ಕೂಡಾ ದಮಯಂತಿಯನ್ನು ಪರಿಸಲು ಬಂದವನಾಗಿದ್ದ. ಆತ 'ದಮಯಂತಿಯನ್ನು ನಳನೊಂದಿಗೆ ಸುಖದಿಂದ ಇರಗೊಡದೆ ಹಾನಿ ಮಾಡುತ್ತೇನೆ' ಎಂದು ಹೇಳಿದ. ನಳನ ದೇಹವನ್ನು ಪ್ರವೇಶಿಸಲು ಸಮಯ ಕಾಯುತ್ತಾ ಇದ್ದನು. ಅವಕಾಶ ದೊರಕಿದಾಗ ನಳನ ಶರೀರದೊಳಗೆ ಪ್ರವೇಶಿಸಿ ಬಿಟ್ಟ ಹೀಗೆ ಪ್ರವೇಶಿಸಿದ ಕಲಿಯು ಇನ್ನೊಂದು ರೂಪದಲ್ಲಿ ನಳನ ದಾಯಾದಿಯಾದ ಪುಷ್ಕರನಲ್ಲಿಗೆ ಹೋಗಿ, "ನಡೆ, ನಳನೊಂದಿಗೆ ಜೂಜಾಡು" ಎಂದ. 'ಆ ಜೂಜಿನಲ್ಲಿ ನೀನೇ ಗೆಲ್ಲುವಿಯಂತೆ' ಎಂದೂ ಹೇಳಿದ. ಈ ಮಾತು ಪುಷ್ಕರನಿಗೆ ಹರ್ಷ ತಂದಿತು. ಒಪ್ಪಿಕೊಂಡ ಆತ ನಳನನ್ನು ದ್ಯೂತಕ್ಕೆ ಆಹ್ವಾನಿಸಿದ. ದ್ಯೂತದಲ್ಲಿ ನಳನು ತನ್ನ ಧನಕನಕಾದಿ ಸಿರಿಸಂಪತ್ತು, ಉಡುಗೆ ತೊಡುಗೆ ಎಲ್ಲವನ್ನೂ ಪಣವಿಟ್ಟು ಕಳೆದುಕೊಂಡ. ಪುಷ್ಕರ ನಳನಿಂದ ಎಲ್ಲವನ್ನೂ ಗೆದ್ದುಕೊಂಡ. ನಳನು ತನ್ನ ಮೈ ಮೇಲಿನ ಆಭರಣ, ವಸ್ತ್ರ ಎಲ್ಲವನ್ನೂ ಕಳಚಿ ಅವನಿಗೊಪ್ಪಿಸಿದ. ಸೊಂಟಕ್ಕೆ ಸುತ್ತಿದ ಏಕೈಕ ವಸ್ತ್ರದಿಂದ ಮೇಲು ಹೊದಿಕೆಯೂ ಇಲ್ಲದೆ ಪತ್ನಿಯೊಡಗೂಡಿ ಕಾಡಿನತ್ತ ಸಾಗಿದ. ಮುಂದೆ ಆ ಒಂದು ವಸ್ತವನ್ನೂ ಪಕ್ಷಿರೂಪದಲ್ಲಿದ್ದ ಕಲಿಯು ಅಪಹರಿಸಿದ. ಕಾಡುದಾರಿಯಲ್ಲಿ ಪತ್ನಿಯನ್ನು ಒಂಟಿಯಾಗಿ ಬಿಟ್ಟು ನಡೆದ. ಹೀಗೆ ರಾಜನಾಗಿದ್ದ ನಳನು ಜೂಜು ಎಂಬ ವ್ಯಸನದಿಂದ ತನ್ನದೆಲ್ಲವನ್ನೂ ಕಳಕೊಂಡು ದೇಸಿಗನಾಗಿ ನಡೆದ.

## ತ್ರಿಪದಿಗಳ ಸಂಗ್ರಹ – ಸಂಕಲನ ತಯಾರಿ

- ಹಳ್ಳಿಯ ಜನರು ಓದು ಬರಹ ಬಾರದವರು. ಹೊಲ ಗದ್ದೆಗಳಲ್ಲಿ ದುಡಿಯುವ ಇವರು ನಿಸರ್ಗದೊಂದಿಗೆ ಬೆಸೆದುಕೊಂಡವರು ಜನಪದರು ಬೆಳಗಿನ ಜಾವಕ್ಕೆ ಎದ್ದು ಹೊಲ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವವರು. ರಾಗಿ ಬೀಸುವಾಗ, ಅಕ್ಕಿ ಕುಟ್ಟುವಾಗ, ಪೈರು ಕೊಯ್ಯುವಾಗ, ಹೊಲಗಳಿಗೆ ನೀರೊದಗಿಸಿಕೊಡುವಾಗ ತಮ್ಮ ದಣಿವನ್ನು ನಿವಾರಿಸುವುದಕ್ಕಾಗಿ ಅವರಿಂದ ಹೊರಹೊಮ್ಮಿದ ಪದ್ಯಗಳೇ ಈ ತ್ರಿಪದಿಗಳು. ಗ್ರಾಮೀಣ ಜನರ ದೈನಂದಿನ ಜೀವನದ ಸಹಜ ಚಿತ್ರಣ ಇಂತಹ ತ್ರಿಪದಿಗಳಲ್ಲಿವೆ. ಆ ರೀತಿಯ ತ್ರಿಪದಿಗಳನ್ನು ಸಂಗ್ರಹಿಸಿಕೊಂಡು ಬರುವಂತೆ ವಿದ್ಯಾರ್ಥಿಗಳಲ್ಲಿ ಸೂಚಿಸುವುದು. ಜನಪದ ಗೀತೆಗಳನ್ನು ಬಲ್ಲ ಜನಪದರನ್ನು ಭೇಟಿಯಾಗಿ ಅವರಿಂದ ಗೀತೆಗಳನ್ನು ಸಂಗ್ರಹಿಸಿ ಆ ಮೂಲಕ ಇಂತಹ ತ್ರಿಪದಿಗಳನ್ನು ಸಂಗ್ರಹ ಮಾಡಿಕೊಳ್ಳಬಹುದು.
- ವಿದ್ಯಾರ್ಥಿಗಳು ಸಂಗ್ರಹಿಸಿದ ತ್ರಿಪದಿಗಳನ್ನು ಒಟ್ಟಾಗಿ ಸೇರಿಸಿ ತ್ರಿಪದಿಗಳ ಸಂಕಲನವೊಂದನ್ನು ತಯಾರಿಸಲಿ ಅದಕ್ಕಾಗಿ ಕೆಲವು ವಿದ್ಯಾರ್ಥಿಗಳನ್ನು ಒಳಗೊಂಡ ಸಂಪಾದಕ ಮಂಡಳಿಯನ್ನು ರೂಪಿಸುವುದು. ಒಬ್ಬರು ಪ್ರಧಾನ ಸಂಪಾದಕರಾಗಿರಲಿ. ತ್ರಿಪದಿಗಳನ್ನು ಓರಣವಾಗಿ ಸಂಪಾದಿಸಿ, ಸಂಕಲನ ಮಾಡಿಕೊಂಡು

ಅಗತ್ಯವಿದ್ದಲ್ಲಿ ತ್ರಿಪದಿಗಳನ್ನು ವಿಷಯಕ್ಕನುಸಾರವಾಗಿ ವರ್ಗೀಕರಿಸಿಕೊಂಡು ಪುಸ್ತಕ ರೂಪಕ್ಕೆ ತರಲಿ. ಪ್ರಧಾನ ಸಂಪಾದಕರು ಸಂಪಾದಕೀಯವೊಂದನ್ನು ಬರೆಯಲಿ. ಅಧ್ಯಾಪಕರಿಂದ ಸುಂದರವಾದ ಮುನ್ನುಡಿಯೂ ಇರಲಿ.

- ಬೇಸಾಯಕ್ಕೆ ಸಂಬಂಧಿಸಿದ ಹಲವಾರು ತ್ರಿಪದಿಗಳಿವೆ. ಆ ರೀತಿಯ ತ್ರಿಪದಿಗಳನ್ನು ಸಂಗ್ರಹಿಸಿಕೊಂಡು. ಅವುಗಳ ಆಧಾರದಲ್ಲಿ ಜನಪದರು ಕೃಷಿಗೆ ನೀಡಿದ ಮಹತ್ವವನ್ನು ತಿಳಿಯಪಡಿಸುವ ಲೇಖನವೊಂದನ್ನು ಸಿದ್ಧಪಡಿಸಲಿ. ಬರೆದುದನ್ನು ತರಗತಿಯಲ್ಲಿ ಮಂಡಿಸಲು ಸೂಕ್ತತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆದು ಲೋಗ್‌ಬುಕ್‌ನಲ್ಲಿ ದಾಖಲಿಸುವುದು.

**ಸಾಕ್ಷ್ಯ ಚಿತ್ರ ತಯಾರಿ**

ಭತ್ತದ ಬೇಸಾಯಕ್ಕೆ ಸಂಬಂಧಿಸಿದಂತೆ ನೇಜಿ ಕೀಳುವಾಗ, ನೇಜಿ ನೆಡುವಾಗ ಹಾಡುವ ಜಾನಪದ ಕಾವ್ಯವನ್ನು ತುಳುವಿನಲ್ಲಿ ಪಾಡ್ದನಗಳೆಂದೂ, ಕಬಿತೆಗಳೆಂದೂ ಕರೆಯುವರು. ನಮ್ಮ ಪರಿಸರದಲ್ಲಿ ಈ ರೀತಿಯ ಪಾಡ್ದನಗಳನ್ನು ಬಲ್ಲ ಅನೇಕ ಹಿರಿಯರಿವರು. ಅವರನ್ನು ಭೇಟಿ ಮಾಡಿ ಪಾಡ್ದನಗಳನ್ನು ಸಂಗ್ರಹಿಸುವುದು. ಪಾಡ್ದನ ಹಾಡುವ ಮಂದಿಗಳಿಂದ ಹಾಡಿಸಿಕೊಂಡು ಧ್ವನಿ ಮುದ್ರಿಸಿಕೊಳ್ಳುವುದು. ಇಲ್ಲವೇ ಸಂದರ್ಶನ ದೃಶ್ಯವನ್ನೂ, ಹಾಡನ್ನೂ ಚಿತ್ರೀಕರಿಸಿಕೊಂಡು ಸಾಕ್ಷ್ಯ ಚಿತ್ರವೊಂದನ್ನು ತಯಾರಿಸುವುದು. ತರಗತಿಯಲ್ಲಿ ಪ್ರದರ್ಶಿಸುವುದು.

***ತುಳು ಪಾಡ್ದನದ ಕುರಿತಾದ ಸಂಕ್ಷಿಪ್ತ ವಿವರಣೆಯನ್ನೂ ನೇಜಿ ನೆಡುವಾಗ ಹೇಳುವ ತುಳು ಪಾಡ್ದನದ ಒಂದು ಭಾಗವನ್ನೂ ಇಲ್ಲಿ ಕೊಡಲಾಗಿದೆ. ಅಧ್ಯಾಪಕರು ಅದನ್ನು ಬಳಸಿಕೊಳ್ಳಬಹುದು.***

ತುಳು ಜನಪದ ಸಾಹಿತ್ಯದಲ್ಲಿ ಪಾರ್ತನ ಮತ್ತು ಕಬಿತೆಗಳೆಂಬ ಸಾಹಿತ್ಯ ಪ್ರಕಾರಗಳು ಅತ್ಯಂತ ಪ್ರಸಿದ್ಧವಾಗಿವೆ. ಪಾರ್ತನಗಳನ್ನು ಸಂಧಿಗಳೆಂದೂ ಕರೆಯಲಾಗುತ್ತದೆ. ಸಂಧಿಗಳನ್ನು ಮೂರು ಸಂದರ್ಭಗಳಲ್ಲಿ ಹಾಡುತ್ತಾರೆ–ಭೂತಾರಾಧನೆ, ನೇಜಿ ಕೀಳುವಿಕೆ ಮತ್ತು ಇತರ ವೈನೋದಿಕಸಂದರ್ಭಗಳಲ್ಲಿ. ಭೂತಾರಾಧನೆಯ ಪಾರ್ತನಗಳು ಆಯಾ ಭೂತಗಳಿಗೆ ಸಂಬಂಧಿಸಿದವುಗಳಾಗಿವೆ. ಅವನ್ನು ಬೇರೆ ಸಂದರ್ಭಗಳಲ್ಲಿ ಹಾಡುವ ಪದ್ಧತಿಯಿಲ್ಲ. ಕಬಿತೆಗಳನ್ನು ಸಹ ಮೂರು ಸಂದರ್ಭಗಳಲ್ಲಿ ಹಾಡಲಾಗುತ್ತದೆ. ನೇಜಿ ನೆಡುವಾಗ, ಮಜಕ್ಕೆ–ಚುಳ್ಳಿಲ್ ಮುಂತಾದ ಸಮಾರಂಭಗಳಲ್ಲಿ ಹಾಗೂ ಇತರ ವೈನೋದಿಕ ಸಂದರ್ಭಗಳಲ್ಲಿ. ಈ ಮೂರೂ ಸಂದರ್ಭಗಳಲ್ಲಿ ಹಾಡುವ ಹಾಡುಗಳು ಬೇರೆ ಬೇರೆಯಾಗಿವೆ. ಈ ಸಾಹಿತ್ಯ ಪ್ರಕಾರವನ್ನು ಒಟ್ಟಾಗಿ 'ಪದೋ'(ಪದಗಳು) ಎಂದು ಕರೆಯುವ ರೂಢಿಯೂ ಇದೆ.

ಕಾಸರಗೋಡಿನಲ್ಲಿ ರೂಢಿಯಲ್ಲಿರುವ ಪಾರ್ತನಗಳಲ್ಲಿ ಪಂಜುರ್ಲಿ, ಪಿಲಿಚ್ಚಾಂಡಿ, ಮಲರಾಯ(ಮಲರಾಯಿ), ಗುಳಿಗ, ಮೂಕಾಂಬಿಗುಳಿಗ, ಧೂಮಾವತಿ, ಉಳ್ಳಾಕುಳು, ಬೀರಣ್ಣಾಳ್ವ, ಅರಸಂಕಲೆ, ಕೊರತ್ತಿ, ನಾಗಬೆರ್ಮೆರ್, ಕೊರ್ಮಾಡಿ, ಮಾಣ್ಯಳೆ–ಪೆನರ್ಮಳೆ, ಕುಂಞಿಮಾಣಿಕೋ ಪಾರ್ತನಗಳು ಪ್ರಸಿದ್ಧವಾಗಿವೆ.

ಪಾರ್ತನಗಳ ಕಥೆ ಅದ್ಭುತರಮ್ಯವಾದುದು. ಅದರಲ್ಲಿ ರೋಮಾಂಚನಕಾರಿಯಾದ ಹಲವಾರು ಅಮಾನುಷಘಟನೆಗಳು ಇರುತ್ತವೆ. ಕಥೆಯಲ್ಲೊಂದು ಶಿಖರ ಘಟನೆ ಇರುತ್ತದೆ. ಹೆಚ್ಚಿನ ಕಥೆಗಳೂ ದುರಂತ ಸಂದರ್ಭಗಳಲ್ಲಿ ಪರ್ಯವಸಾನಹೊಂದುತ್ತದೆ. ಪಾರ್ತನಗಳಲ್ಲಿ ಬರುವ ಅತಿಮಾನುಷವಾದ ಘಟನೆಗಳ ಬೆನ್ನಿನಲ್ಲೇ ಅಮಾನುಷವಾದ ಭೂತ ಕಲ್ಪನೆಯೂ ಹುಟ್ಟಿಕೊಳ್ಳುತ್ತದೆ.

ಪಾರ್ತನಗಳನ್ನು 'ಸಂಧಿ'ಗಳೆಂದು ವಿಂಗಡಿಸಲಾಗುತ್ತದೆ. ಸಂಧಿ ಎಂದರೆ ಘಟನಾವಳಿಗಳ ಜೋಡಣೆ ಎಂದರ್ಥ. ಪ್ರತಿ ಸಂಧಿಯಲ್ಲೂ ತಾಳಲಯಗಳು ವ್ಯತ್ಯಸ್ತವಾಗಿರುತ್ತವೆ. ಕಥೆ ಮುಂದುವರಿದ ಹಾಗೆ , ಸಂಧೀಗಳು ಬದಲಾಗುತ್ತಾ ಹೋದ ಹಾಗೆ, ರಾಗದಲ್ಲಿ ಏರುಸ್ವರಗಳ ಬಳಕೆ ಹಾಗೂ ತಾಳಲಯಗಳಲ್ಲಿ ದ್ರುತಗತಿ ಕಾಣಿಸಿಕೊಳ್ಳುತ್ತದೆ.

ಪಾರ್ತನವೆಂಬ ಸಾಹಿತ್ಯಪ್ರಕಾರದ ಕುರಿತು ಕಬಿತೆಯೊಂದರಲ್ಲಿ ಹೀಗೆ ಹೇಳಿದೆ.

"ಪಾರ್ತನೋ ಪಂಡ್ ಪಂಡ್ ಬಾಯಿಟೇಲೋರಿಂಡ್
ನಾರಂಗಾಯಿ ಕೊಯಿ ಕೊಯಿ ಬಿತ್ತಿಲ್‌ಟೊರಿಂಡ್"

ಪಾರ್ತನವನ್ನು ಹೇಳಿ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಅದು ಹೇಳಿದಷ್ಟೂ ಮತ್ತೂ ಬಾಯಲ್ಲೇ ಉಳಿದು ಬಿಡುತ್ತದಂತೆ. ಅಷ್ಟೂ ವಿಸ್ತಾರವಾದುದು ಅದರ ವ್ಯಾಪ್ತಿ. ನಿತ್ಯವೂ ಫಲ ಬಿಡುವ ನಿಂಬೆಹಣ್ಣುಗಳನ್ನು ಹೇಗೆ ಕೊಯಿದು ಮುಗಿಸಲು ಸಾಧ್ಯವಿಲ್ಲವೋ ಹಾಗೆಯೇ ಪಾರ್ತನಗಳೂ ಹೇಳಿ ಮುಗಿಸಿದಷ್ಟೂ ಅನಂತವಾಗುತ್ತವೆ ಎಂಬುದು ಈ ಕಬಿತೆಯ ಆಶಯ.

## ಓ ಬೇಲೇ

| | |
|---|---|
| ಓ ಬೇಲೇ | ಓ ಬೇಲೇ |
| ಓ ಓ ಬೇಲೇ ಪನ್ಲೇ | ಓ ಓ ಬೇಲೆ ಹೇಳಬೇಕು |
| ಓ ಪತ್ತಪ್ಪೆ ಬಾಲೆಲು | ಓ ಹತ್ತು ತಾಯಿ ಮಕ್ಕಳೂ |
| ಓ ದನಿ ಒಯ್ತ್ ಪನ್ಲೇ | ಓ ದನಿ ಎತ್ತಿ ಹೇಳಿ |
| ಓ ಮಾತೇರಪ್ಪಾ ಕೇನಡ್ | ಓ ಎಲ್ಲರೂ ಕೇಳಲಿ |
| ಓ ರಂಗಿತೋ ಕೇನಡ್ | ಓ ರಂಗಿತ ಕೇಳಲಿ |
| ಓ ದೂರೋಡೂಲ ಪೋಪಿನಾ | ಓ ದೂರದಲ್ಲಿ ಹೋಗುವಾ |
| ಓ ಮಂದೇಲೂ ಬರಡ್ | ಓ ಮಂದಿಗಳು ಬರಲಿ |
| ಓ ನಂಕಾಂಡ ಕೇಂಡರೋ | ಓ ನಮಗಾದರೂ ಕೇಳಿದಿರಾ |
| ಓ ಎಲ್ಯೋಡೇ ಕಡೆಸುಂಡೂ | ಓ ವೇಳೆಯು ತಡವಾಗುತ್ತಿದೆ |
| ಓ ಕಾಲ್ಯೋಲಾ ಕಡೆಸುಂಡೂ | ಓ ಕಾಲವು ಕಳೆಯುತ್ತಿದೆ |

| | |
|---|---|
| ಓ ನಮ್ಮಾಲ ಸೊರದನಿಯೇ | ಓ ನಮ್ಮ ಸ್ವರಧ್ವನಿಯೂ |
| ಓ ಸಾದಿ ಪೊಪ ಮಾನಿಗ್ | ಓ ಹಾದಿಯಲ್ಲಿ ಹೋಗುವ ಮನುಷ್ಯನಿಗೆ |
| ಓ ಕೆಬಿ ಕೊರು ಬರಡ್ | ಓ ಕಿವಿಗೆ ಕೇಳುವ ಹಾಗೆ ಬರಲಿ |
| ಓ ನಮ್ಮೊಲ ಸೊರದನಿಯೇ | ಓ ನಮ್ಮ ಸ್ವರ ಧ್ವನಿಯೂ |
| ಓ ಕಲೆಂಬೀಗ್ ರುಪಾಯೇ | ಓ 'ಕಲೆಂಬೀಗ್' ರುಪಾಯಿ |
| ಓ ಪಾಡಿ ಸಂದೋ ಕೇನಡ್ | ಓ ಹಾಕಿದ ಸ್ವರ ಕೇಳಲಿ |
| ಓ ನಮ್ಮೊಲ ಸೊರದನಿಯೇ | ಓ ನಮ್ಮ ಸ್ವರ ಧ್ವನಿಯೂ |
| ಓ ಬೇಗನೇ ನನೋ | ಓ ಬೇಗನೇ ಇನ್ನು |
| ಓ ನಂಕಾಂಡ ಕೇಂಡರೇ | ಓ ನಮಗಾದರೂ ಕೇಳಿದಿರಾ |
| ಓ ಬೇಕೋನೇ ನನೋ | ಓ ಬೇಗನೇ ಇನ್ನು |
| ಓ ನಮ್ಮೊಲ ಸೊರದನಿಯೇ | ನಮ್ಮ ಸ್ವರ ಧ್ವನಿಯೂ |
| ಓ ಕದಿಕೇಗ್ ಬಾರ್ | ಓ ಕಣಜಕ್ಕೆ ಭತ್ತ |
| ಓ ಪಾಡಿ ಸಂದೋ ಕೇನಡ್ | ಓ ಹಾಕಿದ ಶಬ್ದ ಕೇಳಲಿ |
| ಓ ನಂಕಾಂಡ ಕೇಂಡರೋ | ಓ ನಮಗಾದರೂ ಕೇಳಿದಿರಾ |
| ಓ ಬಂಜಪ್ಪೆ ಬಾಲೆಲೆಕ್ಕೋ | ಓ ಒಂದೇ ತಾಯಿ ಮಕ್ಕಳಂತೆ |
| ಓ ಪೆತ್ತ ಪಿರಾವೂ | ಓ ದನದ ಹಿಂದೆ |
| ಓ ಕಂಜೀಲೂ ಪೋಯಿನೆಂಗೇ | ಓ ಕರುಗಳು ಹೋಗುವ ಹಾಗೆ |
| ಓ ಪನ್ಲೆ ಮಂದೆಲೇ | ಓ ಹೇಳಿರಿ ಮಂದಿಯೇ |
| ಓ ಪುರಾಡೇ ಬೆರಿಯೇ | ಓ ಹೆಂಟೆಯ ಹಿಂದಿನಿಂದ |
| ಓ ಈ ಕಿನ್ನೀಲು ಪೊಯಿನಂಗೇ | ಓ ಮರಿಗಳು ಹೋಗುವಂತೆ |
| ಓ ಪನ್'ಲೇ ಮಂದೆಲೇ | ಓ ಹೇಳಿರಿ ಮಂದಿಗಳೇ |
| ಓ ಇಂದೋಂಜೀ ಬಿದೇ | ಓ ಇದೊಂದು ಬಿದೆ |
| ಓ ಕಯಮ್ಮೇ ಕಳಮ್ಮೇ | ಓ ಕಯಮ್ಮೇ ಕಳಮ್ಮೇ |
| ಓ ಅತಿಕಾರ ಬುಲೇ | ಓ ಅತಿಕಾರ ಬೆಳೆ |
| ಓ ಸತ್ಯೋದ ಬುಲೇ | ಓ ಸತ್ಯದ ಬೆಳೆ |
| ಓ ನಂಕಾಡ ಕೇಂಡರೋ | ನಮಗಾದರೂ ಕೇಳಿದಿರಾ |
| ಓ ಸುಗ್ಗೀಡ್ ಕೇಂಡರೋ | ಓ ಸುಗ್ಗಿಯಲ್ಲಿ ಕೇಳಬೇಕು |

# ಅಪ್ರತಿಮ ಪ್ರತಿನಾಯಕ ಶೇಣಿ

**ಪ್ರವೇಶ**

ನಾಗರಿಕತೆಯ ಹಂತವನ್ನೇರುತ್ತಾ ಬಂದಿರುವ ಮಾನವನು ಜೀವನದ ಎಲ್ಲ ರಂಗಗಳಲ್ಲಿಯೂ ಪ್ರಗತಿಯನ್ನು ಸಾಧಿಸಿದ್ದಾನೆ. ಜಗತ್ತನ್ನೇ ಅಂಗೈಯಲ್ಲಿರಿಸಿದ್ದಾನೆ. ಆದರೆ ತನ್ನ ಹೃದಯವನ್ನು ಗೆಲ್ಲುವಲ್ಲಿ ಸೋಲುತ್ತಿದ್ದಾನೆನ್ನುವುದು ವಿಪರ್ಯಾಸ! ಬಾಹ್ಯ ಸುಖವನ್ನೇ ಪ್ರಧಾನವಾಗಿರಿಸಿದ ಮಾನವನು ತನ್ನ ಆಂತರಿಕ ವಿಕಾಸಕ್ಕೆ ಪೂರಕವಾದ ಹೃದಯವನ್ನು ಉದಾರಗೊಳಿಸಬಲ್ಲ ಸಂಸ್ಕೃತಿ ಮತ್ತು ಸಂಸ್ಕಾರವನ್ನು ರೂಪಿಸಬಲ್ಲ ಕಲೆಯನ್ನು ಪರಿಪೋಷಿಸಬೇಕು. ವ್ಯಕ್ತಿಯ ಸಂಸ್ಕೃತಿಯೊಂದಿಗೆ ಪ್ರತಿಭೆಯು ಮಿಳಿತವಾದಾಗ ವಿಶಿಷ್ಟವಾದ ಕಲೆ ರೂಪುಗೊಳ್ಳುತ್ತದೆ. ಕಲೆಯ ಆಸ್ವಾದನೆಯು ಉತ್ತಮ ವ್ಯಕ್ತಿತ್ವದ ರೂಪೀಕರಣಕ್ಕೆ ಕಾರಣವಾಗುತ್ತದೆ. ಕಲೆಯು ವ್ಯಕ್ತಿಯ ಏಕಾಗ್ರತೆಯನ್ನು ಹೆಚ್ಚಿಸಿ, ಮನವನ್ನು ಪಕ್ವಗೊಳಿಸಿ ಹಾದಿ ತಪ್ಪಿನಡೆಯದಂತೆ ನಿಯಂತ್ರಿಸಬಲ್ಲುದು. ಒಳ್ಳೆಯ ವ್ಯಕ್ತಿತ್ವದ ನಿರ್ಮಾಣ ಒಳ್ಳೆಯ ರಾಷ್ಟ್ರನಿರ್ಮಾಣಕ್ಕೆ ಬುನಾದಿಯಾಗುತ್ತದೆ.

ಹಿಂದೆ ಮಾನವನು ದೈಹಿಕ ದುಡಿಮೆಗೆ ಒತ್ತು ನೀಡಿದ್ದ ಕಾಲದಲ್ಲಿ ಅದರ ಭಾಗವಾಗಿಯೇ ಜನಪದ ಸಾಹಿತ್ಯವೂ ಜನಪದ ಕಲೆಯೂ ಸೃಷ್ಟಿಗೊಂಡವು. ಆದರೆ ಇಂದು ಬರಿಯ ಬೌದ್ಧಿಕ ಉತ್ಕರ್ಷವೇ ಕಾಣಿಸಿಕೊಂಡು ಜೀವನವು ಒಂದು ವ್ಯಾವಹಾರಿಕ ರಂಗ ಎನಿಸಿಕೊಂಡಿದೆ. ಕಲೆಯ ಗಂಧವಿಲ್ಲದ ಮಾನವನ ಜೀವನ ಬರಡಾಗುತ್ತಿದೆ. 'ಐಟಿ, ಬಿಟಿ'ಯ ಯಾಂತ್ರಿಕ ಬದುಕಿನಲ್ಲಿ ಕಲೆಯನ್ನು ಆಸ್ವಾದಿಸುವ ಮನೋಭಾವ ಕಡಿಮೆಯಾಗುತ್ತದೆ.

ಶಿಕ್ಷಣದ ಗುರಿ 'ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿ'. ಅದು ಸಾಧಿತವಾಗಬೇಕಾದರೆ ಬುದ್ಧಿಯೊಂದಿಗೆ ಭಾವನೆಯ ವಿಕಾಸವೂ ಆಗಬೇಕಾದುದು ಅಗತ್ಯವಲ್ಲವೇ? ನಾಟಕ, ಯಕ್ಷಗಾನ ಮುಂತಾದ ಕಲಾ ಪ್ರಕಾರಗಳ ಮೂಲಕ ವಿದ್ಯಾರ್ಥಿಯಲ್ಲಿರುವ ಸುಪ್ತ ಪ್ರತಿಭೆ ಪ್ರಕಟಗೊಳ್ಳುವಂತೆ ಮಾಡಬೇಕು.

ಯಕ್ಷಗಾನ ಕ್ಷೇತ್ರದಲ್ಲಿ ಬಹಳಷ್ಟು ಕೃಷಿ ಮಾಡಿ ಉತ್ತುಂಗ ಶೃಂಗವನ್ನೇರಿದ ಮಹಾ ಪುರುಷರು ಹಲವರಿದ್ದಾರೆ. ಅವರಲ್ಲಿ 'ಯಕ್ಷಗಾನ ಶಕ ಪುರುಷ' ರೆನಿಸಿದ ಶೇಣಿ ಗೋಪಾಲಕೃಷ್ಣ ಭಟ್ಟರ ಹೆಸರು ಅಜರಾಮರವಾಗಿದೆ. ಯಕ್ಷಗಾನ ಕ್ಷೇತ್ರದ ದಿಗ್ಗಜರಾದ ಶೇಣಿ ಗೋಪಾಕೃಷ್ಣ ಭಟ್ಟರ ವ್ಯಕ್ತಿ ಚಿತ್ರಣದ ಒಂದು ಭಾಗವನ್ನು ಪಠ್ಯದಲ್ಲಿ ನೀಡಲಾಗಿದೆ. ಇದನ್ನು ಬರೆದ ಅಮೃತಸೋಮೇಶ್ವರರು ಯಕ್ಷಗಾನ ಪ್ರಸಂಗಕರ್ತರೂ ಶ್ರೇಷ್ಠ ಸಾಹಿತಿಗಳೂ ಆಗಿರುವರು.

ಪೂರ್ವ ಜ್ಞಾನವನ್ನು ಪರೀಕ್ಷಿಸಲು ಪಾಠಕ್ಕೆ ಪೂರಕವಾದ ಕೆಲವೊಂದುಪ್ರಶ್ನೆಗಳನ್ನು ವಿದ್ಯಾರ್ಥಿಗಳಲ್ಲಿ ಕೇಳುವುದು.

- ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಲಾರೂಪಗಳು ಯಾವುವು?
- ಯಕ್ಷಗಾನದ ಕುರಿತಾಗಿ ನಿಮಗೇನು ತಿಳಿದಿದೆ?
- ಈ ಕಲಾರೂಪದಲ್ಲಿ ಎಷ್ಟು ವಿಧಗಳಿವೆ?

- ಮಾತೇ ಪ್ರಧಾನವಾಗಿರುವ ಯಕ್ಷಗಾನ ಕಲಾ ಪ್ರಕಾರ ಯಾವುದು?
- ಯಕ್ಷಗಾನ ಬಯಲಾಟದಲ್ಲಾಗಲೀ ಕೂಟದಲ್ಲಾಗಲೀ ಅತ್ಯಂತ ಜನಮನ್ನಣೆಗಳಿಸಿದವರ ಹೆಸರು ಹೇಳಬಲ್ಲಿರಾ?
- ಶೇಣಿ ಗೋಪಾಲಕೃಷ್ಣ ಭಟ್ಟರ ಕುರಿತು ನಿಮಗೇನು ತಿಳಿದಿದೆ?

ವಿದ್ಯಾರ್ಥಿಗಳು ಹೇಳಿರುವ ವಿಚಾರಕ್ಕೆ ಒತ್ತು ನೀಡುವಂತೆ ಪಾಠಭಾಗದಲ್ಲಿ ಬಂದಿರುವ ಮುಖ್ಯ ಅಂಶಗಳನ್ನು ಅಧ್ಯಾಪಕರು ಬಾಯ್ದೆರೆಯಾಗಿ ಹೇಳುವುದು.

ಪ್ರತಿನಾಯಕ ಪಾತ್ರದ ವ್ಯಕ್ತಿತ್ವದ ಒಳ ಮಗ್ಗುಲುಗಳನ್ನು ದರ್ಶಿಸಿ ಅಂತಹ ಪಾತ್ರದ ವಿಶಿಷ್ಟ ಭಾವ ಸಂಕೀರ್ಣತೆಯನ್ನು ಮಾರ್ಮಿಕವಾಗಿ ಚಿತ್ರಿಸುವ ಅಸಾಧಾರಣ ಪ್ರತಿಭಾವಂತ ಕಲಾವಿದರಲ್ಲಿ ಒಬ್ಬರು ಶೇಣಿ ಗೋಪಾಲಕೃಷ್ಣ ಭಟ್ಟರು. ಅವರು ಅಪ್ರತಿಮ ವಚೋವಿಲಾಸದಿಂದ ಐದಾರು ದಶಕಗಳವರೆಗೆ ಯಕ್ಷಗಾನ ರಂಗದಲ್ಲಿ ಮೆರೆದರು. 'ಅವರು' ಅದ್ಭುತ ಕಂಠ ಸಿರಿಯ ವಾಚಿಕಾಭಿನಯ ವೈಖರಿಯಿಂದ ಕುಣಿತವಿಲ್ಲದೆಯೂ ಎಲ್ಲ ಪಾತ್ರಗಳನ್ನು ರಂಗಸ್ಥಳದಲ್ಲಿ ಮೆರೆಸಿ ದಕ್ಕಿಸಿಕೊಂಡವರು. ರಾವಣ, ಜರಾಸಂಧ, ಕಂಸ, ಶುಂಭಾಸುರ, ಭಂಡಸುರ, ದಾರಿಕಾಸುರ ಮುಂತಾದ ರಾಕ್ಷಸರಾಜರ ಪಾತ್ರಗಳಿಗೆ ಭವ್ಯತಾನುಭೂತಿಯನ್ನೂ, ಗಾಂಭೀರ್ಯವನ್ನೂ ಕೊಡಮಾಡಿದ ಪ್ರತಿಭಾ ಕೌಶಲ ಇವರದು.

ಅವರ ಹೆಚ್ಚಿನ ವಿವರವನ್ನು ತಿಳಿಯಲು ಪಠ್ಯಭಾಗದಲ್ಲಿರುವ ಅಂಶವನ್ನು ಗಮನಿಸೋಣ ಎಂಬ ಪ್ರಸ್ತಾವನೆಯೊಂದಿಗೆ ಪಾಠ ಪ್ರವೇಶ ಮಾಡುವುದು.

ಪಾಠಭಾಗವನ್ನು ಹಂತಹಂತವಾಗಿ ವಿದ್ಯಾರ್ಥಿಗಳಲ್ಲಿ ಓದಲು ಹೇಳುವುದು.ವಿದ್ಯಾರ್ಥಿಗಳಲ್ಲಿ ನವೀನ ಪದಗಳ ಅರ್ಥವನ್ನು ತಿಳಿದು ಬರೆಯಲು (ಪಠ್ಯಭಾಗದಲ್ಲಿ ಕೊಟ್ಟಿರುವ) ಹೇಳುವುದು. ಅರ್ಥೈಸಿರುವ ಮಟ್ಟವನ್ನು ಗ್ರಹಿಸಲು ಕೆಲವೊಂದು ಆಶಯ ಗ್ರಹಣ ಪ್ರಶ್ನೆಗಳನ್ನು ವಿದ್ಯಾರ್ಥಿಗಳ ಮುಂದಿಡುವುದು.

**ನವೀನ ಪದಗಳು**

ಖಳ–ದುಷ್ಟ, ನೀಚ,

ಶಿಖಾಮಣಿ–ಶಿರೋಮಣಿ(ಶ್ರೇಷ್ಠ),

ಆಸ್ಮತ್–ತನ್ನತನ,

ನಿಷ್ಠಾಂತರ–ಬದಲಾಯಿಸಿದ ನಿಷ್ಠೆ,

ಚಾರಿಚಲನೆ–ನಡಿಗೆಯ ರೀತಿ.

**ಪದವಿಂಗಡಣೆ**

ಪದವಿಂಗಡಣೆ ಮಾಡಿ ಬರೆಸುವುದು.

ವಾಚಿಕಾಭಿನಯ – ವಾಚಿಕ + ಅಭಿನಯ

ರಸಾನಂದ – ರಸ + ಆನಂದ

ಮಹತ್ವಾಕಾಂಕ್ಷಿ – ಮಹತ್ವ + ಆಕಾಂಕ್ಷಿ

ವೀರಾಗ್ರಣಿ – ವೀರ+ ಅಗ್ರಣಿ

ಆತ್ಮಾಭಿಮಾನ – ಆತ್ಮ+ಅಭಿಮಾನ

ಗುರುತುಗಲ್ಲು – ಗುರುತು +ಕಲ್ಲು

ಶಬ್ದಕಿಳೆಯದುರಲಿತ್ತ – ಶಬ್ದಕೆ + ಇಳೆಯು + ಅದುರಲು + ಇತ್ತ

## ವಿಗ್ರಹವಾಕ್ಯ

ರಸಾನಂದ – ರಸದ ಆನಂದ

ಮಠಪತಿ – ಮಠದ ಪತಿ

ಮೃದು ಹೃದಯಿ – ಮೃದುವಾದ ಹೃದಯವುಳ್ಳವನು

## ವಿಶದೀಕರಣ

- ಧೀರೋದ್ಧತ (ಧೀರ + ಉದ್ಧತ) : ಉದ್ಧತ ಎಂದರೆ ಗರ್ವಿಷ್ಟನಾದ, ಸೊಕ್ಕಿದ ಎಂದರ್ಥ. ಕಥಾ ನಾಯಕರಲ್ಲಿ ಒಂದು ಪ್ರಕಾರದ ನಾಯಕ. ಈ ಬಗೆಯ ನಾಯಕನು ದರ್ಪ, ಮಾತ್ಸರ್ಯ, ಅಹಂಕಾರ, ರೌದ್ರಾದಿ ಗುಣಗಳಿಂದ ಕೂಡಿದವನಾಗಿರುತ್ತಾನೆ. ಅವನು ಆತ್ಮಶ್ಲಾಘನೆ ಮಾಡುವವನಾಗಿರುತ್ತಾನೆ. ದುರ್ಯೋಧನ, ರಾವಣ ಮೊದಲಾದ ಪಾತ್ರಗಳು ಈ ಬಗೆಯವು. ಕಾವ್ಯ ನಾಟಕಾದಿಗಳಲ್ಲಿ ಬರುವ ಪ್ರತಿನಾಯಕರು ಸಾಮಾನ್ಯವಾಗಿ ಧೀರೋದ್ಧತರಾಗಿರುತ್ತಾರೆ.
- ಮಹಭಾರತದ ದುಷ್ಟಚತುಷ್ಟಯರು : ದುರ್ಯೋಧನ, ಶಲ್ಯ, ದುಃಶಾಸನ, ಕರ್ಣ
- ತತ್ವಮಸಿ : ತತ್ ತ್ವಂ ಅಸಿ– ಅದು ನೀನೇ ಆಗಿದ್ದೀಯ
- ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು : ಸಾಮಾನ್ಯವಾದುದು ಹಲವನ್ನು ಮಾಡುವ ಬದಲಿಗೆ ಉತ್ತಮವಾದುದು ಒಂದನ್ನು ಮಾಡಿದರೆ ಸಾಕು.
- ತಿಳಿಯದಾದಿರೇ ನಮ್ಮ ಕಂಸಗೆ ಅಳಿಯನೀತನು : ಮಾಗಧ ವಧೆ ಯಕ್ಷಗಾನ ಪ್ರಸಂಗದಲ್ಲಿ ಬರುವ ಒಂದು ಪದದ ಸಾಲು.
- ಸ್ವಯಮೇವ ಮೃಗೇಂದ್ರತಾ : ಸಿಂಹಕ್ಕೆ ಮೃಗರಾಜ ಪದವಿ ಪಟ್ಟ ಯಾರೂ ಕಟ್ಟಿ ಬಂದುದಲ್ಲ. ಹುಟ್ಟಿನಿಂದಲೇ ಬಂದ ಪದವಿ.

## ಮಾಗಧ

ಮಗಧ ದೇಶದ ಅರಸು. ಬೃಹದ್ರಥ ರಾಜನ ಮಗ. ಬೃಹದ್ರಥನಿಗೆ ಬಹಳ ಕಾಲ ಸಂತಾನವಿರಲಿಲ್ಲ. ತಪೋನಿರತನಾದ ರಾಜನಿಗೆ ಚಂಡ ಕೌಶಿಕ ಮುನಿಯು ಒಂದು ಮಾವಿನ ಹಣ್ಣನ್ನು ನೀಡಿ ರಾಣಿಗೆ ಕೊಡಲು ಹೇಳಿದನು. ರಾಜ ತನ್ನ ಇಬ್ಬರು ಪತ್ನಿಯರಿಗೂ ಎರಡು ಹೋಳು ಮಾಡಿ ನೀಡಿದನು. ಇಬ್ಬರು ರಾಣಿಯರೂ ಶಿಶುವಿನ ಎರಡು ಸೀಳುಗಳನ್ನು ಹೆತ್ತರು. ಈ ವಿಕಾರ ಶಿಶುಗಳನ್ನು ದಾದಿಯ ಮೂಲಕ ತಿಪ್ಪೆಯಲ್ಲಿ ಎಸೆದರು. ಬಳಿಕ ಜರೆಯೆಂಬ ರಾಕ್ಷಸಿ ಆ ಎರಡು ಸೀಳುಗಳನ್ನು ಸಂಧಿಸಿದ್ದರಿಂದ ಜರಾಸಂಧನೆಂದು ನಾಮಾಂಕಿತನಾದನು. ತಂದೆ ಬೃಹದ್ರಥನ ಬಳಿಕ ಮಗಧ ದೇಶದ ರಾಜನಾದ ಕಾರಣ ಜರಾಸಂಧನು ಮಾಗಧ ಎಂಬ ಹೆಸರು ಪಡೆದ. ಗಿರಿವ್ರಜ ಇವನ ರಾಜಧಾನಿ.

## ಶುಂಭಾಸುರ

ಒಬ್ಬ ರಾಕ್ಷಸ. ಶುಂಭ–ನಿಶುಂಭರು. ಅಣ್ಣ–ತಮ್ಮಂದಿರು. ಇವರಿಬ್ಬರು ಬ್ರಹ್ಮನಿಂದ ವರ ಪಡೆದು ಲೋಕ ಕಂಟಕರಾದರು. ಆದಿ ಶಕ್ತಿಯ ದೇಹದಿಂದ ಹೊರಬಂದ ಕೌಶಿಕೆಯೆಂಬ ಸುಂದರಿಯಾದ ಸ್ತ್ರೀ ದೇವತೆಯನ್ನು ಕಂಡು ವ್ಯಾಮೋಹಕ್ಕೆ ಒಳಗಾಗುತ್ತಾರೆ. ಆಕೆಯನ್ನು ಬಯಸಿದ ಅವರಿಬ್ಬರೂ ಅಪಾರ ಸೇನೆಯೊಂದಿಗೆ ದೇವಿಯನ್ನು ಇದಿರಿಸಿ ಯುದ್ಧ ಮಾಡುತ್ತಾರೆ. ಇಬ್ಬರೂ ಮರಣಕ್ಕೆ ತುತ್ತಾಗುತ್ತಾರೆ. ಇವರ ಸೇನಾಪತಿಗಳು ಚಂಡ–ಮುಂಡರು.

## ಭಂಡಾಸುರ

ಒಬ್ಬ ರಾಕ್ಷಸ. ಶಿವನ ತಪಸ್ಸಿಗೆ ಭಂಗವನ್ನುಂಟುಮಾಡಿದ ಮನ್ಮಥನನ್ನು ಹಣೆಗಣ್ಣಿನಿಂದ ಶಿವನು ಭಸ್ಮ ಮಾಡುತ್ತಾನೆ. ಶಿವನ ಪರಿವಾರದಲ್ಲೊಬ್ಬನಾದ ಚಿತ್ರಕರ್ಮನೆಂಬ ಗಣೇಶ್ವರ ಆ ಬೂದಿಯ ರಾಶಿಯನ್ನು ಪುರುಷಾಕಾರವಾಗಿ ಚಿತ್ರಿಸಿದ. ಧ್ಯಾನದಿಂದ ಬಹಿರ್ಮುಖನಾದ ಶಿವನ ದೃಷ್ಟಿ ಈ ಬೂದಿಯ ರಾಶಿಯ ಮೇಲೆ ಬಿತ್ತು. ಕೂಡಲೇ ಈ ಚಿತ್ರಕ್ಕೆ ಜೀವ ಬಂದು, ಮನ್ಮಥನಂತೆ ಅಂದ ಚೆಂದಗಳಿಂದ ಕೂಡಿದ ಮಹಾ ತೇಜಸ್ವಿಯೂ ಅತ್ಯಂತ ಬಲಶಾಲಿಯೂ ಆದ ಒಬ್ಬ ಹುಡುಗನಾದ. ಶಿವನನ್ನು ಹೊಗಳಿ ವರ ಪಡೆದ. (ಇದಿರಾಳಿಯ ಯಾವ ಶಸ್ತ್ರಾಸ್ತ್ರಗಳಿಂದಲೂ ತನಗೆ ನೋವಾಗಬಾರದು) (ಅರುವತ್ತು ಸಾವಿರ ವರ್ಷಕಾಲ ತನ್ನ ರಾಜ್ಯಭಾರ ಅಪ್ರತಿಹಿತವಾಗಿರಲಿ ಎಂದು ವರ) ಆ ಸೋಜಿಗವನ್ನೆಲ್ಲಾ ನೋಡುತ್ತಿದ್ದ ಬ್ರಹ್ಮ ಭಣ್ಡ, ಭಣ್ಡ ಎಂದು ಕರೆದುದರಿಂದ ಇವನಿಗೆ ಅದೇ ಹೆಸರು ಬಂತು. ಕಾಲಕ್ರಮೇಣ ಅಗ್ನಿ ಕುಂಡದಿಂದ ಉದಿಸಿದ ಪರಾಶಕ್ತಿಯ ತೇಜಸ್ಸಿನಿಂದ ಭಂಡಾದಿಗಳು ಓಡಿದರು. ದೇವತೆಗಳ ಮೊರೆಯನ್ನು ಕೇಳಿ ಅಭಯವಿತ್ತು, ಆ ಶಕ್ತಿ ದೇವತೆಯು ಕಾಮೇಶ್ವರನನ್ನು ಮದುವೆಯಾಗಿ ಭಂಡನೊಡನೆ ಹೋರಾಡಿ ಅವನನ್ನು ಕೊಂದಳು.

**ದಾರುಕ / ದಾರಿಕಾಸುರ**

ಒಬ್ಬ ರಾಕ್ಷಸ. ಇವನ ಹಾವಳಿಯನ್ನು ತಡೆಯಲಾರದೆ ದೇವತೆಗಳು ಶಿವನಲ್ಲಿ ಮೊರೆಯಿಟ್ಟರು. ಪಾರ್ವತಿ ಶಿವನ ಕೊರಳ ಕಪ್ಪನ್ನು ತೆಗೆದು ಭಯಂಕರಾಕಾರೆಯಾದ ಒಬ್ಬ ದೇವತೆಯನ್ನು ಸೃಜಿಸಿ ಕಾಳಿಕೆಯೆಂದು ಹೆಸರಿಟ್ಟು ದಾರಕನನ್ನು ಕೊಲ್ಲಹೇಳಲಾಗಿ ಕಾಳಿಕೆ ತನ್ನ ಅಟ್ಟಹಾಸದಿಂದಲೇ ಅವನನ್ನು ಕೊಂದಳು.

ಅಧ್ಯಾಪಕರು ವಿಶದೀಕರಣದಲ್ಲಿ ಬಂದಿರುವ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಿ ಬರೆಸುವುದು. ನವೀನ ಪದಗಳ ಅರ್ಥ, ಪದ ವಿಂಗಡಣೆ, ಸಮಸ್ತಪದಗಳನ್ನು ಬಿಡಿಸಿ ಬರೆಯುವುದು ಮತ್ತು ವಿಶದೀಕರಣ ಈ ಎಲ್ಲಾ ವಿಚಾರಗಳನ್ನು ಮನಗಂಡ ಬಳಿಕ ಪಾಠ ಭಾಗದ ಆಶಯವನ್ನು ತಿಳಿಯಲು ಸಮರ್ಥರಾಗುವರು. ಗದ್ಯಭಾಗದ ಅಂಶವನ್ನು ಸಾರಾಂಶರೂಪದಲ್ಲಿ (1/3 ಅಂಶಕ್ಕೆ ಸಂಕ್ಷೇಪಿಸಿ) ಬರೆಯಲು ಸೂಚಿಸುವುದು. ಅನಂತರ ಅದನ್ನು ಓದಿಸಿ ಅವಶ್ಯವಿದ್ದಲ್ಲಿ ಸರಿಪಡಿಸುವುದು.

**ಚಟುವಟಿಕೆ**

**ಸಂಕ್ಷಿಪ್ತವಾಗಿ ಉತ್ತರಿಸುವುದು**

- ಧೀರೋದ್ಧತ ಪ್ರತಿನಾಯಕರಾಗಿ ಶೇಣಿ

ಯಕ್ಷಗಾನ ರಸಿಕರು ಬಯಸಿದ್ದು ಹೆಚ್ಚಾಗಿ ಶೇಣಿಯವರ ಧೀರೋದ್ಧತ ಪ್ರತಿ ನಾಯಕ ಪಾತ್ರಗಳನ್ನು. ಉಪ್ಪು ಖಾರ ತುಂಬಿದ ರೋಚಕ ಪಾತ್ರಗಳನ್ನೇ ಅವರು ಹೆಚ್ಚಾಗಿ ರಸವತ್ತಾಗಿ ರೂಪಿಸಬಲ್ಲರೆಂದೇ ಅನೇಕರ ಮೆಚ್ಚುಗೆಯ ಅಭಿಪ್ರಾಯವಾಗಿತ್ತು. ರಾವಣ, ಮಾಗಧ, ನರಕಾಸುರ, ಹಿರಣ್ಯ ಕಶಿಪು, ವಾಲಿ, ಕೌರವ, ಕರ್ಣ, ದುಷ್ಟಬುದ್ಧಿ ಮೊದಲಾದ ಭೂಮಿಕೆಗಳನ್ನು ಕಪ್ಪುಬಿಳುಪಿನ ಮಟ್ಟದ ಸರಳ ನಿರ್ವಹಣೆಯ ಬಗೆಯಿಂದ ಮೇಲೆತ್ತಿ, ಪುರಾಣ ಲೋಕದ ಆ ಕ್ರಿಯಾಶೀಲ ಪ್ರಚಂಡ ವ್ಯಕ್ತಿಗಳ ಸತ್ವ, ಸಾಮರ್ಥ್ಯಗಳ ಜತೆಗೆ ಅವರ ಮನೋಲೋಕದ ಭಾವ ಸಂಘರ್ಷಗಳನ್ನು ಪರಿಣಾಮ ರಮಣೀಯವಾಗಿ ಶೇಣಿಯವರು ಚಿತ್ರಿಸುವ ವೈಖರಿಯೇ ವಿಶಿಷ್ಟವಾಗಿತ್ತು. ಅವರ ಮಹಾಪ್ರತಿಭೆಯ ಬೀಸಿನಲ್ಲಿ ಹೊಸ ನೆತ್ತರು ತುಂಬಿಕೊಂಡು ಆ ಪಾತ್ರಗಳು ವಿಜೃಂಭಿಸಿದವು.

- ಶೇಣಿಯವರಲ್ಲಿ ರಾವಣನ ವ್ಯಕ್ತಿತ್ವವು ಪಡೆದ ವಿವಿಧ ಆಯಾಮಗಳು.

ರಾವಣನ ದಶಮುಖತ್ವಕ್ಕೆ ಬಗೆ ಬಗೆಯ ವ್ಯಾಖ್ಯಾನವನ್ನು ಶೇಣಿಯವರು ಸಾಂದರ್ಭಿಕವಾಗಿ ಮಾಡಿದ್ದಾರೆ. ತನ್ನ ಹಾಗೂ ತನ್ನವರ ಅಸ್ತಿತ್ವ, ಅಸ್ಮಿತೆಗಳನ್ನು ನಿರಂತರ ಪ್ರಯತ್ನದಿಂದ ಸ್ಥಾಪಿಸಿದ ಹೋರಾಟಗಾರನಾಗಿ, ತಪೋಸಾಧಕ ಶಿವಭಕ್ತ ಶಿಖಾಮಣಿಯಾಗಿ, ಸರ್ವಭೋಗ ಭಾಗ್ಯಗಳ ಆಗರವಾದ ಕನಕಲಂಕೆಯ ಸಾರ್ವಭೌಮನಾಗಿ, ಚತುರ್ದಶಭುವನದಲ್ಲಣ ಮಹತ್ವಾಕಾಂಕ್ಷಿ ಮಹಾವೀರನಾಗಿ, ಸೀತಾಪಹಾರ ಮಾಡಬೇಕಾಗಿ ಬಂದ ವಂಚಕನಾಗಿ, ಮರ್ಯಾದಾಪುರುಷೋತ್ತಮನೆನಿಸಿದ ಶ್ರೀರಾಮನ ಶತ್ರುವಾಗಿ, ಮಂಡೋದರಿಯಂಥ

ಸಾಧ್ವಿಯ ಪತಿಯಾಗಿ, ಅತಿಕಾಯ–ಇಂದ್ರಜಿತು ಮೊದಲಾದ ವೀರಾಗ್ರಣಿಗಳ ತಂದೆಯಾಗಿ, ವಿಭೀಷಣನಂಥ ಸಾತ್ವಿಕನ ಅಣ್ಣನಾಗಿ ವಿವಿಧ ಆಯಾಮಗಳಲ್ಲಿ ರಾವಣನ ವ್ಯಕ್ತಿತ್ವವನ್ನು ಶೇಣಿಯವರು ತಮ್ಮ ಕೌಶಲದಿಂದ ಪ್ರೇಕ್ಷಕರನ್ನು ಮೆಚ್ಚಿಸುತ್ತಿದ್ದರು.

- ಶೇಣಿಯವರನ್ನು ರಂಗಸ್ಥಳದ ಅನಭಿಷಿಕ್ತ ದೊರೆಯನ್ನಾಗಿಸಿದ ವಿವಿಧ ಅಂಶಗಳು.

ಶೇಣಿಯವರು ಯಕ್ಷಗಾನ ಆಟದಲ್ಲೂ, ಕೂಟದಲ್ಲೂ, ಹರಿಕಥಾ ಕ್ಷೇತ್ರದಲ್ಲೂ ವಚೋವೀರರಾಗಿ ಆ ರಂಗಗಳನ್ನು ದೀರ್ಘಕಾಲ ಆಳಿದರು. ರಂಗಕ್ಕೆ ಶೋಭೆ ತರುವ ಅವರ ಆಕರ್ಷಕ ವ್ಯಕ್ತಿತ್ವ, ಅಸ್ಖಲಿತ ಶ್ರುತಿಪೂರ್ಣ ಕಂಠಶ್ರೀ, ವಿಶುದ್ಧವಾದ ತರ್ಕಸರಣಿ, ರಸಸ್ಯಂದಿಯಾದ ಮಾತುಗಾರಿಕೆ, ಸಂದರ್ಭೋಚಿತವಾದ ಭಾವಾಭಿನಯ, ಭಾಷೆಯ ದೇಸಿಬೆಡಗು, ನಿಲುವು, ನೋಟ, ಚಾರಿ ಚಲನೆ ಇತ್ಯಾದಿಗಳು ಅವರು ರಂಗಸ್ಥಳದ ಅನಭಿಷಿಕ್ತ ದೊರೆಯನ್ನಾಗಿಸಿದುವು.

## ಚರ್ಚಾಗೋಷ್ಠಿ

ಚರ್ಚಾಗೋಷ್ಠಿಯನ್ನು ತರಗತಿಯಲ್ಲಿ ನಡೆಸುವ ಒಂದು ವಾರದ ಮೊದಲೇ ಅದಕ್ಕೆ ಬೇಕಾಗಿರುವ ಯೋಜನೆಯನ್ನು ಅಧ್ಯಾಪಕರು ರೂಪಿಸಿಕೊಳ್ಳಬೇಕು. ಚರ್ಚಾಗೋಷ್ಠಿಯಲ್ಲಿ ಎರಡು ತಂಡಗಳ ಅಗತ್ಯವಿದೆ. ಒಂದು ತಂಡ ವಿಷಯದ ಪರವಾದರೆ ಇನ್ನೊಂದು ತಂಡ ವಿಷಯದ ವಿರುದ್ಧ. ಎರಡೂ ತಂಡದವರು ತಮಗೆ ನೀಡಿರುವ ವಿಷಯದ ಬಗೆಗೆ ಮಾಹಿತಿ ಸಂಗ್ರಹ ಮಾಡಲು ಹೇಳುವುದು. ಪ್ರಬಂಧ ಬರೆಯಲು ತಿಳಿಸುವುದು. ಎರಡೂ ತಂಡದಿಂದ ಒಬ್ಬೊಬ್ಬರಂತೆ (ವಿಷಯದ ಪರ–ವಿರುದ್ಧ) ಪ್ರಬಂಧ ಮಂಡನೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ಅದಕ್ಕಾಗಿ ಪೂರ್ವಯೋಜನೆ ಮುಖ್ಯ. ಪ್ರಬಂಧ ಮಂಡಿಸುವಾಗ ಉಳಿದ ವಿದ್ಯಾರ್ಥಿಗಳೆಲ್ಲರೂ ಮುಖ್ಯ ಅಂಶಗಳನ್ನು ಗುರುತಿಸಿಕೊಳ್ಳುವಂತೆ ಸೂಚಿಸುವುದು. ಎರಡೂ ತಂಡಗಳ ಮಂಡನೆಯ ಬಳಿಕ ಪ್ರಶ್ನೆ, ಚರ್ಚೆ, ಕ್ರೋಡೀಕರಣ ನಡೆಯಬೇಕು.

ಗೋಷ್ಠಿಯನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕಾಗಿ ಕಾರ್ಯಕ್ರಮ ಪಟ್ಟಿ ತಯಾರಿಸಿ, ಒಬ್ಬೊಬ್ಬರಿಗೆ ಒಂದೊಂದರ ಜವಾಬ್ದಾರಿಯನ್ನು ಹಂಚಿನೀಡಬೇಕು. ಪ್ರಾರ್ಥನೆ, ಪ್ರಬಂಧ ಮಂಡನೆ (ಪರ–ವಿರುದ್ಧ) ಚರ್ಚೆ, ನಿರೂಪಣೆ, ಧನ್ಯವಾದ ಈ ಕಾರ್ಯಗಳನ್ನೆಲ್ಲಾ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಹಂಚಿಕೊಡಬೇಕು. ಅಗ್ಯತವಿದಲ್ಲಿ ಅವರಿಗೆ ಅವುಗಳ ಕುರಿತು ಮಾಹಿತಿ ನೀಡುವುದು ಅಧ್ಯಾಪಕರ ಹೊಣೆ. ಚರ್ಚಾಗೋಷ್ಠಿ ಕಳೆದ ಬಳಿಕ ಅಧ್ಯಾಪಕರು ತಮ್ಮ ಅಭಿಪ್ರಾಯವನ್ನು ತಿಳಿಸುವುದು. ಲೋಪದೋಷಗಳಿದ್ದಲ್ಲಿ ಉತ್ತಮಪಡಿಸಲು ತಿಳಿಸುವುದು.

## ವ್ಯಕ್ತಿಪರಿಚಯ

ರಾಷ್ಟ್ರಕವಿ ಗೋವಿಂದ ಪೈಯವರು 1883 ಮಾರ್ಚ್ 23ರಂದು ಮಂಜೇಶ್ವರದಲ್ಲಿ ಜನಿಸಿದರು. ಅವರ ತಂದೆ ಸಾಹುಕಾರ್ ತಿಮ್ಮ ಪೈ, ತಾಯಿ ದೇವಕಿ ಅಮ್ಮ. ಇವರ ಮಾತೃಭಾಷೆ ಕೊಂಕಣಿ. ಇವರು ಮದ್ರಾಸ್

ಮತ್ತು ಮಂಗಳೂರಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮಾಡಿದರು. ಬಹುಭಾಷಾ ಪಂಡಿತ, ಸಂಶೋಧಕ, ಇತಿಹಾಸಕಾರ, ಕವಿ, ನಾಟಕಕಾರ, ಅನುವಾದಕ, ಹೀಗೆ ಇವರದು ಬಹುಮುಖದ ದುಡಿಮೆ. ಇವರ ಪ್ರತಿಭೆ ಅಪಾರ. ಗೊಮ್ಮಟ ಜಿನಸ್ತುತಿ, ಉಮರ್ ಖಯ್ಯಾಂ, ಗಿಳಿವಿಂಡು, ನಂದಾದೀಪ ಇವುಗಳು ಇವರ ಕಾವ್ಯಗಳು. ಗೊಲ್ಗೊಥಾ,ವೈಶಾಖಿ ಇವರ ಖಂಡಕಾವ್ಯಗಳು. ಇವರು ಬರೆದಿರುವ ನಾಟಕಗಳು ತಾಯಿ, ಹೆಬ್ಬೆರಳು, ಚಿತ್ರಭಾನು. ಇವರಿಗೆ 1949ರಲ್ಲಿ ಮದ್ರಾಸ್ ಸರಕಾರದಿಂದ ರಾಷ್ಟ್ರಕವಿ ಬಿರುದು ಲಭಿಸಿತ್ತು. ಇವರು 1950ರಲ್ಲಿ ಮುಂಬಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## ಭಾಷಾಭ್ಯಾಸ

### ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು

ತೀರಾ ಸಾಮಾನ್ಯವಾದ ಹಲವು ಕೆಲಸಗಳನ್ನು ಮಾಡುವ ಬದಲಿಗೆ ಒಳ್ಳೆಯ ಕೆಲಸ ಒಂದನ್ನು ಮಾಡಿದರೆ ಸಾಕು ಎಂಬುದು ಈ ಮಾತಿನ ಅರ್ಥವಾಗಿದೆ. ಈ ಉಕ್ತಿಯನ್ನು ಮಾತು ಮತ್ತು ಕಾರ್ಯ ಎರಡಕ್ಕೂ ಅನ್ವಯಿಸಿಕೊಳ್ಳಬಹುದು. ಹಾಳು ಹರಟೆಯಾಗಲೀ ಪೊಳ್ಳು ವಿಚಾರವಾಗಲೀ ಬಹಳಷ್ಟು ನುಡಿಯುವುದರಿಂದ ಏನೂ ಪ್ರಯೋಜನವಿಲ್ಲ. (ಸಮಯ ಮತ್ತು ಶಕ್ತಿ ಎರಡರ ದುರುಪಯೋಗವೇ ಹೊರತು ಫಲಕಾರಿಯಾಗದು) ಒಳ್ಳೆಯ ಮಾತು, ವಿಚಾರ ಮುತ್ತಿನಂತೆ ಒಂದು ಇದ್ದರೆ ಸಾಕು, ಕಾರ್ಯವಾದರೂ ಅಷ್ಟೆ. (ನುಡಿದರೆ ಮುತ್ತಿನ ಹಾರದಂತಿರಬೇಕು. ಮಾತೇ ಜ್ಯೋತಿರ್ಲಿಂಗ) ಇಂಥ ಅರ್ಥವನ್ನು ಕೊಡುವ ಹಲವಾರು ಮಾತುಗಳು ಆಡುಭಾಷೆಯಲ್ಲಿ ಬಳಕೆಯಲ್ಲಿವೆ.

ಉದಾ: ದಪ್ಪದ ದೋಸೆ ಒಂದೇ ಸಾಕು; ಗಟ್ಟಿಗ ಮಗ ಒಬ್ಬನೇ ಸಾಕು.

## ವ್ಯಾಕರಣಾಂಶಗಳು

**ತದ್ಧಿತ ಪ್ರತ್ಯಯಗಳು :** ಗಾರ, ಕಾರ, ಅಡಿಗ, ವಳ, ವಂತ ಇವುಗಳನ್ನು ತದ್ಧಿತ ಪ್ರತ್ಯಯ ಎನ್ನುತ್ತಾರೆ.

**ತದ್ಧಿತಾಂತ:** ತದ್ಧಿತ ಪ್ರತ್ಯಯಗಳನ್ನು ಅಂತ್ಯದಲ್ಲಿ ಹೊಂದಿದ ಶಬ್ದರೂಪಗಳೇ ತದ್ಧಿತಾಂತಗಳು.

ಉದಾ: ಗಾರ – ಬಳೆಗಾರ, ಮೋಸಗಾರ

ಕಾರ – ಒಲೆಕಾರ, ಕೈದುಕಾರ

ಇಗ – ಕನ್ನಡಿಗ, ಲೆಕ್ಕಿಗ, ಚೆನ್ನಿಗ, ಗಾಣಿಗ

ವಂತ – ಹಣವಂತ, ಸಿರಿವಂತ, ಬುದ್ಧಿವಂತ

ವಳ – ಮಡಿವಳ

# ಯಕ್ಷಗಾನದ ಅಗ್ರಮಾನ್ಯ ಕಲಾವಿದ ಶೇಣಿ

ಹುಟ್ಟು ಕವಿ, ಕಲಾವಿದ, ಶ್ರೀಯುತ ಶೇಣಿಯವರು ಪ್ರತಿಭಾಸಂಪನ್ನರು. ಅವರು ಬರೆದ ದೇವರನಾಮಗಳು ಹಾಗೂ ಮತ್ತಿತರ ಕೃತಿಗಳು ಅನೇಕವಿವೆ. ಅವೆಲ್ಲ ತಮ್ಮ ಹರಿಕಥೆಯ ವೃತ್ತಿಗಾಗಿ ಬರೆದವುಗಳು. ಅವರು ಬರೆದ 'ರಾಮಾಂಜನೇಯ' ಮತ್ತು 'ಭೂ ಕೈಲಾಸ' ನಾಟಕಗಳು ರಂಗಭೂಮಿಗೊಪ್ಪುವ ಕಲಾಕೃತಿಗಳೆನಿಸಿವೆ. ಅವರು 'ಭೂ ಕೈಲಾಸ'ವೆಂಬ ಯಕ್ಷಗಾನ ಪ್ರಸಂಗವನ್ನೂ ಬರೆದಿರುವರು. ಅಲ್ಲದೆ ಮರುತ್ತರಾಯಚರಿತ್ರೆ, ಶ್ರೀಮತಿ ಪರಿಣಯ, ಮೇಘನಾದ ವಿಜಯ ಮುಂತಾದವು ಅವರ ಇತರ ಪ್ರಸಂಗ ಕೃತಿಗಳು.

ಶೇಣಿಯವರು ಬಾಲ್ಯದಲ್ಲಿಯೇ ಅನೇಕ ನಾಟಕಗಳಲ್ಲಿ ಭಾಗವಹಿಸಿದವರು. ಅವರ ನಾಟಕದ ಅಭಿರುಚಿಗೆ ಆ ಕಾಲದಲ್ಲಿ ಸರಿಯಾದ ಪ್ರೋತ್ಸಾಹವೂ ದೊರೆಯಿತು.

ಆಗತಾನೇ ವಿಟ್ಲ ಗಣಪತಿರಾಯರ ನೇತೃತ್ವದಲ್ಲಿ "ಶ್ರೀಷಣ್ಮುಖ ಪ್ರಸಾದಿತ ನಾಟಕ ಸಭೆ"ಯು ಬೇಳಗ್ರಾಮದಲ್ಲಿ ರೂಪುಗೊಂಡಿತ್ತು. ಆಗ ಶೇಣಿಯವರಿನ್ನೂ ಎಳೆಯ ಬಾಲಕರು. ನಾಟಕದ ಸಣ್ಣಪುಟ್ಟ ಪಾತ್ರಗಳು ಅವರಿಗೆ ಮೀಸಲಾದವು. 'ಮೃಚ್ಛಕಟಿಕ ಅಥವಾ ವಸಂತಸೇನಾ' ನಾಟಕದಲ್ಲಿ ಲೋಹಿತಕ, 'ಸತ್ಯಹರಿಶ್ಚಂದ್ರ'ನಾಟಕದಲ್ಲಿ ರೋಹಿತಾಶ್ವ, 'ಪ್ರಹ್ಲಾದ ಚರಿತ್ರೆ'ಯಲ್ಲಿ ಪ್ರಹ್ಲಾದ ಹಾಗೂ ಭೂದೇವಿ ಮುಂತಾದ ಪಾತ್ರಗಳನ್ನು ಆಗಲೇ ಅವರು ರಸಿಕರ ಮನಮೆಚ್ಚುವಂತೆ ಅಭಿನಯಿಸುತ್ತಿದ್ದರು. ಹೀಗೆ ತಮ್ಮ ಹತ್ತನೇ ವಯಸ್ಸಿನಲ್ಲೇ ಶೇಣಿಯವರು ರಂಗಭೂಮಿಯಲ್ಲಿ ಪಳಗಿದ್ದರು.

## ತಾಳಮದ್ದಳೆಯ ಕೂಟದಲ್ಲಿ

ಶೇಣಿಯವರನ್ನು ಯಕ್ಷಗಾನ ಕೂಟಕ್ಕೆ ಪ್ರವೇಶ ಮಾಡಿಸಿದವರು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು. 'ಪಂಚವಟಿ' ಪ್ರಸಂಗದ 'ಲಕ್ಷ್ಮಣ'ನ ಮೂಲಕ ಶೇಣಿಯವರು ಯಕ್ಷಗಾನ ತಾಳಮದ್ದಳೆಯ ಕೂಟದಲ್ಲಿ ಕಾಲಿಟ್ಟರು. ಕರ್ನಾಟಕದ ಸುಪ್ರಸಿದ್ಧ ಯಕ್ಷಗಾನ ಅರ್ಥಧಾರಿಗಳ ಶ್ರೇಣಿಯಲ್ಲಿ ಶೇಣಿಯವರೂ ಒಬ್ಬರು.

ಶೇಣಿಯವರ 'ಅರ್ಥ'ಕೇವಲ ಅರ್ಥವಷ್ಟೇ ಅಲ್ಲ. ಅದು ತುಂಬಾ ನಾಟಕೀಯವಾದುದು, ರಸಸ್ಯಂದಿಯಾದುದು. ಆಯಾ ಪಾತ್ರಗಳ ಚಿತ್ರಣ ಹಾಗೂ ರಸಪೋಷಣೆಯಲ್ಲಿ ಅವರು ಅಗ್ರಗಣ್ಯರು. 'ರಾಜಸೂಯಾಧ್ವರ' ಪ್ರಸಂಗದಲ್ಲಿ ಅವರ ಜರಾಸಂಧನ ಅರ್ಥ ತೊಡಗಿದಾಗ ಒಮ್ಮೆ ಇಡೀ ಸಭೆಯೇ

ನಡುಗುವಂತಾಗುತ್ತಿತ್ತು. ಅಂತಹ ಗಾಂಭೀರ್ಯ, ಅಂತಹ ವಾಕ್ ಸರಣಿ! ಅವರ ವಾಲಿಯೂ ಅಷ್ಟೇ ಉದಾತ್ತ ಧ್ಯೇಯವುಳ್ಳವನು. ರಾಮನೊಡನೆ ವಾಲಿ ಕಟುವಾಗಿ ಮಾತನಾಡಬಲ್ಲ. ಅವರ ವಾಲಿಯ ಮುಂದೆ ಸಾಮಾನ್ಯ ರಾಮ ಕಾಣಲಾರ. ಅಂತಹ ವಾದ ಸರಣಿಯನ್ನು ಅವರು ರಾಮನ ಮುಂದೆ ತಂದೊಡ್ಡುತ್ತಿದ್ದರು. ಆದರೆ ಅದೇ ವಾಲಿ ಕೊನೆಗೆ ಭಕ್ತಿಪರವಶನಾಗಿ ರಾಮ ಭಕ್ತಿಯ ಸಮುದ್ರದಲ್ಲಿ ಮುಳುಗುತ್ತಾನೆ; ಶ್ರೋತೃಗಳನ್ನು ಮುಳುಗಿಸುತ್ತಾನೆ. ಕೊನೆಗೆ 'ಇತ್ತ ಬಾ ತಮ್ಮ ಸುಗ್ರೀವ' ಎಂಬ ಪದ್ಯದ ಅರ್ಥ ಹೇಳುವಷ್ಟರಲ್ಲಿ ಶೇಣಿಯವರು ಸಹೃದಯರನ್ನು ಅಳುವಿನಲ್ಲಿ ಮುಳುಗಿಸಿಬಿಡುತ್ತಿದ್ದರು.

ಕೂಟದಲ್ಲಿ ಯಾರಾದರೂ ಅವರೊಡನೆ ತರ್ಕಕ್ಕೆ ಅಥವಾ ವಾದಕ್ಕೆ ಹೊರಟರೆ ಅವರು ಬಿಡುತ್ತಿರಲಿಲ್ಲ. ತಾವು ಕೇಳುವ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯುವವರೆಗೂ ಅವರು ವಾದಮಾಡುತ್ತಿದ್ದರು. ಹಾಗೆಂದು ಮೂಲಕಥೆಗೆ ವಿರೋಧವಾಗಿ ಅವರು ಮಾತನಾಡುವವರೇ ಅಲ್ಲ. ಸರಿಯಾದ ಪುರಾವೆ ಆಧಾರಗಳಿಲ್ಲದ ಜಡವಾದವನ್ನು ಅವರು ಮಾನ್ಯಮಾಡುತ್ತಿರಲಿಲ್ಲ.

# ಭೂತಾರಾಧನೆ ಮತ್ತು ತೆಯ್ಯಂ

**ಪ್ರವೇಶ**

ಕಾಸರಗೋಡಿನ ಅತ್ಯಂತ ಶಕ್ತಿಯುತ ಹಾಗೂ ಜನಪ್ರಿಯ ಆರಾಧನ ಕಲೆಗಳಲ್ಲಿ ಭೂತ ಹಾಗೂ ತೈಯ್ಯಂ ಆರಾಧನೆಗಳಿಗೆ ಮಹತ್ವದ ಸ್ಥಾನವಿದೆ. ಜನರ ಮನಸ್ಸಿನಲ್ಲಿ ಭಯ ಭಕ್ತಿಯನ್ನು ಮೂಡಿಸುವುದರ ಜೊತೆಗೆ ಮನೊರಂಜನೆಯನ್ನೂ ನೀಡಿ ಈ ಕಲೆಗಳು ಹೆಚ್ಚು ಪ್ರಚಾರದಲ್ಲಿವೆ.. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ವೇಷಭೂಷಣ, ಬಣ್ಣಗಾರಿಕೆ, ಕುಣಿತಗಳಂತಹ ಕಲೆಯ ಪರಿಕರಗಳನ್ನು ಮೈಗೊಡಿಸಿಕೊಂಡಿರುವ ಭೂತ ಹಾಗೂ ತೈಯ್ಯಂ ಆರಾಧನೆಗಳು ಒಂದು ಧಾರ್ಮಿಕ ರಂಗಭೂಮಿಯಾಗಿ ಬೆಳವಣಿಗೆ ಹೊಂದಿದೆ. ಇವು ಜನರ ಆರಾಧನಾ ಪದ್ಧತಿಯಾಗಿ ವಿಕಾಸಗೊಂಡಿವೆ. ಈ ಜನಪದ ಕಲೆಗಳ ಭಾಗವಾದ ಪಾಡ್ದನಗಳು ಹಾಗೂ ತೋಟ್ಟಂಗಳು ಇಲ್ಲಿನ ಸಂಸ್ಕೃತಿಯನ್ನು ಅನಾವರಣ ಮಾಡುವಲ್ಲಿ ಸಮರ್ಥವಾದ ದಾಖಲೆಗಳಾಗಿವೆ.

ಬಣ್ಣ, ವೇಷಭೂಷಣ, ಕುಣಿತ ಮೊದಲಾದ ಅಂಶಗಳು ಸೇರಿಕೊಂಡಿರುವುದರಿಂದ ಇವು ಒಂದು ಕಲಾತ್ಮಕ ಅಭಿವ್ಯಕ್ತಿಯಾಗಿ ಕಂಡುಬರುತ್ತವೆ. ಭೂತ ಹಾಗೂ ತೆಯ್ಯಂ ಆರಾಧನೆಗಳಲ್ಲಿ ತುಳು, ಮಲೆಯಾಳ ಸಮಾಜಗಳ ಸಂಸ್ಕೃತಿಯನ್ನು ಕಾಣಬಹುದು. ಸಮಾಜದ ವಿಷಮತೆಗಳನ್ನು ನಿವಾರಿಸಿ ಐಕ್ಯವನ್ನು ಪ್ರತಿಪಾದಿಸುವ ಮಾರ್ಗದ ನಿರೂಪಣೆಯನ್ನು ಕಾಣಬಹುದು.

ಕಾಸರಗೋಡಿನ ಜನತೆ ಈ ಎರಡು ಕಲೆಗಳನ್ನೂ ಅವುಗಳ ಸಾಂಸ್ಕೃತಿಕ ಹಿನ್ನೆಲೆಯನ್ನೂ ಅರ್ಥಮಾಡಿಕೊಂಡಿರುತ್ತಾರೆ. ಈ ಆರಾಧನೆಗಳ ಹಿಂದಿರುವ ಧಾರ್ಮಿಕ ಮಹತ್ವವನ್ನು ಅರಿತಿರುತ್ತಾರೆ. ಕೇರಳದ ಉತ್ತರ ಭಾಗದಲ್ಲಿ ಹೆಚ್ಚು ಜನಪ್ರಿಯವಾಗಿರುವ ತೈಯ್ಯಂ ಹಾಗೂ ತುಳುನಾಡಿನ ಭೂತಾರಾಧನೆಯ ವೈಶಿಷ್ಟ್ಯವನ್ನು ತಿಳಿಸುವುದು ಈ ಪಾಠದ ಉದ್ದೇಶ.

ತುಳುನಾಡಿನ ಭೂತಾರಾಧನೆ ಹಾಗೂ ಕೇರಳದ ಮಲಬಾರ್ ಪ್ರದೇಶದ ತೈಯ್ಯಂ ಆರಾಧನೆಗಳ ಕುರಿತು ಕಾಸರಗೋಡಿನ ವಿದ್ಯಾರ್ಥಿಗಳು ತಿಳಿದಿರುವ ಅಂಶಗಳನ್ನು ಬಾಯ್ದೆರೆಯಾಗಿ ಹೇಳಲಿ. ಅಧ್ಯಾಪಕರು ಭೂತ, ತೈಯ್ಯಂಗಳ ಕುರಿತಾದ ಮಾಹಿತಿಯಿರುವ ದೃಶ್ಯವೊಂದನ್ನು ಪ್ರದರ್ಶಿಸುವುದು. ಬಳಿಕ ವಿದ್ಯಾರ್ಥಿಗಳು ಪಾಠ ಭಾಗವನ್ನು  ಓದಿಕೊಳ್ಳುವಂತೆ ಸೂಚಿಸುವುದು.

ಪಾಠಭಾಗದಲ್ಲಿ ಬಂದಿರುವ ನವೀನ ಪದಗಳನ್ನು ಈ ಹಂತದಲ್ಲಿ ಗುರುತಿಸಿಕೊಂಡು ಪದಕೋಶದ ಸಹಾಯದಿಂದ ಅರ್ಥವನ್ನು ಕಂಡುಕೊಳ್ಳಲಿ. ಅಗತ್ಯವಿರುವ ಕಡೆಗಳಲ್ಲಿ ಅಧ್ಯಾಪಕರು ಸೂಕ್ತವಾದ ಮಾಹಿತಿಯನ್ನು ನೀಡಿ ವಿದ್ಯಾರ್ಥಿಗಳಿಗೆ ನೆರವಾಗುವುದು.

**ಚಟುವಟಿಕೆಗಳು**

- **ತುಲನಾತ್ಮಕ ಟಿಪ್ಪಣಿ**

ಭೂತಾರಾಧನೆ ಹಾಗೂ ತೆಯ್ಯಂ ಆರಾಧನೆಗಳ ನಡುವೆ ವೇಷಭೂಷಣದಲ್ಲಿ, ಆರಾಧನೆಯಲ್ಲಿ, ಮಾತುಗಾರಿಕೆಯಲ್ಲಿ ಹಾಗೂ ಇತರ ವಿಚಾರಗಳಲ್ಲಿ ಇರುವ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ವಿದ್ಯಾರ್ಥಿಗಳು ಅರಿತಿರುತ್ತಾರೆ. ಇವುಗಳನ್ನು ಗುರುತಿಸಿ ತುಲನಾತ್ಮಕ ಟಿಪ್ಪಣಿಯನ್ನು ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಲಿ. ಉತ್ತಮವಾದ ಬರಹಕ್ಕೆ ಅಭಿನಂದನೆ ಸಲ್ಲಿಸಲು ಮರೆಯಬಾರದು.

- **ಭೂತ-ತೆಯ್ಯಂ ಆರಾಧನೆಯ ಹಂತಗಳ ವಿವರಗಳನ್ನು ಸಂಗ್ರಹಿಸುವುದು**

ಭೂತ ಮತ್ತು ತೆಯ್ಯಂ ನಡೆಯುವ ಸ್ಥಳಕ್ಕೆತೆರಳಿ ಅಲ್ಲಿನ ವಿವಿಧ ಹಂತಗಳನ್ನು ಪಟ್ಟಿ ಮಾಡುವಂತೆ ವಿದ್ಯಾರ್ಥಿಗಳಿಗೆ ಹೇಳುವುದು. ಇದಕ್ಕಾಗಿ ವಿದ್ಯಾರ್ಥಿಗಳನ್ನು 4 ಗುಂಪುಗಳಾಗಿಸುವುದು. ಈ ಗುಂಪುಗಳು ಭೂತ ಮತ್ತು ತೆಯ್ಯಂ ನಡೆಯುವ ಸ್ಥಳಕ್ಕೆ ತೆರಳಿ ಪ್ರತಿ ಹಂತಗಳನ್ನು ವೀಕ್ಷಿಸಲಿ. ಪರಸ್ಪರ ಚರ್ಚೆಯೊಂದಿಗೆ ಹಂತಗಳನ್ನು ದಾಖಲಿಸಲಿ. ಚರ್ಚೆಯಲ್ಲಿ ಮೂಡಿಬಂದ ಹಂತಗಳನ್ನು ಪ್ರತಿಗುಂಪಿನವರು ತರಗತಿಯಲ್ಲಿ ಮಂಡಿಸಲಿ. ಸೂಕ್ತವಾದುದನ್ನು ಆಯ್ದು ಅಗತ್ಯ ಬದಲಾವಣೆಗಳೊಂದಿಗೆ ವಿದ್ಯಾರ್ಥಿಗಳು ಲೋಗ್ ಬುಕ್‌ನಲ್ಲಿ ಸೇರಿಸಿಕೊಳ್ಳಲಿ.

- **ಭೂತ ಹಾಗೂ ತೆಯ್ಯಂಗಳ ಪಟ್ಟಿ**

ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳನ್ನಾಗಿ ಮಾಡುವುದು. ಅವರು ತಮ್ಮ ಪ್ರದೇಶದಲ್ಲಿ ಪ್ರಚಲಿತವಾಗಿರುವ ಭೂತ ಹಾಗೂ ತೆಯ್ಯಂಗಳ ಪಟ್ಟಿಯನ್ನು ತಯಾರಿಸಲಿ. ಬಳಿಕ ಅದನ್ನು ತರಗತಿಯಲ್ಲಿ ಮಂಡಿಸಲಿ. ತರಗತಿಯಲ್ಲಿ ಚರ್ಚಿಸಿದ ಬಳಿಕ ತುಳುನಾಡಿನ ಭೂತಗಳ ಹಾಗೂ ತೆಯ್ಯಂಗಳ ವರ್ಗೀಕರಣ ಆಗಬೇಕು. ವಿದ್ಯಾರ್ಥಿಗಳು ಲೋಗ್ ಬುಕ್‌ನಲ್ಲಿ ಈ ಪಟ್ಟಿಯನ್ನು ಬರೆದುಕೊಳ್ಳುವಂತೆ ಸೂಚಿಸುವುದು.

**ಭೂತ**

ರಕ್ತೇಶ್ವರಿ, ಪಂಜುರ್ಲಿ, ಗುಳಿಗ, ಉಳ್ಳಾಲ್ತಿ, ಕಲ್ಲುಡ-ಕಲ್ಲುರ್ಟಿ, ಕೋಟಿ-ಚೆನ್ನಯ, ಬಿಲ್ಲರಾಯ, ಬೊಬ್ಬರ್ಯ, ಧೂಮಾವತಿ, ಉಳ್ಳಾಕುಳು, ಆಲಿಭೂತ, ಮೂಜಲ್ನಾಯ, ಭೈರವ, ಕೊಡಮಣಿತ್ತಾಯ, ಅಣ್ಣಪ್ಪ ದೈವ, ಮಲರಾಯ, ಪಿಲಿ ಚಾಮುಂಡಿ, ಕೊರ್ದಬ್ಬು, ತನ್ನಿಮಾನಿಗ, ಕೊರಗತನಿಯ

**ತೆಯ್ಯಂ**

ವಿಷ್ಣುಮೂರ್ತಿ, ರಕ್ತೇಶ್ವರಿ, ವಯನಾಟ್ ಕುಲವನ್, ಕುಳಿಯನ್, ಪೊಟ್ಟನ್, ಭವಗತಿ ತೈಯ್ಯಂ, ಮುತ್ತಪ್ಪನ್, ಚಾಮುಂಡಿ ತೆಯ್ಯಂ, ಭೈರವನ್, ಕುಟ್ಟಿಚಾತನ್, ಕೊರತ್ತಿ, ಪುಲಿಕಂತನ್, ಕಾಳ ಪುಲಿಯನ್, ಮುಚ್ಚಿಲೋಟ್ ಭಗವತಿ, ವೇಟ್ಟಕ್ಕೊರು ಮಗನ್, ಪುದಿಯಭಗವತಿ, ಪುಳ್ಳಿಕರಿಂಗಾಳಿ, ಪುಳ್ಳಿಪೂವನ್, ಕಣ್ಣಿಕ್ಕೊರುಮಗನ್.

- **ಸಾಂಸ್ಕೃತಿಕ ಪದಕೋಶ ತಯಾರಿ**

ಭೂತಾರಾಧನೆ ಮತ್ತು ತೆಯ್ಯಂ ಪಾಠವನ್ನು ಮೌನವಾಗಿ ಓದುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಈ ಆರಾಧನ ಕಲೆಗಳ ಸಂದರ್ಭದಲ್ಲಿ ಬಳಸಲ್ಪಡುವ ವಿಶಿಷ್ಟ ಸಾಂಸ್ಕೃತಿಕ ಪದಗಳನ್ನು (ವೇಷಭೂಷಣ, ಬಣ್ಣಗಾರಿಕೆ) ಪಟ್ಟಿ ಮಾಡುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಇದರೊಂದಿಗೆ ಈ ಕಲೆಗಳ ಕುರಿತು ಅರಿವಿರುವ ಹಿರಿಯರು ಮತ್ತು ಭೂತ, ತೆಯ್ಯಂ ಕಲಾವಿದರನ್ನು ಸಂದರ್ಶಿಸಿ, ಹೆಚ್ಚಿನ ಪದಗಳನ್ನು ಸಂಗ್ರಹಿಸಿ ಅರ್ಥವನ್ನು ತಿಳಿದು ಸಾಂಸ್ಕೃತಿಕ ಪದಕೋಶವನ್ನು ತಯಾರಿಸಲು ಹೇಳುವುದು. ಅಧ್ಯಾಪಕರು ಸಾಕಷ್ಟು ಪೂರಕ ಮಾಹಿತಿಗಳನ್ನು ಇಲ್ಲಿ ಒದಗಿಸತಕ್ಕದ್ದು. ಪದಕೋಶವನ್ನು ವಿದ್ಯಾರ್ಥಿಗಳು ತಮ್ಮ ಕೈ ಬರಹ ಪತ್ರಿಕೆಯಲ್ಲಿ ಪ್ರಕಟಿಸಲಿ.

**ಭೂತಾರಾಧನೆಯ ವೇಳೆ ಬಳಸುವ ಕೆಲವು ಸಾಂಸ್ಕೃತಿಕ ಪದಗಳು**

ಅಗೆಲು : ಭೂತಕ್ಕೆ ಒಪ್ಪಿಸುವ ಮಾಂಸದಡುಗೆಯ ಎಡೆ

ಅಣಿ : ಭೂತ ಕಟ್ಟುವವನು ಬೆನ್ನಿಗೆ ಕಟ್ಟಿಕೊಳ್ಳುವ ಪ್ರಭಾವಳಿ

ಅರ್ದಲ : ಭೂತದ ಮುಖಕ್ಕೆ ಉಪಯೋಗಿಸುವ ಹಳದಿ ಬಣ್ಣ

ಆಯನೋ : ಭೂತ ಉತ್ಸವದ ಒಂದು ಪ್ರಕಾರ

ಇಂಗ್ಲಿಕ : ಒಂದು ಬಗೆಯ ಕೆಂಪು ಬಣ್ಣ

ಉಜ್ಜಾಲ್ : ತೂಗು ಮಂಚ

ಎಣ್ಣೆ ಬೂಳ್ಯ : ಭೂತ ಕಟ್ಟಲು ಅನುಮತಿ ನೀಡುವ ಒಂದು ವಿಧಿ

ಒತ್ತೆಕೋಲ : ವಿಷ್ಣುಮೂರ್ತಿ ದೈವಕ್ಕೆ ನಡೆಯುವ ಕೆಂಡ ಸೇವೆಯ ಆರಾಧನೆ

ಒಲಿಕಿರೀಟೋ : ತೆಂಗಿನ ಗರಿಯಿಂದ ಮಾಡಿದ ಕಿರೀಟ

ಒಸಗೆ : ಅವತಾರ, ದರ್ಶನ

ಕಡ್ತಲೆ : ಭೂತ ಹಿಡಿಯುವ ಕತ್ತಿ

ಕುರ್ದಿ : ಸುಣ್ಣ, ಅರಸಿನವನ್ನು ಬೆರಸಿ ಕಲಸಿದ ನೀರು.

ಕೆಬಿನ : ಕಿವಿಯಲ್ಲಿ ಧರಿಸುವ ಆಭರಣ.

ಕೇದಿಗೆ : ಕೇದಗೆಯನ್ನು ಹೋಲುವ ಒಂದು ಬಗೆಯ ಆಭರಣ

ಗಗ್ಗರ : ಕಾಲಿಗೆ ಕಟ್ಟಿಕೊಳ್ಳುವ ದೊಡ್ಡದಾದ ಗೆಜ್ಜೆ

ಜಕ್ಕೆಲಣಿ : ಸೊಂಟ ಪಟ್ಟಿ

ತಂಬಿಲ : ಸರಳ ಸಾತ್ವಿಕ ರೂಪದ ಭೂತ ನೈವೇದ್ಯ

ತಲೆ ಪಟ್ಟಿ : ತಲೆಗೆ ಕಟ್ಟಿಕೊಳ್ಳುವ ಆಭರಣ

ತೆಂಬೆರೆ : ಪಾಡ್ದನಗಳನ್ನು ಹಾಡುವಾಗ ಹಿಮ್ಮೇಳದಲ್ಲಿ ಬಾರಿಸುವ ಡೋಲು.

ದೊನ್ನೆ : ಬಾಳೆ ಎಲೆಯಿಂದ ತಯಾರಿಸಿದ ಸಣ್ಣ ಪಾತ್ರೆಯಂತಹ ರಚನೆ.

ಪಾಡ್ದನ : ಭೂತದ ಚರಿತ್ರೆಯನ್ನೊಳಗೊಂಡ ಕಥಾನಕ

ಬಾರಣೆ : ಪಾರಣೆ

ಬೂಳ್ಯ : ಭೂತ ನೀಡುವ ಪ್ರಸಾದ

ಮಂಜಲ್ : ಅರಸಿನ

ಮದಿಪು : ಭೂತ ನೀಡುವ ಅಭಯದ ನುಡಿ

ಮಾನಿ : ಭೂತದ ಪಾತ್ರಿ

ಮೊಗ : ಮುಖವಾಡ

- **ಜಾನಪದ ಕಲೆಗಳ ಪರಿಚಯ**

ಊರಲ್ಲಿ ಜನಪ್ರಿಯವಾಗಿರುವ ಜನಪದ ಕಲೆಗಳ ಕುರಿತು ವಿದ್ಯಾರ್ಥಿಗಳು ಸಾಕಷ್ಟು ತಿಳಿದಿರುತ್ತಾರೆ. ಇಂತಹ ಯಾವುದಾದರೊಂದು ಜಾನಪದ ಕಲೆಯ ಪರಿಚಯವನ್ನು ಬರೆದು ತರುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಓದಿಸುವುದು. Log Book ನಲ್ಲಿ ದಾಖಲಿಸಿಕೊಳ್ಳುವುದು.

- **ಸಂದರ್ಶನ ಪ್ರಶ್ನಾವಳಿ ತಯಾರಿ**

ಭೂತ ಕಟ್ಟುವ ಕಲಾವಿದನೊಬ್ಬನನ್ನು ಸಂದರ್ಶಿಸಿ ಭೂತಾರಾಧನೆಯಲ್ಲಿ ಬಳಸುವ ವೇಷಭೂಷಣಗಳನ್ನು ಹಾಗೂ ಬಣ್ಣಗಾರಿಕೆಯ ವಿವರಗಳನ್ನು ಸಂಗ್ರಹಿಸುವಂತೆ ವಿದ್ಯಾರ್ಥಿಗಳಿಗೆ ನಿರ್ದೇಶಿವುದು. ಅದಕ್ಕಾಗಿ ಸೂಕ್ತ ಪ್ರಶ್ನಾವಳಿಗಳನ್ನು ವಿದ್ಯಾರ್ಥಿಗಳು ತಯಾರಿಸಲಿ, ಬಳಿಕ ಅದನ್ನು ತರಗತಿಯಲ್ಲಿ ಓದಲಿ. ಸೂಕ್ತವಾದ ಪ್ರಶ್ನೆಗಳನ್ನು ಆಯ್ದು ವಿದ್ಯಾರ್ಥಿಗಳ ಲೋಗ್ ಬುಕ್ಕಿನಲ್ಲಿ ದಾಖಲಿಸಲಿ. ಬಳಿಕ ಸಮಯವನ್ನು ನಿರ್ದೇಶಿಸಿ ಸಂದರ್ಶನಕ್ಕೆ ತೆರಳುವಂತೆ ಸೂಚಿಸುವುದು.

**ಪ್ರಶ್ನಾವಳಿಯ ಒಂದು ಮಾದರಿ**

1 ನಮಸ್ಕಾರ, ಚೆನ್ನಾಗಿದ್ದೀರಾ? ನಿಮ್ಮಲ್ಲಿ ಭೂತದ ವೇಷಭೂಷಣಗಳ ಕುರಿತಾದ ಮಾಹಿತಿ ಸಂಗ್ರಹಕ್ಕಾಗಿ ಬಂದಿದ್ದೇವೆ. ದಯವಿಟ್ಟು ಸೂಕ್ತ ಮಾಹಿತಿಗಳನ್ನು ನೀಡಿ ಸಹಕರಿಸುವಿರಾ?

2 ಆರಾಧನೆ ತೊಡಗುವ ಮೊದಲು ವೇಷಭೂಷಣಕ್ಕೆ ತೊಡಗಿಸಿಕೊಳ್ಳಲಾಗುತ್ತದೆ. ಆ ತೊಡಗುವಿಕೆಗೆ ಏನೆಂದು ಹೇಳುತ್ತಾರೆ? ತೊಡಗುವಾಗ ಯಾವ ವಿಧಿಗಳನ್ನು ಅನುಸರಿಸಲಾಗುತ್ತದೆ?

3 ದೈವ ನರ್ತಕರು ತಮಗೆ ತಾವೇ ವೇಷಭೂಷಣ ತೊಟ್ಟುಕೊಳ್ಳುವುದೋ ಅಥವಾ ಇತರರು ತೊಡಿಸುವುದೋ?

4 ಇಲ್ಲಿ ಬಳಸಲ್ಪಡುವ ಪರಿಕರಣಗಳು ಯಾವುವು?

5 ಬಣ್ಣಗಳನ್ನು ಹೇಗೆ ತಯಾರಿಸಲಾಗುತ್ತದೆ. ಅದಕ್ಕೆ ಏನೆಂದು ಕರೆಯುತ್ತಾರೆ?

6 ವೇಷ ಭೂಷಣ ತೊಟ್ಟುಕೊಳ್ಳುವಾಗ ದೈವಾರಾಧನೆಗೆ ಸಂಬಂಧಿಸಿದಂತೆ ಬೇರೆ ಯಾವ ಕ್ರಿಯೆಗಳನ್ನು

ನಡೆಸಲಾಗುತ್ತದೆ?

7 ವೇಷಭೂಷಣ ತೊಟ್ಟು, ಮುಖಾಲಂಕಾರ ಮುಗಿಸಿ ಸಿದ್ಧವಾಗಲು ಸುಮಾರು ಎಷ್ಟು ಹೊತ್ತು ಬೇಕಾಗುತ್ತದೆ?

8 ಬೇರೆ ಬೇರೆ ದೈವಗಳಿಗೆ ಭಿನ್ನ ಭಿನ್ನ ವೇಷ ಭೂಷಣಗಳಿವೆಯೇ?

9 ಯಾವುದಾದರೂ ಒಂದು ಭೂತದ ವೇಷಭೂಷಣಗಳ ವಿಧಾನವನ್ನು ತಿಳಿಸುವಿರಾ?

**ವರದಿ ತಯಾರಿ**

ಭೂತ ಕಲಾವಿದನನ್ನು ಸಂದರ್ಶಿಸಿದ ಬಳಿಕ 'ಭೂತಾರಾಧನೆಯಲ್ಲಿ ವೇಷಭೂಷಣ ಹಾಗೂ ಬಣ್ಣಗಾರಿಕೆ'ಯ ಕುರಿತಾದ ವರದಿಯನ್ನು ವಿದಾರ್ಥಿಗಳು ತಯಾರಿಸಲಿ. ತರಗತಿಯಲ್ಲಿ ಮಂಡನೆಯಾದ ಬಳಿಕ ಲೋಗ್ ಬುಕ್ಕಿನಲ್ಲಿ ಸೇರಿಸಿಕೊಳ್ಳಲಿ.

**ಪೂರಕ ಓದಿಗೆ :**

## ಕೇರಳದ 'ತೆಯ್ಯಂ'ಗಳು ಮತ್ತು ತುಳುನಾಡಿನ 'ದೆಯ್ಯೋಂ'ಕುಳು

– ಡಾ. ವೆಂಕಟರಾಜ ಪುಣಿಂಚತ್ತಾಯ

'ತೆಯ್ಯಂ' ಎಂಬುದು 'ದೈವ' ಪದದ ದ್ರಾವಿಡೀಕೃತ ರೂಪ. ಅದನ್ನೇ ತುಳುವಿನಲ್ಲಿ 'ದೆಯ್ಯ' ಎನ್ನುತ್ತಾರೆ. ತುಳುನಾಡಿನಲ್ಲಿ ಮತ್ತು ಕೇರಳದಲ್ಲಿ ಈ ಎರಡು ರೂಪಗಳ ಆರಾಧನೆಯೂ ಸಮಾನವಾಗಿ ಜರುಗುತ್ತದೆ. 'ದೆಯ್ಯೊ'ಗಳಿಗೆ ಭೂತವೆಂಬ ಹೆಸರು ಅನಂತರ ಬಳಕೆಗೆ ಬಂದದ್ದು. ಭೂತಗಳು ತಮ್ಮ ನುಡಿಗಟ್ಟುಗಳಲ್ಲಿ ಹೆಚ್ಚಾಗಿ ತಮ್ಮನ್ನು 'ದೆಯ್ಯೊ' ಎಂದೇ ಕರೆದುಕೊಂಡಿವೆಯಲ್ಲದೆ, ಭೂತವೆಂದು ಹೆಸರಿಸಿಕೊಂಡದ್ದಿಲ್ಲ.

'ಭೂತ' ಎಂದರೆ ಪಂಚಭೂತಗಳು, ಜೀವಜಾಲ, ಪಿಶಾಚಗಣ ಎಂದೆಲ್ಲ ಅರ್ಥಗಳಿವೆ. ಹಾಗೆಯೇ ಸತ್ಯ ಎಂಬ ಅರ್ಥವೂ ಇದೆ. ನಮ್ಮ ಜನಪದರೂ ಭೂತವನ್ನು ಸತ್ಯೊ, ಮಾಯೆ ಎಂದೆಲ್ಲ ಸಂಭೋಧಿಸುವುದು ಸರ್ವೇ ಸಾಮಾನ್ಯ. ತಮ್ಮ ಇಷ್ಟದೇವತೆಯನ್ನು ವಿಗ್ರಹದಲ್ಲಿ ಅವಾಹನಗೊಳಿಸಿ ಅರ್ಚಿಸುವುದು ವೈದಿಕ ವಿಧೀಯಾದರೆ, ಇಷ್ಟದೇವತೆಯನ್ನು ಮನುಷ್ಯಶರೀರದಲ್ಲಿ ಆವೇಶಗೊಳಿಸಿ ಪೂಜಿಸುವುದು ದ್ರಾವಿಡ ಸಂಪ್ರದಾಯ. ಈ ಎರಡು ಸಂಸ್ಕೃತಿಗಳೂ ಭೂತಾರಾಧನೆಯಲ್ಲಿ ಸಮ್ಮಿಶ್ರವಾಗಿವೆ. ಕಾಸರಗೋಡು ಪ್ರದೇಶದ ಕೆಲವೊಂದು ಭೂತ ಸ್ಥಾನಗಳಲ್ಲಿ ಭೂತಗಳ ಕಂಚಿನ ವಿಗ್ರಹವಿದ್ದು ಅಲ್ಲಿ ತಂತ್ರಾಗಮವಿಧಿ ಪ್ರಕಾರ ನಿತ್ಯ ನೈವೇದ್ಯ ಸಮರ್ಪಣೆ ಹಾಗೂ ವರ್ಷಾವಧಿ ಉತ್ಸವವೂ ಜೊತೆಗೆ ಭೂತಗಳ ನೇಮವೂ ಜರುಗುತ್ತಿವೆ. ಉತ್ತರ ಮಲಬಾರು ಹಾಗೂ ತುಳುನಾಡು ಪ್ರದೇಶಗಳೇ ಭೂತಾರಾಧನೆಯ ಮುಖ್ಯ ಕೇಂದ್ರಗಳು.

ತುಳುನಾಡಿನಲ್ಲಿ ದೆಯ್ಯೋಗಳ ಆರಾಧನೆ ಬಹಳ ಪುರಾತನವಾದದ್ದು, ಆದಿ ದ್ರಾವಿಡರು ತಮ್ಮ ಇಷ್ಟದೇವತೆಗಳನ್ನು ಯಾವುದಾದರೂ ಮರದ ಬುಡದಲ್ಲಿ ಶಿಲಾ ಸಂಕೇತದಲ್ಲಿ ಆರಾಧಿಸುತ್ತಿದ್ದರು. ಪ್ರಾಚೀನ ತುಳುನಾಡಿನ ಗುಡ್ಡ ಗಾಡಿನ ತುಳುವ ಜನರು ಇಂದಿಗೂ ತಮ್ಮ ಕುಲದೇವತೆಗಳನ್ನು ಶಿಲಾಸಂಕೇತದಲ್ಲಿ ಪೂಜಿಸಿ

ಬಲಿ ಅರ್ಪಿಸುವುದನ್ನು ಕಾಣಬಹುದು. ಬಳಿಕ ಗುಂಪಿನ ಮುಖ್ಯಸ್ಥನಿಗೆ 'ಒಸೆಯೊ' ಅತವಾ 'ದರ್ಸನೊ' (ಆವೇಶ) ಬರುತ್ತದೆ. ಆತ ಅಲ್ಲಿ ನೆರೆದ ಕುಟುಂಬಿಕರಿಗೆ ಒಳ್ಳೆಯ ಮಾತುಗಳನ್ನು ಹೇಳಿ ಹರಸುತ್ತಾನೆ. ಗುಂಪಿನ ನ್ಯಾಯ ವಿವಾದಗಳನ್ನು ತೀರಿಸುತ್ತಾನೆ. ಇವರು ಕೊರತ್ತಿ, ಪೊಟ್ಟೆ ಮುಂತಾದ ತಮ್ಮ ಸಮಾಜದ ಇಷ್ಟದೇವತೆಗಳನ್ನೂ ಇದೇ ವಿಧಾನದಲ್ಲಿ ಆರಾಧಿಸುತ್ತಾರೆ. ಇವರಲ್ಲಿ ಕೋಲ ಸಂಪ್ರದಾಯವು ಆಚರಣೆಯಲಿಲ್ಲ.

ಆದರೆ ಬಯಲುಸೀಮೆಯ ಮೇರ ವರ್ಗದವರಲ್ಲಿ ಕೋಲಗಳ ಆಚರಣೆಯಿದೆ. ಮೇರರು ತಮ್ಮ ಪೂರ್ವಜರಾದ 'ಮೇರ'ರ ಅಥವಾ ಮೊಗೇರ'ರ ಕೋಲವನ್ನೇ ಮುಖ್ಯವಾಗಿ ನಡೆಸುತ್ತಾರೆ. ಜೊತೆಯಲ್ಲಿ ಪಂಜುರ್ಲಿ, ಗುಳಿಗ ಮುಂತಾದ ಪುರಾತನ 'ದೆಯ್ಯೊಗಳನ್ನು ಆರಾಧಿಸುವುದಿದೆ. ಕೋಪಾಳ(ನಲ್ಕೆದಾಯ ಅಥವಾ ಅಜಲಾಯ) ವರ್ಗದವರು ಈ ಕೋಲವನ್ನು ಕಟ್ಟುತ್ತಾರೆ. ಕೆಲವೆಡೆ ಮೂಕಾಂಬಿಗುಳಿಗನ ಆರಾಧನೆಯೂ ರೂಢಿಯಲ್ಲಿದೆ.

ಆದಿದ್ರಾವಿಡರ ಆದಿಯ ಕೋಲ 'ಗುಳಿಗ' ಕೋಲ. ಕಾಡುಗುಡ್ಡದ ಗುಳಿಗಳಲ್ಲಿ ಯಾವುದೋ ಅಗೋಚರ ಶಕ್ತಿಯನ್ನು ಕಂಡು ಹೆದರಿದ ದ್ರಾವಿಡರು ಆ ಶಕ್ತಿಯ ಸಂಪ್ರೀತಿಗಾಗಿ ಆಚರಿಸಿಕೊಂಡು ಬಂದ ಮೊದಲ ಕೋಲವೇ ಗುಳಿಗನ ಕೋಲ, ಗುಳಿಗನನ್ನು ಮಲೆಯಾಳದಲ್ಲಿ 'ಕುಳಿಯನ್' ಎನ್ನುತ್ತಾರೆ. ಇಲ್ಲಿಯೂ ಕುಳಿ ಎಂಬ ಮೂಲಪದವು 'ಗುಳಿಗೆ ಸಮಾನಾರ್ಥಕವಾಗಿದೆ.

ಭೂತಾರಾಧಕರ ನಂಬಿಕೆಯ ಪ್ರಕಾರ ಗುಳಿಗನೆಂದರೆ ಒಮದು ಸ್ಥಳದೇವತೆ–ರಕ್ಷಣೆಯ ದೇವತೆ. ಆಯಾ ಸ್ಥಳದ ರಕ್ಷಣೆ ಆಯಾ ಪ್ರದೇಶದ ಗುಳಿಗನ ಹೊಣೆ. ಕಾಸರಗೋಡು ಪರಿಸರದಲ್ಲಿ ತುಳುವಿನ ಗುಳಿಗ ಮತ್ತು ಮಲೆಯಾಳದ ಕುಳಿಯ – ಎರಡು ದೆಯ್ಯೊಗಳ ಆರಾಧನೆಯು ಜರಗುತ್ತದೆ. ಕುಳಿಯನನ್ನು ಮಲೆಯರೂ, ಗುಳಿಗನನ್ನು ಕೋಪಾಳರೂ ಕಟ್ಟುತ್ತಾರೆ.

ತೆಯ್ಯಂಗಳು ಕಣ್ಣಾನೂರಿನಿಂದ ಉತ್ತರ ಹಾಗೂ ಕಾಸರಗೋಡಿನಿಂದ ದಕ್ಷಿಣ ಭಾಗಗಳಲ್ಲಿ ಪ್ರಸಿದ್ಧವಾಗಿದ್ದರೆ, ದೆಯ್ಯೊಗಳು ತುಳುನಾಡಿನಲ್ಲಿ ಮಾತ್ರ ಪ್ರಸಿದ್ಧವಾಗಿವೆ. ಕಾಸರಗೋಡು ತುಳುನಾಡಿನ ದಕ್ಷಿಣ ಗಡಿಯಾದುದರಿಂದ ಹಾಗೂ ಕೇರಳದ ಉತ್ತರ ಗಡಿಯಾದುದರಿಂದ ಇಲ್ಲಿ 'ತೆಯ್ಯಂ'ಗಳೂ, 'ದೆಯ್ಯೊ'ಗಳೂ ಎರಡೂ ಬಳಕೆಯಲ್ಲಿವೆ. ಇವೆರಡೂ ವಿಭಿನ್ನ ಪರಿಸರಗಳಲ್ಲಿ ಬೆಳೆದು ಬಂದಿವೆಯಾದ್ದರಿಂದ ಪರಸ್ಪರ ಪ್ರಭಾವಿತವಾಗದೆ ಇಂದಿನವರೆಗೂ ತಮ್ಮತನವನ್ನು ಸಾಧ್ಯವಿದ್ದಷ್ಟೂ ಉಳಿಸಿಕೊಂಡು ಬಂದಿರುವುದು ಆಯಾ ಭೂತಾರಾಧಕರ ಹಾಗೂ ಭೂತ ಪ್ರಾತ್ರಿಗಳ ಶ್ರದ್ಧೆಯ ಸಂಕೇತವೆನ್ನಬಹುದು.

ತೆಯ್ಯಗಳಿಗೂ ದೆಯ್ಯೋಗಳಿಗೂ ಆ ಸೀಮೆಯ ಅರಸರ ಪ್ರೋತ್ಸಾಹವಿತ್ತು. ಚಿರಯ್ಕಲ್ ಮಹಾರಾಜರು 'ತೆಯ್ಯಂ' ಉಪಾಸನೆಗೆ ಹೆಚ್ಚು ಮಹತ್ವ ಕೊಟ್ಟರು. ಅವರು ಭೂತ ಕಟ್ಟುವ ಪಾತ್ರಿಗಳಿಗೆ ಬೆಳ್ಳಿಯ ಬಳೆ, ಬಂಗಾರದ ಬಳೆ ಮತ್ತು ಬಿರುದುಗಳನ್ನಿತ್ತು ಮನ್ನಿಸುತ್ತಿದ್ದುದಾಗಿ ಚರಿತ್ರೆಗಳಿಂದ ತಿಳಿದುಬರುತ್ತದೆ.

ಕೇರಳದ ಮಲಬಾರಿನಲ್ಲಿ ಮಲಯರು, ವಣ್ಣಾನರು (ನೆಕ್ಕಾರರು) ಪಾಣನ್ ಮುನ್ನೂಟ್ಟನ್, ಅಂಞೂಟ್ಟಾನ್ ಎಂಬೀ ನಾಲ್ಕು ವರ್ಗದವರು ಭೂತ ಕಟ್ಟುವವರು ಎಂದು ಇದ್ದರೂ, ಈಗ ಮಲಯರು ಮತ್ತು ವಣ್ಣಾನರು ಮಾತ್ರ ಈ ವೃತ್ತಿಯಲ್ಲಿ ನಿರತರಾದುದು ಕಂಡುಬರುತ್ತದೆ. 'ದೆಯ್ಯೊ'ಗಳ ಆರಾಧನೆಯಷ್ಟೇ 'ತೆಯ್ಯ'ಗಳ ಆರಾಧನೆಯೂ ವೈವಿಧ್ಯಮಯವಾಗಿದೆ. ಗತಿಸಿಹೋದ ವೀರಪುರುಷರೂ ಸ್ತ್ರೀಯರೂ ಇಲ್ಲಿ

ತೆಯ್ಯಗಳಾಗುತ್ತಾರೆ. ಪುರಾಣದ ದೇವತೆಗಳೂ 'ತೆಯ್ಯಂ'ಗಳಾಗುತ್ತಾರೆ. ಪ್ರತಿಯೊಂದು ತೆಯ್ಯದ ಹಿನ್ನೆಲೆಯಲ್ಲಿಯೂ ಅದ್ಭುತರಮ್ಯವಾದ ಕತೆಗಳ ಸರಮಾಲೆ ಇರುತ್ತದೆ. ಈ ದೃಷ್ಟಿಯಲ್ಲಿ ತುಳು ಮತ್ತು ಮಲಯಾಳ ಎರಡೂ ಸಂಸ್ಕೃತಿಗಳ ಬೆನ್ನುಹುರಿ ಒಂದೇ ಆಗಿದೆ. ತೆಯ್ಯವಾಗಲಿ ಭೂತವಾಗಲಿ ಅತಿಮಾನವತೆಯ ಸಂಕೇತ.

ಕಾಸರಗೋಡು ಪರಿಸರದಲ್ಲಿ ಉಳ್ಳಾಕುಲು (ಪೂಮಾಣಿ, ಕಿನ್ನಿಮಾಣಿ) ಕೋಟಿ ಚೆನ್ನಯ, ಪೆಲಡ್ಕತ್ತಾಯ, ಬೀರಣ್ಣಾಳ್ವ, ಐವೆರ್ ದೆಯ್ಯೊಂಕುಳು (ದುರ್ಗಾಲಾಯಿ, ಮುಂಡಲ್ತಾಯಿ, ಬಂಟ (ಪೊಟ್ಟ) ಭೂತೊ, ಪಿಲಿಚ್ಚಾಮುಂಡಿ, ಧೂಮಾವತಿ), ಕೋಟೆತಬಬ್ಬು, ಕೋಮಾರ್ಡಿ (ನೇಲ್ಯಭೂತೊ) ಬಬ್ಬರಿಯ, ಜಟಾಧಾರಿ, ಕೊರಗಚನಿಯೆ, ಅಂಗಣತ್ತಾಯೆ, ಪಂಜುರ್ಲಿ, ವರ್ನರೆ ಪಂಜುರ್ಲಿ, ಕಾಜು, ಕಲ್ಲುರ್ಟಿ, ಕಲ್ಕುಡ, ಕೊರವೆ, ಕೊರತ್ತಿ, ಕೋಲ್ ಭಂಡಾರಿ, ಸೂಟೆ ಮಾಂಕಾಳಿ, ದೆಯ್ಯಾರ್ ಮೂಕಾಂಬಿ, ಗುಳಿಗೆ, ಮಲೆಚ್ಚಾಮುಂಡಿ, ಮಲರಾಯ, ಅರಸು ಮಂಜಿಷ್ಣಾರ್, ಉಳ್ಳಾಳ್ತಿ, ನಂದಿಗೋಣೆ ಮುಂತಾದ ತುಳುವ ಭೂತಗಳು ಪ್ರಸಿದ್ಧವಾಗಿವೆ. ಬೀರಣ್ಣಾಳ್ವ – ಮಲೆರಾಯ – ಪಂಜುರ್ಲಿ ಭೂತಗಳ ಹೆಸರು ಪುರುಷಭೂತಗಳಂತೆ ಇದ್ದರೂ, ಪೌರಾಣಿಕ ವಾರಾಹೀಶಕ್ತಿಯನ್ನು ಪ್ರತಿಬಿಂಬಿಸುವ ಈ ಭೂತಗಳ ವೇಷವಿಧಾನಗಳು ಸ್ತ್ರೀರೂಪವನ್ನು ವ್ಯಕ್ತಪಡಿಸುತ್ತವೆ. ಇಲ್ಲಿಯ ಧೂಮಾವತಿಯಂತೂ ನಾನಾ ರೂಪಧಾರಿಣಿ. ಪುತ್ಯೆ ಧೂಮಾವತಿ, ಪಡ್ಡೈ ಧೂಮಾವತಿ, ಪಳ್ಳ ಧೂಮಾವತಿ, ಚುಳ್ಳಿ ಧೂಮಾವತಿ, ಬಂಟ ಧೂಮಾವತಿ, ಪೊಂಜಕಳ ಜುಮಾದಿ, ಜೆಡೆಕಲ್ಲು ಧೂಮಾವತಿ, ಅಮ್ಮಂಗಲ್ಲು ಧೂಮಾವತಿ – ಹೀಗೆ ಬೇರೆ ಬೇರೆ ಹೆಸರಿನ ಕೋಲಗಳ ಮೂಲಕ ಆಕೆ ಆರಾಧಿಸಲ್ಪಡುತ್ತಾಳೆ. ಈ ಎಲ್ಲಾ ತುಳು ದೆಯ್ಯಗಳ ಪಾತ್ರಿಗಳು ಕೋಪಾಳರು, ನಲ್ಕೆದಾಯ ಅಥವಾ ಅಜಲಾಯರು, ಪಂಬದರು ಮತ್ತು ಪರವರಾಗಿದ್ದಾರೆ. ಮಲಯರು ಮತ್ತು ವಣ್ಣಾನವರು (ನೆಕ್ಕಾರರು) ಕಟ್ಟುವ ತೆಯ್ಯಗಳಲ್ಲಿ ವಿಷ್ಣುಮೂರ್ತಿ, ರಕ್ತೇಶ್ವರಿ, ರಕ್ತಚಾಮುಂಡಿ, ಗುಳಿಗ, ಕಾನಾದಿಗ ರಕ್ತೇಶ್ವರಿ, ವೆಳ್ಳಾಟ್ಟಂ, ಪೈಂಗುಟ್ಟಿ, ಆಲಿಚ್ಚಾಮುಂಡಿ, ತಂಬ್ರಾಟಿ ಭಗವತಿ, ಪುಳ್ಳಿಕರಿಂಗಾಳಿ, ಪುಳ್ಳೂರಾಳಿ, ಕಾಳಪುಲಿಯನ್, ಪುಲಿಕ್ಕಂಡನ್, ತೊಂಡಚ್ಚನ್ (ವಯನಾಡ್ ಕುಲವನ್), ಕರಿಂದಿರಿ ನಾಯರ್ ಮುಂತಾದುವು ಪ್ರಸಿದ್ಧವಾಗಿವೆ.

ಜಾತೀಯ ಭಾವನೆಗಳನ್ನು ಬದಿಗಿರಿಸಿ, ಎಲ್ಲರೂ ಒಂದಾಗಿ ಆರಾಧಿಸುವ ಏಕೈಕ ಸಂಸ್ಕೃತಿಯೆಂದರೆ ತುಳುನಾಡಿನ ಹಾಗೂ ಕೇರಳದ ಭೂತಾರಾಧನೆ, ಎಲ್ಲರಿಗೂ ಇಲ್ಲಿ ಅವಕಾಶವಿದೆ, ಅಧಿಕಾರವಿದೆ, ಸೇವಾ ಸೌಲಭ್ಯಗಳಿವೆ. ನಮ್ಮ ಪ್ರಾಚೀನ ಜನಪದರ ಭಾವೈಕ್ಯದ ಕಲ್ಪನೆಗೆ ಇವು ಜೀವಂತ ಸಾಕ್ಷಿಗಳು.

**ಹೆಚ್ಚಿನ ಓದಿಗೆ**

ಜನಪದ ಗೀತಾಂಜಲಿ – ದೇ. ಜವರೇಗೌಡ
ಭೂತಾರಾಧನೆ – ಡಾ. ಚಿನ್ನಪ್ಪ ಗೌಡ
ಜಾನಪದ ಅಧ್ಯಯನ – ದೇ. ಜವರೇಗೌಡ
ಜಾನಪದ ಸ್ವರೂಪ – ಹಾ.ಮಾ. ನಾಯಕ
ತುಳು ಪಾಡ್ದನ ಸಂಪುಟ – ಅಮೃತ ಸೋಮೇಶ್ವರ

* * *